Budget Estimates for 1971-72 General Disscusion

Mr. SPEAKER.—We shall proceed to the next item. Before we proceed I would like to suggest to the members that there should be a sort of self-restraint regarding the utilisation of time.

Sri H. M. CHANNABASAPPA(Periyapatna).—I draw your attention to one important factor and that is according to rule 298 when the Speaker is on his legs, the House should keep silence and nobody should get up. Something contrary had happened yesterday. Sir, when the Hon. Minister for Finance got up to speak, the Hon. Speaker was standing all the while. In addition to this a number of members were on the dais and this fact has appeared in the Press and gone into the proceedings. When the Hon. Speaker is on his legs, the Hon. Finance Minister laid the Budget. When it is done when the Hon. Speaker was on his legs, it is not valid and cannot deemed to have been the part of the proceedings of this House.

In this context, I invite reference to Rule No. 162, which reads :

"The Budget shall be dealt with by the Assembly in two stages, namely :—

(i) a general discussion ; and
(ii) the voting of demands for grant"

If a discussion is to take place, firstly the Budget must have been constitutionally presented before this House. Without that there can be no discussion on the Budget. In view of the fact that the Speaker all the while standing right from the beginning to the end, whatever has happened and whoever has spoken from the time when you were on your legs, cannot form part of the proceedings of this House ; and hence even if it has gone, it is illegal and invalid. Therefore, I humbly submit that any general discussion on the Budget at this stage, when the Budget itself cannot be deemed to have been presented in the context of what has happened, will not be correct ; it will be violating the Rules of Procedure. You are the custodian of the Rules of procedure. Moreover you have always been saying that the Rules of Procedure must be upheld. and the principles of demoracy must be upheld. You are always anxious of opposing everything we say. It also looks as if you have preplanned for giving a ruling. It is up to you to give the ruling. You may say : I have suspended the Rule now to have effect from yesterday. Anything is possible with you. It is a different matter.

Mr. SPEAKER.—The hon. Member suggests that nothing is possible by the Chair.

Sri H. M. CHANNABASAPPA.—I am sorry you are offended.

Mr. SPEAKER.—The hon. Member is blowing hot and cold in the same breath.

Sri H. M. CHANNABASAPPA.—Therefore, I beg to submit that it would be better not to Proceed on the discussion of the Budget while the Budget itself cannot be deemed to have been pretented in the light of the fact that you were standing all the while and all the proceedings that took place till you were on your legs is not valid in law.

Mr. SPEAKER.—I have heard the hon. Member very intently and very attentively. I am grateful to him for his solicitude and anxiety for maintaining the dignty of this House and its Presiding Officer. But I do not know why this contention was not raised at the appropriate time.

Sri V. N. PATIL.—It was raised several times but you were not prepared to hear us.

Mr. SPEAKER.—What Sri Patil is doing now is breach of the rules. While the ruling is given, no Member should interrupt. When I am giving a ruling, it has to be listened.

Sri B. B. SAYANAK.—I rise to a point of order. When the Speaker is standing, the Ministers are walking. Is it the way of observing the discipline of the House ?

Sri V. N. PATIL.—You suspend every Rule.

Mr. SPEAKER.—The hon. Member is the first to offend the rules by rising in his seats. When I was giving a ruling am unable to under stand why the hon. Member as also Sri H. M. Channabasappa are still standing. I understand the enthusiasm of the hon. Members to uphold the rules. I do not say anything by way of comment on anybody. The very hon. members who are standing now were doing things yesterday which were inconsistent with the rules of procedure of the House. Had the hon. Member Sri Channabasappa taken any objection at the appropriate time, I would have certainly directed the Hon. Finance Minister to resume his seat. In so far as I am concerned, I do not make any distinction between this side and that side. I cannot depend upon my memory and the point cannot be varified from record either. It is a matter which should be found out by carrying on an enquiry, which is not going to benefit anybody. Moreover it will bring out many other unplesant things.

Any way after taking into consideration all the pros and cons, I have declared that the Budget was properly presented and I stand by that decision. I hold that the Budget is properly presented and there is no difficulty for proceeding with the general discussion on the Budget. Sri Siddaveerappa may now speak.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಸದಸ್ಯರು ತಮ್ಮ ಗಮನಕ್ಕೆ ಏನೂ ತಾರದೆ, ನಿಂತುಕೊಂಡರೆ, ಅದು ತಪ್ಪು ಎಂದು ನೀವು ತಿಳಿದುಕೊಳ್ಳುವುದಿಲ್ಲವೆ ?

Mr. SPEAKER.—Unfortunately things are not happening in the normal way. Hon. Members came and surrounded me. Some members acted in a way inconsistent with the dignity of the House. I quite

understand the anxiety of the hon. Members and appreciate it. At least from now onwards, let us do things in a manner befiting the dignity and decency of the House.

ಶ್ರೀ ಕೆ. ಎಚ್. ರಂಗನಾಥ.—ಪತ್ರಿಕೆಯಲ್ಲಿ ಮೂರು ಸಾರಿ ಬಜೆಟನ್ನು ಆರ್ಥಿಕ ಮಂತ್ರಿಯವರು ಮಂಡನೆ ಮಾಡಿದರು ಎಂದು ಬಂದಿದೆ, ಅದರಲ್ಲಿ ಯಾವುದು ಸರಿ ಎಂದು ಹೇಳುತ್ತೀರಾ ?

† ಶ್ರೀ ಎಚ್. ಸಿದ್ದವೀರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಮುನ್ನ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಿನ್ನೆಯ ದಿವಸ ನಡೆದ ಘಟನೆಯ ವಿಚಾರದಲ್ಲಿ ಈಗಾಗಲೇ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು ಕ್ರಿಯಾಲೋಪ ಎತ್ತಿ ಹೇಳಿದ್ದಾರೆ. ನನಗಾದರೂ ಅನಿಸುತ್ತದೆ ಏನೆಂದರೆ, ನಮ್ಮಲ್ಲಿ ಕೆಲವರಿಗೆ ಸುಮಾರು 40 ವರ್ಷಗಳ ಅನುಭವ ಈ ವಿಧಾನ ಸಭೆಯಲ್ಲಿ ಇದೆ ಮತ್ತು ಕೆಲವರಿಗೆ ಹಿಂದೆ ಇದ್ದಂತಹ ಪ್ರಜಾಪ್ರತಿನಿಧಿ ಸಭೆಯ ಅನುಭವವೂ ಇದೆ. ಈ ರೀತಿಯ ಅನುಭವ ಇದ್ದವರು ಆ ಕಡೆಯೂ ಇದ್ದಾರೆ, ಈ ಕಡೆಯೂ ಇದ್ದಾರೆ. ನಿನ್ನೆಯ ದಿವಸ ಏನು ಘಟನೆ ನಡೆಯಿತು ಎನ್ನುವುದರ ಬಗ್ಗೆ ನಾವು ಈ ದೇಶದ ಮುಂದೆ ಮತ್ತು ದೇಶದ ಜನತೆಯ ಮುಂದೆ, ಅದರ ನೈಜ ಸ್ವರೂಪವನ್ನು ಇಡಬೇಕಾದುದು ಅತ್ಯಾವಶ್ಯಕ. ತಮಗೆಲ್ಲಾ ಗೊತ್ತಿರುವ ಹಾಗೆ ಹಿಂದೆಂದೂ ನಡೆಯದ ರೀತಿ ನಿನ್ನೆ ದಿವಸ ಈ ಬಡ್ಜೆಟ್ ಅಧಿವೇಶನದ ಸಭೆಯನ್ನು ಕರೆದ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಕುಪಿತರಾಗಿ ಇಂಥಾದ್ದು ನಡೆಯಬಾರದೆಂಬ ವಿಚಾರದಿಂದ ಬಹುಶಃ ಉದ್ವೇಗದಿಂದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಾನು ತಮಗೆ ಅರಿಕೆಮಾಡಿಕೊಂಡೆ. ಅದೇ ರೀತಿಯಾಗಿ ಸರ್ಕಾರಕ್ಕೂ ಅರಿಕೆಮಾಡಿಕೊಂಡೆ. ಈ ಸಭೆಯು ಉದ್ವೇಗದಲ್ಲಿದೆಯೆಂದು. ಈ ದಿವಸ ಕಾರ್ಯಕ್ರಮವನ್ನು ದಯಮಾಡಿ ನಿಲ್ಲಿಸಿ, ನಾಳೆಯ ದಿವಸ ಶಾಂತ ವಾತಾವರಣದಲ್ಲಿ ಇದನ್ನು ವಿಚಾರಮಾಡೋಣ. ಈ ಸಂದರ್ಭದಲ್ಲಿ ನಿಮಗೆ ಸರ್ಕಾರ ನಡೆಸುವುದು ಎಷ್ಟು ಕಷ್ಟವೆಂಬುದು ನನಗೆ ಅನುಭವ ಇದೆ. ಒಂದು ತಿಂಗಳ ಮುಂಗಡ ಬಜೆಟ್ಟನ್ನು ಮಂಜೂರು ಮಾಡುವುದಕ್ಕೆ ನಾವು ಸಮ್ಮತಿಯನ್ನು ಕೊಡುತ್ತೇವೆಂದು ಹೇಳಿದರೂ ನಮ್ಮ ಮಾತಿಗೆ ಗಮನ ಕೊಡದೆ, ಸಭಾನಾಯಕರು ಮತ್ತು ತಾವೂ ಸಹ ಹಠಮಾಡಿ ವಿರೋಧಪಕ್ಷದವರ ಮನಸ್ಸಿನ ಉದ್ವೇಗವನ್ನು ಕಡೆಗಣಿಸಿ, ತಾವು ನಿನ್ನೆ ಆ ರೀತಿಯಾಗಿ ಸಭಾಕಾರ್ಯಕಲಾಪಗಳನ್ನು ನಡೆಸಿದುದರಿಂದಲೇ ಅನೇಕ ರೀತಿಯ ಘಟನೆಗಳು ಕೆಲವು ಉದ್ವೇಗದ ವಾತಾವರಣದಲ್ಲಿ ನಡೆದು ಹೋದುವು. ಈ ಸಭೆಯ ಗೌರವ ಮತ್ತು ಈ ಸಭೆಯಲ್ಲಿರತಕ್ಕ ಗಾಂಭೀರ್ಯವನ್ನು ಕಾಪಾಡುವುದರಲ್ಲಿ ನಾವು ಯಾರಿಗೂ ಹಿಂದೆ ಇರುವುದಿಲ್ಲ. ಆದರೆ ನಿನ್ನೆ ನಡೆದಂಥ ಕಹಿವಾತಾವರಣಕ್ಕೆ ನೀವು ಮತ್ತು ಸಭಾನಾಯಕರು ಅನುಸರಿಸಿದ ಅನುಚಿತ ನೀತಿಯೇ ಕಾರಣವೆಂದು ಹೇಳಬೇಕಾಗಿದೆ. ಕ್ಷಮಿಸಬೇಕು. ಈ ಸಮಯದಲ್ಲಿ ಆ ರೀತಿ ಹೇಳದೆ ಬೇರೆ ಗತಿ ಇಲ್ಲ. ಆ ರೀತಿಯಾಗಿ ಅನಿವಾರ್ಯವಾಗಿ ಹೇಳಬೇಕಾಗಿದೆ. ಇದರಿಂದ ಈ ದೇಶದಲ್ಲಿ ಒಂದು ವಾತಾವರಣ ಬರಬಹುದು. ನಮ್ಮ ಪಕ್ಷಕ್ಕೆ ನೂರಕ್ಕೆ ನೂರು ಜನ ಅಂದರೆ ಈ ದೇಶದ ಇಡೀ ಜನ ಈ ಪಕ್ಷದಲ್ಲಿ ಮಹತರ ವಿಶ್ವಾಸವನ್ನು ವ್ಯಕ್ತಪಡಿಸಿರುವಾಗ ಏನು ಈ ರೀತಿ ನಡೆಯಿತು ಈ ದೇಶದಲ್ಲಿ ಎಂದು ತಿಳಿದುಕೊಂಡರೆ ಅದಕ್ಕೆ ಕಾರಣರು ನಾವಲ್ಲ, ನೀವು ಎಂಬುದಾಗಿ ನಾನು ಈ ಸಮಯದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ತಾವು ಇನ್ನುಮುಂದೆ ಇಂತಹ ಕಹಿ ಪ್ರಸಂಗ ನಡೆಯದ ಹಾಗೆ ನೋಡಿಕೊಳ್ಳಬೇಕು. ವಿರೋಧಪಕ್ಷದಲ್ಲಿ ಇವತ್ತು ನಾವು ಕುಳಿತಿರಬಹುದು, ನಾಳೆ ಇನ್ನೊಬ್ಬರು ಕುಳಿತಿರಬಹುದು. ಈ ಸಭೆಯ ಕಾರ್ಯಕಲಾಪಗಳು ಆಡಳಿತ ಪಕ್ಷದವರಿಗೆ ಎಷ್ಟು ಮುಖ್ಯವೋ ವಿರೋಧಪಕ್ಷದವರಿಗೂ ಅಷ್ಟೇ ಮುಖ್ಯ. ನಮ್ಮನ್ನು ಬೇರೆ ರೀತಿಯಲ್ಲಿ ನೋಡುತ್ತೇನೆಂದರೆ ಅದು ಸರಿಯಲ್ಲ. ತಪ್ಪುಮಾಡಿದಮೇಲೆ ತಪ್ಪುಮಾಡಿದ್ದೇನೆಂದು ಒಪ್ಪಿಕೊಳ್ಳಬೇಕು. ಇಂಥಾದ್ದು ಮುಂದೆ ಆಗಬಾರದು. ಏನೋ ಪ್ರಸಂಗನಡೆಯಿತು. ಇದು ಪ್ರಿಸಿಡೆಂಟ್ ಆಗುವುದು ಬೇಡ. ನಾವು ಮಾಡಿರುವುದೇ ರೈಟ್, ನಾವು ಹಾಡಿದ್ದೇರಾಗ, ನಾವು ಉಗುಳಿದ್ದೇ ಸರಿ ಎಂದು ಹೇಳುವುದು ಸರಿಯಲ್ಲ. ಸದ್ಯಕ್ಕೆ ಅದನ್ನು ಇಲ್ಲಿಗೇ ನಿಲ್ಲಿಸಬೇಕೆಂದು ನನ್ನ ಅರಿಕೆ. ನಾನು ಈ ಸಭೆಯ ಮುಂದೆ ಈಗ ಯಾವ ವಿಚಾರದಲ್ಲಿ ಮಾತನಾಡಬೇಕೆಂಬುದು ಬಹಳ ಮುಖ್ಯವಾದ ವಿಷಯ. ನಿನ್ನೆಯೇ ತಮಗೆ ಅರಿಕೆಮಾಡಿಕೊಂಡಿದ್ದೇನೆ, ಈ ಸಭೆಯಲ್ಲಿ ಬಡ್ಜೆಟ್ ಮಂಡಿತವಾಗಿಲ್ಲವೆಂದು. ಅದು ನನ್ನ ಖಚಿತವಾದ ಅಭಿಪ್ರಾಯ. ಈ ಬಡ್ಜೆಟ್ ನಿನ್ನೆ ಮಂಡಿತವಾಗಿದ್ದರೆ, ಅದು ಕಾನೂನು ರೂಪವಾಗಿ ಮಂಡಿತವಾಗಬೇಕಾಗಿತ್ತು. ಆ ರೀತಿ ಆಗದೆ ಸುಮ್ಮನೆ ದೇವಸ್ಥಾನದಲ್ಲಿ ಶಾಸ್ತ್ರ ಹೇಳುವಾಗ ವಾಲಗ ಊದುವ ಹಾಗೆ ಮತ್ತು ಒಂದು ಮದುವೆಯಾಗುವಾಗ ತಾಳಿ ಕಟ್ಟುವ ಸಮಯದಲ್ಲಿ ಡೋಲ್ ಹೊಡೆಯುವ ಹಾಗೆ ಆ ಒಂದು ಲೆಕ್ಕಾಚಾರದಲ್ಲಿ ನೀವು ಅದನ್ನು ಇಲ್ಲಿ

(ಶ್ರೀ ಎಚ್. ಸಿದ್ದವೀರಪ್ಪ)

ಮಂಡಿಸಿದ್ದೀರಿ. ಇದರಿಂದ ನಿಮ್ಮ ಬಜೆಟ್ ಯಾವರೀತಿ ಇದೆಯೆಂದು ಹೇಳುವುದಕ್ಕೇ ನನಗೆ ವ್ಯಸನವಾಗುತ್ತವೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಕೊನೆಯ ಬಜೆಟ್ ಈ ರೀತಿ ಪರ್ಯವಸಾನವಾಯಿತಲ್ಲಾ, ಈ ರೀತಿ ಗೋಳು ಆಯಿತಲ್ಲಾ ಎಂದು ನಾನು ಹೇಳಬೇಕಾಗಿದೆ. ಆದ್ದರಿಂದ ನೀವು ಮಂಡಿಸಿರುವ ಬಜೆಟ್ಟನ್ನು ನಾನು ಬಜೆಟ್ ಎಂದು ಪರಿಗಣಿಸುವುದಿಲ್ಲ. ಬಜೆಟ್ ಭಾಷಣ ಮಾಡುವುದಕ್ಕೂ ಹೋಗುವುದಿಲ್ಲ. ಅವರು ಕೊಟ್ಟಿರುವ ಹೊತ್ತಿಗೆಗಳನ್ನು ಪ್ರಿಂಟ್ ಮಾಡಿಸುವುದಕ್ಕೆ ಟನ್ನುಗಳಗಟ್ಟಲೆ ಕಾಗದ ಬೇಕು. ಸಾಮಾನ್ಯವಾಗಿ ಒಂದು ವರ್ಷದ ಬಜೆಟ್ ಪ್ರಿಪೇರ್ ಮಾಡಬೇಕಾದರೆ ಕನಿಷ್ಠ ಪಕ್ಷ ಆರು ತಿಂಗಳುಗಳಾದರೂ ಬೇಕು ಅಥವಾ ಸುಮಾರು 9 ತಿಂಗಳುಗಳಾದರೂ ಬೇಕು. ತಾವು ಬೇಕಾದರೆ ಪರೀಕ್ಷೆಮಾಡಿ. ತಾವು ಈ ದೇಶದಲ್ಲಿ ನಡೆಯತಕ್ಕ ಆಗುಹೋಗುಗಳನ್ನು ನೋಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡು ಅಂತಹ ಪವಿತ್ರವಾದ ಪೀಠದಲ್ಲಿ ಕೂತುಕೊಳ್ಳುತ್ತೀರಿ. ನಾವು 1962ನೇ ಇಸವಿಯಿಂದ ಈ ಸಭೆಯ ಸದಸ್ಯರಾಗಿ ಬಂದಮೇಲೆ. ಎಷ್ಟು ಬಜೆಟ್‌ಗಳನ್ನು ಮಂಡಿಸಿದ್ದಾರೆಂಬುದು ಗೊತ್ತು. ಆ ಬಜೆಟ್ಟಿನ ಪವಿತ್ರತೆಯನ್ನು ಕಾಪಾಡಿಕೊಂಡಿದ್ದೇವೆ. ಕಾರ್ಯಕ್ರಮಗಳನ್ನು ಬಜೆಟ್ಟಿನಲ್ಲಿ ಏನೋ ಹಾಕುತ್ತಾರೆ. ಅವನ್ನು ಇವರು ಇಲ್ಲಿಯವರೆಗೂ ಮಾಡುತ್ತಾ ಇಲ್ಲ. ಒಂದನ್ನೇನೋ ಮಾಡುತ್ತಾರೆ. ಅದು ಇವರು ಸರಿಯಾಗಿ ಸಂಬಳ ತೆಗೆದುಕೊಳುತ್ತಾರೆ, ನಮಗೂ ತಿಂಗಳಿಗೆ 400 ರೂಪಾಯಿಗಳಂತೆ ಕೊಡುತ್ತಾರೆ ಮತ್ತು ಅಧಿಕಾರಿಗಳಿಗೂ ಸಂಬಳ ಕೊಡುವುದಾಗಿದೆ. ಅದರೆ ಡೆವಲಪ್‌ಮೆಂಟಲ್ ವರ್ಕ್‌ಗಳಿಗೆ ಮತ್ತು ಬಾಕಿ ಕಾರ್ಯಕ್ರಮಗಳಿಗೆ ಏನು ದುಡ್ಡು ಕೊಟ್ಟಿರುತ್ತಾರೋ ಅದು ಬರೀ ಜೊಳ್ಳುಆಗಿದೆ. ನಿಜವಾಗಿ ಆ ಕಾರ್ಯಕ್ರಮಗಳನ್ನು ಯಾವುದನ್ನೂ ಮಾಡಲಿಲ್ಲ. 16 ವರ್ಷಗಳಲ್ಲಿ ಕರ್ಣಾಟಕ ಏಕೀಕರಣವಾದಮೇಲೆ 1956ನೇ ನವಂಬರ್ 1ನೇ ತಾರೀಖಿನಿಂದ ಇಲ್ಲಿಯವರೆಗೂ ಸರಾಸರಿ ವರ್ಷಕ್ಕೆ 250 ಕೋಟಿ ರೂಪಾಯಿಗಳ ಅಂದರೆ 16 ವರ್ಷಗಳಿಗೆ 4 ಸಾವಿರ ಕೋಟಿ ರೂಪಾಯಿಗಳನ್ನು ಇವರ ಕೈಲಿ ಕೊಟ್ಟಿದ್ದೇವೆ. ಏನಾಯಿತು? ಇನ್ನು ಇವರು ಮಾಡಿರುವ ಸಾಲಸೋಲಗಳನ್ನು ನೋಡಿದರೆ, ಕೇಂದ್ರಸರ್ಕಾರದಲ್ಲಿ ಎಷ್ಟು ಸಾಲಮಾಡಿದ್ದಾರೆಂದು ನೋಡಿದರೆ ಅದರ ಪ್ರಕಾರ 340–350 ಕೋಟಿ ರೂಪಾಯಿಗಳಷ್ಟು ಸಾಲ ಈಗ ಕೊಡಬೇಕು. ಮುಂದೆ ಇನ್ನೆಷ್ಟು ಲೆಕ್ಕ ಬರುತ್ತದೋ ಗೊತ್ತಿಲ್ಲ. ಅದೂ ಅಲ್ಲದೆ ಪಬ್ಲಿಕ್ ಡೆಟ್ಸ್ ಬೇರೆ ರೈಜ್ ಮಾಡಿದ್ದಾರೆ. ಈ ಸಾಲಸೋಲಗಳು ಮತ್ತು ನಾವು ಕೊಟ್ಟಿದ್ದು ಇದೆಲ್ಲವನ್ನೂ ತೆಗೆದುಕೊಂಡು ಲೆಕ್ಕ ಹಾಕಿದರೆ ಎಷ್ಟು ಕೋಟಿ ರೂಪಾಯಿಗಳು ಇವರ ಕೈಲಿ ಸಿಕ್ಕಿದೆಯೆಂದರೆ 16 ವರ್ಷಗಳಲ್ಲಿ 5 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಇವರ ಕೈಲಿ ಸಿಕ್ಕಿದೆ. ಅಷ್ಟೇ ಅಲ್ಲ. ಸಾಲದ್ದಕ್ಕೆ 13 ಅಥವಾ 14 ಕೋಟಿ ರೂಪಾಯಿಗಳಷ್ಟು ಬಡ್ಡಿ ಕೊಡುತ್ತಿದ್ದಾರೆ. ಸಾರ್ವಜನಿಕ ಸೌಕರ್ಯಕ್ಕಾಗಿ ಇವರು ದುಡ್ಡನ್ನು ಯಾವ ರೀತಿ ಖರ್ಚುಮಾಡಿದ್ದಾರೆ, ಯಾವರೀತಿ ವ್ಯಯಮಾಡಿದ್ದಾರೆ, ಸಾರ್ವಜನಿಕರ ಹಣದ ಟ್ರಸ್ಟಿಯವರಿಂದ ಏನೇನು ಮಾಡಿದ್ದಾರೆಂಬ ಬಗ್ಗೆ ಒಂದು ಪರ್‌ಫಾರ್‌ಮೆನ್ಸ್ ಬಜೆಟ್ಟನ್ನು ನಮ್ಮ ಮುಂದೆ ಇಡಲಿ. ಅದನ್ನು ನೀವು ಹೋಗುವ ಕಾಲದಲ್ಲಾದರೂ ಇಡಿ. ನೀವು ಏನು ಮಾಡಿದ್ದೀರಿ ಎಂಬುದನ್ನು ಜನತೆ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಇಟ್ಟರೆ ಆಗ ನಾವು ಏನಾದರೂ ಹೇಳಬಹುದು. ಆಗ ನಿಮ್ಮ ಬಜೆಟ್‌ನಿಂದ ನಿಮಗೆ ಒಂದು ಬೆಲೆ ಬರುತ್ತದೆ. ಇಲ್ಲದಿದ್ದರೆ ಇವರು ಶಾಸ್ತ್ರ ಹೇಳುವ ಹಾಗೆ ಒಂದು ಬಜೆಟ್ ಇಟ್ಟಿದ್ದಾರೆಂದು ಆಗುತ್ತದೆ. ಆಗ ಅದನ್ನು ಯಾರೂ ತೆಗೆದುಕೊಂಡು ನೋಡುವುದಿಲ್ಲ. ಪ್ರತಿಯೊಂದು ಇಲಾಖೆಯನ್ನು ನೋಡಿದರೆ, ಅವರಿಗೆ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ, ಎಷ್ಟೆಷ್ಟು ದುಡ್ಡು ಮಂಜೂರು ಮಾಡಿದ್ದಾರೆ, ಎಷ್ಟೆಷ್ಟು ಖರ್ಚುಮಾಡಿದ್ದಾರೆಂಬುದು ಸರಿಯಾಗಿ ಗೊತ್ತಾಗುವುದೇ ಇಲ್ಲ. ಅದೂ ಅಲ್ಲದೆ, ಒಂದು ಸಾರಿ ಅಲ್ಲ, ನಾಲ್ಕೈದು ಸಾರಿ ಸಪ್ಲಿಮೆಂಟರಿ ಬಜೆಟ್ ಬಂದೇ ಬರುತ್ತದೆ. ಈ ಸಪ್ಲಿಮೆಂಟರಿ ಬಜೆಟ್ ಎಲ್ಲಿಯವರೆಗೆ ಹೋಗುತ್ತದೆ ಅಂದರೆ 150 ಕೋಟಿ ರೂಪಾಯಿಗಳವರೆಗೂ ಹೋಗುತ್ತದೆ. ಅದನ್ನೂ ನೋಡುತ್ತಿದ್ದೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವಾಗಲೂ ಬಜೆಟ್ ಎನ್ನುವುದಕ್ಕೆ ಒಂದು ಸ್ಯಾಂಕ್ಟಿಟಿ ಇದೆ. ಅದಕ್ಕೆ ಒಂದು ದೊಡ್ಡ ಇಲಾಖೆಯೇ ಇದೆ. ಅದ್ದರಿಂದ ಅದನ್ನು ಚೆನ್ನಾಗಿ ಫಾಲೊ ಮಾಡದೇ ಇದ್ದರೆ ಏನೂ ಪ್ರಯೋಜನವಿಲ್ಲ. ಆಗ ಅದರಲ್ಲಿ ಹುರುಳೂ, ತಿರುಳೂ ಏನೂ ಇಲ್ಲವೆಂದು ಹೇಳಬಹುದು. ಇವತ್ತು ಯಾರಾದರೂ ಯೂರೋಪಿನಿಂದ ಒಂದು ಡ್ಯಾನ್ಸಿಂಗ್ ಟ್ರೂಪ್ ಬಂದರೆ ಸಾಕು. ಇವರು ನಾವು ಅವರಿಂದ ಡ್ಯಾನ್ಸ್ ಮಾಡಿಸಬೇಕೆಂದು ಬಜೆಟ್ಟಿನಲ್ಲಿ ಖರ್ಚು ಹಾಕಿಸುತ್ತಾರೆ. ಆ ಐಟಂ ಬಜೆಟ್ಟಿನಲ್ಲಿ ಇಲ್ಲದಿದ್ದರೂ ಹೇಗೋ ಅದರಲ್ಲಿ ಆಮೇಲೆ ಸೇರಿಸಿಬಿಡುತ್ತಾರೆ. ಜಪಾನ್ ಎಕ್ಸ್‌ಪೋ-70ಕ್ಕೆ ಖರ್ಚಾದುದನ್ನು ಮೊದಲು ಬಜೆಟ್ಟಿನಲ್ಲಿ ಸೇರಿಸಿರಲಿಲ್ಲ. ಅದನ್ನೂ ಆಮೇಲೆ ಸೇರಿಸಿದ್ದಾರೆ. ಸಿನಿಮಾ ಮುಂತಾದುವುಗಳಿಗೆ ಹಣಸಹಾಯ ಕೊಡುವ ಬಗ್ಗೆ

ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಇಲ್ಲದೇ ಇದ್ದರೂ ಅಂತಹ ಅನೇಕ ಐಟಂಗಳಿಗೆ ಬೇಕಾದರೆ ನಾಳೆಯೇ ಖರ್ಚುಮಾಡುತ್ತಾರೆ. ಇವತ್ತು ಬಡ್ಜೆಟ್ ಮಂಜೂರುಮಾಡಿ ಮತ್ತೆ ಕೇವಲ 15 ದಿವಸಗಳಲ್ಲಿಯೇ ಪುನಃ ಸಪ್ಲಿಮೆಂಟರಿ ಬಡ್ಜೆಟ್ಟನ್ನು ತೆಗೆದುಕೊಂಡು ಬರುತ್ತಾರೆ. ಇವರಿಗೆ ಲಂಗು ಲಗಾಮು ಏನೂ ಇಲ್ಲ. ಇವರ ಕುದುರೆ ಎತ್ತ ಕಡೆಗೆ ಬೇಕಾದರೂ ಓಡುತ್ತದೆ. ನಾವು ಈ ರೀತಿಯೇ ಮಾಡಬೇಕೆಂದು ಒಂದು ದೃಢ ನಿರ್ಧಾರವಿಲ್ಲ. ಇವತ್ತಿನವರೆಗೂ ಏಕೆ ಈ ರೀತಿ ಮಾಡುತ್ತಿದ್ದೇವೆ, ಸಾರ್ವಜನಿಕರ ಹಣ ಈ ರೀತಿ ಪೋಲು ಮಾಡುವುದಕ್ಕೆ ಕಾರಣವೇನೆಂಬ ಬಗ್ಗೆ ಅವರ ದೃಷ್ಟಿ ಇಲ್ಲವೇ ಇಲ್ಲ. ಅವರು ನಿಜವಾಗಿ ಒಂದು ಲಂಗು ಲಗಾಮು ಇಟ್ಟುಕೊಂಡು ಹೋಗಿದ್ದರೆ, ಆಗ ಪರಿಸ್ಥಿತಿಯೇ ಬೇರೆ ಆಗುತ್ತಿತ್ತು. ಇವರು ಹೇಗೆ ಬಂದಿದ್ದಾರೋ ಹಾಗೆಯೇ ಲಾಗ ಹೊಡೆಯುತ್ತಾರೆ. ಉದಾರಣೆಗೆ ಹೇಳಬೇಕಾದರೆ, ಇವರು ಒಂದು ವಿಷಯವನ್ನು ಸದುದ್ದೇಶದಿಂದ ಮಾಡಿದ್ದಾರೆಂದು ತಿಳಿದು ಕೊಂಡಿದ್ದೆ. ಭೂತಲಿಂಗಂ ಕಮಿಟಿ ಎಂದು ಸರ್ಕಾರ ರಚಿಸಿದಂಥ ಕಮಿಟಿಯಲ್ಲಿ ನಾನೂ ಸದಸ್ಯ ನಾಗಿದ್ದೆ. ಆಗ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡು ನಮ್ಮ ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಯಾವ ಪಕ್ಷವೇ ಆಡಳಿತದಲ್ಲಿರಲಿ ಅವರು ಅದನ್ನು ಕೂಲಂಕಷವಾಗಿ ವಿಚಾರಮಾಡಿ ಸರಿಯಾದ ಶಿಫಾರಸುಗಳನ್ನು ಸರ್ಕಾರಕ್ಕೆ ಮಾಡಬೇಕೆಂದು ಸೂಚನೆಮಾಡಿದ್ದೆವು. ಅವರು ತಜ್ಞರು. ಆ ಕಮಿಟಿಯಲ್ಲಿ ಈ ಅಸೆಂಬ್ಲಿಯಲ್ಲಿರುವ ಮಾನ್ಯ ಶ್ರೀ ಘೋರ್ಪಡೆಯವರು ಮತ್ತು ನಾನೂ ಇದ್ದೆವು.

2–30 P.M.

ಇದರಲ್ಲಿ ಬಹಳ ಕೂಲಂಕಷವಾಗಿ ಯೋಚನೆ ಮಾಡಬೇಕಾಗುತ್ತದೆ. ಲ್ಯಾಂಡ್ ರೆವಿನ್ಯೂ; ಆಕ್ಟ್ರಾಯ್ ಇವೆಲ್ಲಾ ಹೇಗೆ ಇರಬೇಕು, ನಮ್ಮ ಫೈನಾನ್ಸ್‌ನ್ನು ಹೇಗೆ ಇನ್‌ಕ್ರೀಸ್ ಮಾಡಬೇಕು, ಡೆವಲಪ್‌ಮೆಂಟ್ ವರ್ಕ್ಸ್ ಯಾವರೀತಿ ಇರಬೇಕು, ಆಡಳಿತದಲ್ಲಿ ಯಾವ ರೀತಿ ಇರಬೇಕು ಎಂಬುದನು ಯೋಚನೆ ಮಾಡಿದ್ದೀರಾ? ಆದರೆ ಚುನಾವಣೆ ಬಂದಾಗ ಹತ್ತು ಎಕರೆಗೆ ಕಡಿಮೆ ಇರತಕ್ಕ ಜಮೀನಿಗೆ ನಾವು ಕಂದಾಯವನ್ನು ಬಿಟ್ಟುಬಿಟ್ಟಿದೇವೆ ಎಂದು ತಕ್ಷಣ ಮಾಡಿಬಿಟ್ಟಿದ್ದೀರಿ. ಅದಕ್ಕೆ ಗವರ್ನ್ಮೆಂಟ್ ಆರ್ಡರ್ ಇದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಜುಲೈ ಒಂದನೇ ತಾರೀಖಿನಿಂದ ಆಕ್ಟ್ರಾಯ್ ಕೊಡುವುದು ಬೇಡ ಎಂದು ಹೇಳಿದ್ದೀರಿ. ಒಂದು ಕನ್‌ಸ್ಟಿಟೆಂಟ್ ಥಿಂಕಿಂಗ್ ಇಲ್ಲ. ಎಲ್ಲಾ ಸ್ಪೆಕ್ಟಾಕ್ಯುಲರ್ ಆಗಿದೆ. ಕೇಂದ್ರ ಸರಕಾರಕ್ಕೆ ಅಪಾದನೆ ಮಾಡತಕ್ಕಂಥ ಒಂದು ಧೈರ್ಯಮಾಡಿ ಹೇಳಿದ್ದಾರೆ. ಕೇಂದ್ರಸರಕಾರದವರು ಗಿಮಿಕ್ಸ್ ಮಾಡುತ್ತಾರೆ ಎಂದು ಹೇಳತಕ್ಕಂಥವರು ಈ ರಾಜ್ಯದಲ್ಲಿ ಗಿಮಿಕ್ಸ್ ವಿನಹ ಬೇರೆ ಏನನ್ನೂ ಮಾಡಿಲ್ಲ. ಇದನ್ನು ಮಾಡುತ್ತೇವೆ ಅದನ್ನು ಮಾಡುತ್ತೇವೆ ಎಂದು ಹುಡುಗರಿಗೆ ಹೇಳುವಹಾಗೆ ಬಾಂಬೇ ದೇಖೋ, ಮದರಾಸ್ ದೇಖೋ, ಬೊಂಬಾಯಿ ದೇಖೋ ಅಂತ ಮೂರು ಕಾಸು, ಆರು ಕಾಸು ಕೊಟ್ಟು ತೋರಿಸುವಂತೆ ರಾಮಕೃಷ್ಣ ಹೆಗಡೆಯವರು ನಮ್ಮ ದೇಶದಲ್ಲಿ ಜನತೆಯ ಕಣ್ಣಿಗೆ ಮಣ್ಣನ್ನು ಎರಚುವ ಕಾರ್ಯವನ್ನು ಮಾಡಿದ್ದಾರೆ. ಇದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅಷ್ಟೇ ವಿನಹ ದೇಶದಲ್ಲಿ ಪ್ರಗತಿಗಾಗಿ ಏನೇನು ಮಾಡಿದ್ದಾರೆ ಎಂದರೆ ಏನೂ ಇಲ್ಲ. ಹಳ್ಳಿಗಾಡಿನ ಜನ ಜೀವನವನ್ನು ಉತ್ತಮ ಪಡಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಬೇಕು. ಇವೊತ್ತು ನಾನು ಹೇಳುತ್ತೇನೆ ಅವರು ಮಾಡಿರತಕ್ಕಂಥದ್ದು ಎಲ್ಲಿ ಜನ ಗಲಾಟೆ ಮಾಡುತ್ತಾರೆ, ಕೂಗುತ್ತಾರೆ, ಅಲ್ಲಿ ಅವರ ವಿಚಾರದಲ್ಲಿ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿ ರೈತಾಪಿ ಕಸಬಿನಿಂದ ಜೀವನ ಮಾಡತಕ್ಕ ಜನ ನೂರಕ್ಕೆ 80 ಜನ ಇದ್ದಾರೆ. ಆ ಸೇಕಡ 80 ಜನರ ಜೀವನದ ವಿಚಾರದಲ್ಲಿ ಯಾವ ರೀತಿ ಅನುಕೂಲ ಮಾಡಿದ್ದೀರಿ? ಉದಾಹರಣೆಗೆ ಹೇಳಬೇಕು ಎಂದರೆ ಸರಕಾರಿ ನೌಕರರು ಈ ರಾಜ್ಯದಲ್ಲಿ ಶೇಕಡಾ 100ಕ್ಕೆ ಎರಡು ಪರ್ಸೆಂಟ್ ಇದ್ದಾರೆ. ಅವರಿಗೆ ನಮ್ಮ ಉತ್ಪತ್ತಿಯಲ್ಲಿ 34 ಅಥವಾ 35 ಪರ್ಸೆಂಟ್ ಎಂದರೆ, ನೂರು ರೂಪಾಯಿ ಉತ್ಪತ್ತಿ ಇದ್ದರೆ ಅವರಿಗೆ 35 ರೂಪಾಯಿಗಳನ್ನು ಸಂಬಳದ ರೂಪದಲ್ಲಿ ಕೊಡುತ್ತಿದ್ದೀರಿ. ಹಳ್ಳಿಗಾಡಿನಲ್ಲಿ ಇರತಕ್ಕಂಥ ನೂರಕ್ಕೆ 80 ಜನರು ಅರೆ ಹೊಟ್ಟೆ ಇರತಕ್ಕಂಥವರು, ಬಟ್ಟೆ ಇಲ್ಲದೆ ಇರುವವರು ಕೇವಲ ಕೌಪೀನದಿಂದ ಮಾನ ಮರ್ಯಾದೆಯನ್ನು ಮುಚ್ಚಿಕೊಳ್ಳತಕ್ಕಂಥವರು. ಆ ಜನರ ವಿಚಾರದಲ್ಲಿ ಅವರ ಜನಜೀವನ ಮಟ್ಟವನ್ನು ಏರಿಸಲಿಕ್ಕೆ ನೀವು ಏನು ಮಾಡಿದ್ದೀರಿ? ಲ್ಯಾಂಡ್ ಆರ್ಮಿ ಮಾಡಿದ್ದೇವೆ, ಎರಡೂವರೆ ರೂಪಾಯಿ ಮಿನಿಮಂ ವೇಜಸ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಅವರಿಗೆ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ. ನೀವು ಮಾಡಿರುವುದು ಕಾಗದದ ಮೇಲೆ ಮಾತ್ರ ಇರುತ್ತದೆ. ಅದು ಜಾರಿಗೆ ಬರುವ ಪರಿಸ್ಥಿತಿಯೇ ಇಲ್ಲ. ಕೂಲಿ ಇಲ್ಲ ಎಂದರೆ ಕೂಲಿ ಕೊಡುವುದಕ್ಕೆ ಏನು ಏರ್ಪಾಡು ಮಾಡಿದ್ದೀರಾ? ಇದನ್ನೆಲ್ಲಾ ಇಲ್ಲಿ ಯೋಚನೆ ಮಾಡಿದ್ದೀರಾ? ಯಾತಕ್ಕೋಸ್ಕರ ಇದನ್ನು

(ಶ್ರೀ ಎಚ್. ಸಿದ್ಧವೀರಪ್ಪ)

ಹೇಳುತ್ತೇನೆ ಎಂದರೆ, ಇಂತಹ ಬಜೆಟನ್ನು ಇಲ್ಲಿ ಯಾರೂ ನಂಬುವುದಿಲ್ಲ, ಇಂತಹ ಬಜೆಟಿನಿಂದ ಜನ ಮೋಸ ಹೋಗುವುದಿಲ್ಲ. ದೇಶದಲ್ಲಿ ಒಂದು ಕ್ರಾಂತಿ ನಡೆಯುತ್ತದೆ. ಕ್ರಾಂತಿಕಾರಕವಾದ ಬದಲಾವಣೆ ಆಗುತ್ತಾ ಇದೆ. ಬಡವರು ಇವೊತ್ತು ಎದ್ದು ನಿಂತಿದ್ದಾರೆ, ಎಚ್ಚೆತ್ತು ಕೇಳುತ್ತಿದ್ದಾರೆ ನಮಗೋಸ್ಕರ ಏನು ಮಾಡಿದ್ದೀರಿ ಎಂದು ಅವರು ಕೇಳಿದರೆ ಈ ಬಜೆಟಿನಲ್ಲಿ ನೀವು ಏನು ತೋರಿಸ ಬಲ್ಲಿರಿ ಎಂದು ಕೇಳುತ್ತೇನೆ. ಒಂದು ಲಂಚದ ಇಲಾಖೆಯನ್ನು ಓಪನ್ ಮಾಡಿದ ಹಾಗೆ ಮಾಡಿದ್ದಾರೆ. ಯಾವುದಾದರೂ ಸರಿ, ಕೇಂದ್ರದಿಂದ ಹಣ ಬರಲಿ, ಸ್ಟೇಟ್ ಬಜೆಟಿನಿಂದ ಹಣ ಬರಲಿ ಯಾವ ಉದ್ದೇಶಕ್ಕಾಗಿ ಹಣ ಕೊಡುತ್ತಾ ಇದ್ದೀರೋ ಅದು ಆ ಉದ್ದೇಶಕ್ಕೆ ಖರ್ಚುಮಾಡುತ್ತಾ ಇಲ್ಲ. ಪ್ರತಿಯೊಂದು ಇಲಾಖೆಯಲ್ಲಿಯೂ ಲಂಚ ತಾಂಡವವಾಡುತ್ತಿದೆ. ರಸ್ತೆ ಮಾಡಲಿಕ್ಕೆ ಒಂದು ಲಕ್ಷ ರೂಪಾಯಿ ಕೊಟ್ಟರೆ 50 ಸಾವಿರ ರೂಪಾಯಿನ ಕೆಲಸವೂ ಆಗುವದಿಲ್ಲ. ಇನ್ನು ಉಳಿದ 50 ಸಾವಿರ ರೂಪಾಯಿ ಯಾವ ರೀತಿಯಲ್ಲಿ ಖರ್ಚಾಗಬೇಕೋ ಆ ರೀತಿಯಲ್ಲಿ ಆಗುತ್ತಿದೆ. ನೌಕರರನ್ನು ನೋಡಿದರೆ 10ಕ್ಕೆ ನೂರರಷ್ಟು ಜಾಸ್ತಿ ಮಾಡಿದ್ದೀರಿ. ಆಡಳಿತದ ಮೇಲೆ ಬಿಗಿ ಇಲ್ಲದೆ ಲಂಚದ ಮಟ್ಟಿಗೆ ಮಾತ್ರ ವಸೂಲು ಆಗುತ್ತಾ ಇದೆ. ಮೊನ್ನೆ ಚುನಾವಣೆ ನಡೆಯಿತು. ಅದರಲ್ಲಿ ಎಷ್ಟೋ ಜನ ಸ್ಟೇಟ್ ಆಫೀಸರುಗಳನ್ನು ದುಡ್ಡು ವಸೂಲು ಮಾಡುವುದಕ್ಕೆ ತಮ್ಮ ಏಜೆಂಟರುಗಳನ್ನಾಗಿ ಉಪಯೋಗಿಸಿಕೊಂಡಿದ್ದಾರೆಂದು ನನಗೆ ಗೊತ್ತಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಒಬ್ಬ ಅಸಿಸ್ಟೆಂಟ್ ಇಂಜನೀಯರು 5 ಸಾವಿರ ರೂಪಾಯಿಗಳನ್ನು ಕೊಡಬೇಕು, ಒಬ್ಬ ಎಕ್ಸಿಕ್ಯೂಟೀವ್ ಇಂಜನೀಯರು 10 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ವಿಧಾಯಕ ಮಾಡಿದ್ದಾರೆ. ಇದನ್ನೆಲ್ಲಾ ಅವನು ಹೇಗೆ ಕೊಡುತ್ತಾನೆ? ಯಾವನಾದರೂ ಒಬ್ಬ ಕಂಟ್ರಾಕ್ಟುದಾರನನ್ನು ಹಿಡಿಯುತ್ತಾರೆ. ಅವನು 5 ಸಾವಿರ ಕೊಡಬೇಕಾದರೆ 25 ಸಾವಿರ ರೂಪಾಯಿನ ಕಂಟ್ರಾಕ್ಟನ್ನು ಅವನಿಗೆ ಕೊಡಿಸಿ ಅವನಿಂದ ವಸೂಲು ಮಾಡುತ್ತಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ ಲಂಚದ ರಾಜ್ಯವಾಗಿದೆ. ಮೈಸೂರು ರಾಜ್ಯದಲ್ಲಿ ಇರುವಷ್ಟು ಲಂಚ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ. ಕಾರಣ ಏನು ಎಂದರೆ ಆಡಳಿತದಲ್ಲಿ ಇರತಕ್ಕಂಥವರು ಅದಕ್ಕೆ ದಾರಿಯನ್ನು ಹಾಕಿಕೊಟ್ಟಿದ್ದಾರೆ. ಈ ರೀತಿ ಮುಂದಿನ ಜನಾಂಗಕ್ಕೆ ನಿಜಾಂಶವನ್ನು ಹೇಳಬೇಕು ಎಂದರೆ ಕಷ್ಟವಾಗುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗಲೂ ಇದನ್ನು ಹೇಳಿದ್ದೆ. ದೇಶದಲ್ಲಿ ಜನತೆ 100ಕ್ಕೆ 100ರಷ್ಟು ನಿಮಗೆ ವಿರುದ್ಧವಾಗಿ ಓಟು ಮಾಡಿದ್ದರೆ, ಕೇವಲ ಶ್ರೀಮತಿ ಇಂದಿರಾಗಾಂಧಿಯವರ ತತ್ವಗಳು ಕಾರಣವಲ್ಲ, ಅವರ ನೇತೃತ್ವ ಕಾರಣವಲ್ಲ. ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ವಿಶ್ವಾಸ ಇಟ್ಟು, ಸಮಾಜವಾದದ ತತ್ವದಲ್ಲಿ ನಂಬಿಕೆ ಇಟ್ಟು ಜನಗಳು ಅವರಿಗೆ ಓಟನ್ನು ಮಾಡಿದ್ದಾರೆ. ಅದರ ಜೊತೆಗೆ ನಿಮ್ಮ ದುರಾಡಳಿತ ಯಾವಾಗ ಕೊನೆಗೊಂಡೀತೋ ಎನ್ನುವ ಆಶಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬೇಸತ್ತು, ಜಿಗುಪ್ಸೆಪಟ್ಟುಕೊಂಡು ಓಟು ಕೊಟ್ಟಿದ್ದಾರೆ. ಜನಗಳು ನಾಡಿಯನ್ನು ಹಿಡಿದುನೋಡಿದರೆ, ಈ ಸರಕಾರ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ನಮಗೆ ಈ ಕುತ್ತು ತಪ್ಪಿದ್ದಲ್ಲ ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ. ನಮಗೆ ಬಂದಿರತಕ್ಕ ವರ್ತಮಾನದ ಪ್ರಕಾರ ನಾಳೆ ನಡೆಯತಕ್ಕ ಚುನಾವಣೆಗೆ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಹಣ ವನ್ನು ಜಮಾ ಮಾಡಿದ್ದೀರಿ ಎಂದು ಕೇಳಿದ್ದೇನೆ. ಫಂಡ್ ಬೆಳೆಯುತ್ತಾ ಇದೆ. ಅವೆಲ್ಲ ಆಗಬೇಕಾದರೆ ಸಾರ್ವಜನಿಕ ಬೊಕ್ಕಸದಿಂದ ಇರತಕ್ಕ ಹಣವನ್ನೆಲ್ಲಾ ಕಂಟ್ರಾಕ್ಟರುಗಳಿಗೋಸ್ಕರ ಖರ್ಚುಮಾಡು ತ್ತಿದ್ದೀರಿ. ಕಂಟ್ರಾಕ್ಟರುಗಳಿಂದ ಹಣವನ್ನು ವಸೂಲು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದು ಆಡಳಿತದ ಪಾವಿತ್ರತೆಯನ್ನು ಕಳೆದು, ಕೆಲಸ ಕಾರ್ಯಗಳು ಸರಿಯಾಗಿ ನಡೆಯದೆ ಇರತಕ್ಕ ರೀತಿ ಯಲ್ಲಿ ಇವೊತ್ತು ಆಡಳಿತವನ್ನು ಈ ಸರಕಾರ ನಡೆಸುತ್ತಿದೆ. ಇವೊತ್ತು ಯಾವ ಕಂಟ್ರಾಕ್ಟರು ಕಾಲಕ್ಕೆ ಸರಿಯಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ. ದೇವರ ಬಳಿಕೆರೆ ಪ್ರಾಜೆ ಕ್ಟನ್ನು ಕಟ್ಟುತ್ತೇವೆ ಎಂದು ಹೇಳಿ ಪ್ರೋಗ್ರಾಂ ಪ್ರಕಾರ ಕೆಲಸಕಾರ್ಯಗಳು ಇನ್ನೂ ಆಗಿಲ್ಲ. ಅದಕ್ಕೆ ಕಾರಣ ತಮಗೆ ಬೇಕಾದವರಿಗೆ ಕಂಟ್ರಾಕ್ಟ್ ಕೊಡುತ್ತಾ ಇರುವುದರಿಂದ ರಾಜ್ಯ ಪರ್ಮಿಟ್ ರಾಜ್ಯವಾಗುತ್ತಾ ಇರುವುದರಿಂದ ದೇಶದಲ್ಲಿ ಕುತ್ತು ಒದಗಿದೆ. ಇನ್ನೊಂದು ವಿಚಾರ ಕೇಳ ಬೇಕೆಂದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕುಶಾಗ್ರ ಬುದ್ಧಿವುಳ್ಳವರು. ನಮ್ಮಲ್ಲಿ ಇರ ತಕ್ಕವರ ಪೈಕಿ ಅವರು ಬುದ್ಧಿವಂತರು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಗೊತ್ತಿದೆ ಜನತೆಯ ನಾಡಿ ಏನು ಇದೆ, ಇವರ ಪಕ್ಷದ ವಿಚಾರದಲ್ಲಿ ಜನತೆ ಯಾವ ಅಭಿಪ್ರಾಯವನ್ನು ಇಟ್ಟು ಕೊಂಡಿದ್ದಾರೆ ಎಂಬುದು. ಚುನಾವಣೆಯಲ್ಲಿ 27 ಸ್ಥಾನಗಳಲ್ಲಿ 27 ಸ್ಥಾನಗಳನ್ನು ಕಳೆದುಕೊಂಡು ಈ ವಿಚಾರದಲ್ಲಿ ಮೈಸೂರು ರಾಜ್ಯ ಕಿರೀಟಪ್ರಾಯವಾಗಿದೆ.

ನಮ್ಮ ರಾಜ್ಯದಲ್ಲಿ ಇವರು 17 ಜನರನ್ನು ನಿಲ್ಲಿಸಿದ್ದರು ಮತ್ತು ಇಡೀದೇಶದಲ್ಲಿ 239 ಉಮೇದುವಾರರನ್ನು ನಿಲ್ಲಿಸಿದ್ದರು. ಅವರ ಪೈಕಿ ಆರಿಸಿಬಂದವರು ಎಷ್ಟು ಎಂದರೆ 16. ಈ 16ರಲ್ಲಿ ಗುಜರಾತ್‌ನಲ್ಲಿ 10, ಬಿಹಾರ್‌ನಲ್ಲಿ 3, ಉತ್ತರ ಪ್ರದೇಶದಲ್ಲಿ 1, ತಮಿಳುನಾಡಿನಲ್ಲಿ 1, ಇನ್ನೊಂದೆಲ್ಲೋ ಕಡೆ 1. ಮೈಸೂರು ರಾಜ್ಯ ಇಡೀ ರಾಜ್ಯದಲ್ಲಿ, ಇನ್ನು 18 ರಾಜ್ಯಗಳಲ್ಲಿ ಮತ್ತು ಯೂನಿಯನ್ ಟೆರಿಟೋರಿನಲ್ಲಿ ಎರಡನ್ನು ಬಿಟ್ಟು ಬಾಕಿ ಉಳಿದ ಯೂನಿಯನ್ ಟೆರಿಟೋರಿಯಲ್ಲಿ ಎಲ್ಲಾ ಹೇಳುವುದಕ್ಕೆ ಹೆಸರು ಇಲ್ಲದ ಹಾಗೆ ಜನರು ಇವರನ್ನು ತೆಗೆದುಬಿಟ್ಟಿದ್ದಾರೆ. ಇಷ್ಟಾದರೂ ನಾವು ಜನತಾ ಪ್ರತಿನಿಧಿಗಳು, ನಾವು ಒಂದು ಬಡ್ಜೆಟನ್ನು ನಿಮ್ಮ ಮುಂದೆ ಇಡುತ್ತೇವೆ ಎಂದು ಸಾಹಸಮಾಡುವುದಕ್ಕಿಂತ ನಮ್ಮ ಸ್ನೇಹಿತರಾದ ರಾಮಕೃಷ್ಣ ಹೆಗಡೆಯವರು ಧೈರ್ಯವಾಗಿ ಹೇಳಬೇಕಾಗಿತ್ತು ಜನತೆ ನಮ್ಮ ವಿಚಾರದಲ್ಲಿ ಈ ಅಭಿಪ್ರಾಯ ಇಟ್ಟುಕೊಂಡಾಗ ಈ ಬಡ್ಜೆಟ್‌ನ್ನು ಮಂಡಿಸುವುದು ಸೂಕ್ತವಲ್ಲ, ನಾನು ಮಂಡಿಸಲಿಕ್ಕೆ ಅಗುವುದಿಲ್ಲ ಎಂದು ಹೇಳಿದ್ದರೆ ಶಹಬಾಸ್ ಎಂದು ಹೇಳುತ್ತಾ ಇದ್ದೆ. ಈಪ್ರಕಾರ ಹೇಳಲಿಲ್ಲ. ಹೇಳಿ, ಬರೆಯಿಸಿ ಅಂತ ಯಾವ ರೀತಿ ಬಂತು ಅಂತ ಅನ್ನುವುದನ್ನು ಅವರೇ ತೋರಿಸಿದರು. ಇದೇ ಒಂದು ವಿಷಯವನ್ನು ನಾವು ಗಮನದಲ್ಲಿ ಇಟ್ಟುಕೊಂಡರೆ ಇವತ್ತು ಹೇಳುತ್ತೇನೆ ಚುನಾವಣಾ ಕಮಿಷನ್ ಅವರು ಒಂದು ಅಖೈರು ತೀರ್ಪು ಕೊಟ್ಟಿದ್ದಾರೆ, ಹಿಂದೂಸ್ಥಾನದಲ್ಲಿ ಇರತಕ್ಕ ಕಾಂಗ್ರೆಸ್ ಎಂದರೆ ಶ್ರೀಮಾನ್ ಜಗಜೀವನರಾಂರವರ ಅಧ್ಯಕ್ಷತೆಯಲ್ಲಿ ಇರುವುದೇ ಕಾಂಗ್ರೆಸ್ಸು. ಆ ಸಿಂಬಲ್ಲು ಅವರಿಗೆ ಒಪ್ಪುವುದು ಎಂದರೂ ಸುಪ್ರೀಂ ಕೋರ್ಟಿಗೆ ಹೋದರು. ಅದರೂ ಕೂಡ ಅದು ನಮ್ಮ ವಿರುದ್ಧವಾಗಿ ತೀರ್ಮಾನವಾಗಿಲ್ಲ, ಸುಪ್ರೀಂಕೋರ್ಟು ಏನು ತೀರ್ಮಾನ ಕೊಡುತ್ತದೆಯೋ ನೋಡೋಣ. ಆ ವಿಚಾರ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇನ್ನೊಂದು ವಿಷಯ ಈ ಸಮಯದಲ್ಲಿ ಹೇಳುತ್ತೇನೆ. ಅವರು ಕೆಲವು ಸಂದರ್ಭದಲ್ಲಿ ಒಬ್ಬರ ಕಣ್ಣಿಗೂ ಕಾಣದ ಹಾಗೆ ದುಡ್ಡು ಹೊಡೆಯುತಕ್ಕ ಕೆಲವು ಅನುಕೂಲತೆಗಳು ಇವೆ. ಅವು ಬಯಲಿಗೆ ಬರದ ಹಾಗೆ ಇವತ್ತು ಯಾರ ಮುಂದೂ ಬರದಹಾಗೆ ಒಳಗಿಂದೊಳಗೆ ದುಡ್ಡು ಹೊಡೆಯುತಕ್ಕ ರೀತಿನೀತಿಗಳನ್ನು ಯಾವ ರೀತಿ ಅವರು ಪರ್ಫೆಕ್ಟ್ ಮಾಡಿದ್ದಾರೆ ಎಂದರೆ ಮಾತೆತ್ತಿದರೆ ಒಂದು ಕಾರ್ಪೊರೇಷನ್ ಮಾಡುವುದು. ಅರಣ್ಯ ಇಲಾಖೆಗೆ ಒಂದು ಕಾರ್ಪೋರೇಷನ್, ಇನ್ನೊಂದಕ್ಕೆ ಇನ್ನೊಂದು ಕಾರ್ಪೋರೇಷನ್. ಕಾರ್ಪೋರೇಷನ್ ಅಂದ ಕೂಡಲೇ ಅಲ್ಲಿ ಏನು ಬರುತ್ತದೆ ಎಂದರೆ ಕೆಲವು ಲಿಮಿಟ್ಸ್ ಇವೆ. ಆ ಬಡ್ಜೆಟ್‌ನ್ನು ಆಡಿಟರ್ ಜನರಲ್‌ರವರೂ ಸಹ ತನಿಖೆ ಮಾಡುವುದಕ್ಕಾಗಲಿ ಅಥವಾ ಅದರ ವಿವರಕ್ಕಾಗಲೀ ಹೋಗುವುದಕ್ಕೆ ಅವಕಾಶವಿರುವುದಿಲ್ಲ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಂತಹ ಮಹಾಸಂಸ್ಥೆಯಲ್ಲಿ ಏನೇನು ಅನ್ಯಾಯವಾಗಿದೆ ಯಾವ್ಯಾವ ಲೋಪವಾಗಿದೆ ಎಂಬುದು ನನಗೆ ಗೊತ್ತಿದೆ. ಪ್ರೊಡಕ್ಷನ್ ಕಾಸ್ಟ್‌ಗಿಂತ ಒಂದು ಟನ್‌ಗೆ 200—300 ರೂಪಾಯಿ ಕಡಿಮೆ ಮಾಡಿ ತಮಗೆ ಬೇಕಾದವರಿಗೆ ಲಕ್ಷಾಂತರ ರೂಪಾಯಿಗಳ ಮಾಲನ್ನು ಕೊಟ್ಟಿದ್ದಾರೆ. ಬೆಂಗಳೂರು ವಾಟರ್ ಸಪ್ಲೈ ವಿಚಾರದಲ್ಲಿ ದೊಡ್ಡ ಕ್ರಾಂತಿಯಾದರೂ ಕೇಳುವುದಿಲ್ಲ, ಮಾಡುವುದನ್ನು ಮಾಡುತ್ತೇವೆ ಎಂದು ಮಾಡಿದರು. ಈ ರೀತಿ ಯಾವ್ಯಾವುದರಲ್ಲಿ ಏನೇನು ಮಾಡುತ್ತಾರೆ ಎಂಬುದನ್ನು ಜನ ಕಣ್ಣಿನಲ್ಲಿ ಕಣ್ಣಿಟ್ಟು ಬರೆದುಕೊಳ್ಳುತ್ತಾ ಇದ್ದಾರೆ. ಒಂದು ಕಮಿಷನ್ ಮಾಡಿ. ಆ ಕಮಿಷನಲ್ಲಿ ಯಾವ್ಯಾವುದರಲ್ಲಿ ಏನೇನು ಅನ್ಯಾಯ ಮಾಡಿದ್ದೀರಿ, ಎಲ್ಲೆಲ್ಲಿ ಎಷ್ಟು ದುಡ್ಡು ಹಾಳು ಮಾಡಿದ್ದೀರಿ ಎಂಬ ವಿಚಾರವನ್ನು ತನಿಖೆ ಮಾಡತಕ್ಕ ಪ್ರಯತ್ನವನ್ನು ಮುಂದೆ ಬರತಕ್ಕ ಸರ್ಕಾರ ಯಾವುದೇ ಬರಲಿ ಅದು ಮಾಡಬೇಕಾಗುತ್ತದೆ ಎಂಬುದನ್ನು ಮರೆಯುವ ಹಾಗೆ ಇಲ್ಲ. ಇದೇ ರೀತಿ ಮಂತ್ರಿಗಳ ಮೇಲೆ ಚಾರ್ಜ್‌ಷೀಟು ಹಾಗೆಯೇ ಪೆಂಡಿಂಗ್ ಇದೆ. ಅದರ ಮೇಲೆ ಏನೂ ಆಗಿಲ್ಲ. ಹಿಂದೆ ಅರಿಕೆ ಮಾಡಿಕೊಂಡಿದ್ದೆ, ಇದನ್ನು ಬಗೆಹರಿಸಿಕೊಳ್ಳಬೇಕಾಗಿದ್ದರೆ ನೀವೇ ಕಲೆತು ಒಂದು ತೀರ್ಮಾನ ಮಾಡಿ ಈ ಸಭೆಯ ಮುಂದೆ ಇಡಿ ಎಂದು. ಲೋಕ ಪಾಲ ಲೋಕ ಆಯುಕ್ತ ಬಿಲ್ ಬಂದಾಗ ಬೇಡ್ವ ಎಂದಿರಿ. ಆಮೇಲೆ ಶ್ರೀಮಾನ್ ನಿಜಲಿಂಗಪ್ಪನವರು ವಾಗ್ದಾನ ಕೊಟ್ಟಿದ್ದರು ಅದನ್ನು ವೀರೇಂದ್ರಪಾಟೀಲ್‌ರವರು ಮಾಡಲಿಲ್ಲ, ಬಿಟ್ಟುಬಿಟ್ಟಿದ್ದೇವೆ ಎಂದರು. ಬೇಕಾದ್ದನ್ನು ಹೊಡೆದುಕೊಳ್ಳಿರಿ ಎಂದು ಬಿಟ್ಟಿದ್ದೀರೋ? ಲಂಚ ಹೊಡೆಯದೇ ಇರತಕ್ಕ ಇಲಾಖೆ ಯಾವುದೂ ಇಲ್ಲ. ಆಡುಮುಟ್ಟದ ಸೊಪ್ಪು ಯಾವುದೂ ಇಲ್ಲ ಅಂತ ಆಂತ ಅಂದ ಹಾಗೆ ಲಂಚ ಹೊಡೆಯದ ಇಲಾಖೆ ಯಾವುದೂ ಇಲ್ಲ. ಲಂಚ ಹೊಡೆಯತಕ್ಕ ಅವಕಾಶವನ್ನು ಪರ್ಫೆಕ್ಟ್ ಮಾಡಿಕೊಂಡು ಕೆಲಸ ಮಾಡುತ್ತಾ ಇದ್ದೀರಿ, ಇದು ಅನೇಕ ರೀತಿಯಲ್ಲಿ ಜನತೆಯಲ್ಲಿ ಜಿಗುಪ್ಸೆಯನ್ನುಟುಮಾಡುತ್ತಾ ಇದೆ. ನೀವು ಈಗ ಯಾರ್ಯಾರು ಅಧಿಕಾರದಲ್ಲಿ ಇದ್ದೀರಿ, 1947ನೇ ಇಸವಿಯಿಂದ ಯಾರ್ಯಾರು ಮಂತ್ರಿಗಳಾದ್ದರು ಅವರನ್ನೆಲ್ಲಾ ವಿಚಾರಿಸಿ. ಬಿಹಾರದಲ್ಲಿ ಮಾಡಲಿಲ್ಲವೇನು? ನಾವು ಬಿಟ್ಟುಬಿಟ್ಟೆವು ಎಂದರೆ ನೀವು ಬಿಡಬಹುದು, ಮುಂದೆ ಬರತಕ್ಕವರು ನಿಮ್ಮನ್ನು ಬಿಡುವುದಿಲ್ಲ. ಮುಂದೆ ಯಾರೇ ಬರಲಿ ಇದನ್ನು ಮೊದಲು ಮಾಡಬೇಕಾದ್ದು ಅವರ ಕರ್ತವ್ಯ ಅವರು ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

(ಶ್ರೀ ಎಚ್. ಸಿದ್ದವೀರಪ್ಪ)

ಇನ್ನೊಂದು ವಿದ್ಯುಚ್ಛಕ್ತಿ. ಬಹಳ ಹಣ ಒದಗಿಸುತ್ತೇವೆ ಎಂದು ಪದೇ ಪದೇ ಹೇಳುತ್ತಾ ಇದ್ದೀರಿ. ಈ ಸಾರಿ ಬಜೆಟ್ ಮಂಡಿಸಿರುವುದರಲ್ಲೂ ಹೇಳಿದ್ದೀರಿ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಏನಾಗಿದೆ ಎಂದರೆ ಹಿಂದೆಯೂ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ ಅಲ್ಲಿ ಬಹಳ ಲೋಪದೋಷ ಇದೆ, ಬಹಳ ಅನ್ಯಾಯ ನಡೆಯುತ್ತಾ ಇದೆ, ಬಹಳ ರೀತಿಯಿಂದ ದುಡ್ಡು ವ್ಯಯವಾಗುತ್ತಾ ಇದೆ, ನಾನು ಕೇಳಿದ್ದರಲ್ಲಿ ಹೋದ ವರ್ಷ ಸುಮಾರು 8 ಕೋಟಿ ರೂಪಾಯಿನ ಮಾಲನ್ನು ಟೆಂಡರ್ ಯಾವುದೂ ಕರೆಯದೆ ಕೊಟ್ಟಿದ್ದಾರೆ. ಇದರಲ್ಲಿ ಅವರಿಗೂ ಇವರಿಗೂ ಏನೇನು ನಡೆದಿದೆಯೋ, ಹಿಂದಿನ ಕಾಲದಲ್ಲಿ ಒಂದು ಪಿನ್ನು ಕೊಂಡುಕೊಳ್ಳಬೇಕಾದರೂ ಸ್ಟೋರ್‌ಪರ್ಚೇಸ್ ಕಮಿಟಿಗೆ ಹೋಗಬೇಕಾಗಿತ್ತು. ಸ್ಟೋರ್ ಪರ್ಚೇಸ್ ಕಮಿಟಿಗೆ ಹೋಗದೆ ಯಾವುದನ್ನೂ ಪರ್ಚೇಸ್ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ನಾನು ಕೇಳಿದ್ದು ಆ ಇಲಾಖೆಯಲ್ಲಿ ಕಂಟ್ರಾಕ್ಟುದಾರರು ಒಬ್ಬರಿಂದ ಮೊನ್ನಿನ ಚುನಾವಣೆಯಲ್ಲಿ ಸುಮಾರು 50 ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ.

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—50 ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ವಿರೋಧಪಕ್ಷದ ನಾಯಕರು ಏನಾದರೂ ಮಾತನಾಡಿದರೆ ಅಂಕಿಅಂಶಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆ ಎಂಬ ಅಭಿಪ್ರಾಯ ಇರುತ್ತದೆ, ಅವರು ಹೇಳುವ ಲೆಕ್ಕದ ಪ್ರಕಾರ ಇವತ್ತೇ ಮೊದಲು ಬಹುಶಃ ಇಂತಹ ಕೆಟ್ಟ ಆಡಳಿತ ಇನ್ನೆಲ್ಲೂ ಜಗತ್ತಿನಲ್ಲಿ ಸಿಕ್ಕುವ ಹಾಗೆ ಇಲ್ಲ ಅದು ಇಲ್ಲೇ ಇದೆ ಅನ್ನುವ ರೀತಿಯಲ್ಲಿ ಮಾತನಾಡುತ್ತಾ ಇದ್ದಾರೆ. ಈ ರೀತಿ ಆಪಾದನೆ ಮಾಡುವ ಮುಂದೆ ವಿಚಾರ ಮಾಡಿ ಮಾತನಾಡಬೇಕು. 50 ಲಕ್ಷ ರೂಪಾಯಿ ಎಲೆಕ್ಷನ್‌ಗೆ ಲಂಚ ತೆಗೆದುಕೊಂಡಿದ್ದೇವೆ ಎಂದು ಮಾತನಾಡಿದರೆ I am only sorry.

Sri H. SIDDAVEERAPPA.—You need not be sorry; the facts are there. 8 ಕೋಟಿ ರೂಪಾಯಿಗಳ ಮಾಲಿಗೆ ಅವರು ಆರ್ಡರ್ ಕೊಟ್ಟಿದ್ದು ನನಗೆ ಗೊತ್ತಿದೆ. 5 ಪರ್ಸೆಂಟ್‌ನ ಹಾಗೆ ಕಂಟ್ರಾಕ್ಟುದಾರರಿಂದ ತೆಗೆದುಕೊಂಡಿದ್ದಾರೆ. 8 ಕೋಟಿ ರೂಪಾಯಿಗೆ 5 ಪರ್ಸೆಂಟ್‌ನಂತೆ ಎಷ್ಟು ಆಯಿತು ಲೆಕ್ಕ ಹಾಕಿ. ತಾವು ಕಮಿಷನ್ ಆಫ್ ಇನ್‌ಕ್ವೈರಿ ಮಾಡಿ, ಹೇಳುತ್ತೇನೆ, ನಾನು ಹೇಳಿದ್ದರಲ್ಲಿ ತಪ್ಪಿದ್ದರೆ ಯಾವ ಶಿಕ್ಷೆಗೆ ಬೇಕಾದರೂ ಗುರಿಯಾಗುತ್ತೇನೆ. ಈ ರೀತಿ ಇಂಡಸ್ಟ್ರಿಯಲಿಸ್ಟ್ಸ್ ಕ್ಯಾಪಿಟಲಿಸ್ಟ್ಸ್‌ನಿಂದ ದುಡ್ಡು ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೀರಿ. ನಮಗೆ ಬಂದಿರುವ ಲೆಕ್ಕದ ಪ್ರಕಾರ ಮೊನ್ನೆ ನಡೆದ ಚುನಾವಣೆಯಲ್ಲಿ ನೀವೇನೂ ಕಡಿಮೆ ಖರ್ಚು ಮಾಡಲಿಲ್ಲ. ಹೇರಳವಾಗಿ ಖರ್ಚು ಮಾಡಿದ್ದೀರಿ. ಕಾಳಿನದಿ ಯೋಜನೆ, ಹಾರಂಗಿ ಯೋಜನೆ, ಹೇಮಾವತಿ ಯೋಜನೆ ಮುಂತಾದುವನ್ನು ಮಾಡುವುದಾಗಿ ಎಲ್ಲಾ ಕಡೆ ಹೇಳುತ್ತೀರಿ. ಆದರೆ ಅವೆಲ್ಲವನ್ನೂ ಒಟ್ಟಿಗೆ ತೆಗೆದುಕೊಂಡು ಮಾಡುವುದಕ್ಕಿಂತ ಒಂದೊಂದಾಗಿ ಪೂರ್ಣಮಾಡಿ ನಂತರ ಇನ್ನೊಂದನ್ನು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುವುದು. ಹಾಗೆ ಮಾಡಿದ್ದರೆ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಉದಾರತೆಯಿಂದ ಎಕ್ಸೈಜ್ ಇಲಾಖೆಯಲ್ಲಿ ಬರುವ 20 ಕೋಟಿ ರೂಪಾಯಿ ಆದಾಯದಿಂದ ಇದುವರೆಗೆ 3—4 ಪ್ರಾಜೆಕ್ಟುಗಳನ್ನು ಪೂರ್ಣ ಮಾಡಬಹುದಾಗಿತ್ತು. ನಮ್ಮ ದೇಶದಲ್ಲಿ ನೂರರಲ್ಲಿ 13 ಎಕರೆ ನೀರಾವರಿಯಾಗಿದೆ ಎಂದು ನೀವು ಹೇಳುತ್ತೀರಿ. ತಮಿಳುನಾಡಿನಲ್ಲಿ 44 ಎಕರೆ, ಆಂಧ್ರದಲ್ಲಿ 35 ಎಕರೆ ಸೇಕಡವಾರು ನೀರಾವರಿಯಾಗಿದೆ. ಆ ಮಟ್ಟಕ್ಕೆ ನಾವು ಬರುವುದು ಯಾವಾಗ ? ಹಳ್ಳಿಗಳಿಗೆಲ್ಲಾ ವಿದ್ಯುತ್ತನ್ನು ಸರಬರಾಯಿ ಮಾಡುವುದಾಗಿ ಹೇಳಿದ್ದೀರಿ. ನಮ್ಮ ಕ್ಷೇತ್ರದಲ್ಲಿ 5 ಹಳ್ಳಿಗಳಿಗೆ ಈ ಸಾರಿ ವಿದ್ಯುಚ್ಛಕ್ತಿಯನ್ನು ಕೊಡುವುದಾಗಿ ಹೇಳುತ್ತೀರಿ. ನಮ್ಮಲ್ಲಿ 176 ಹಳ್ಳಿಗಳಿವೆ. ಅವಕ್ಕೆಲ್ಲಾ ಕೊಡಲು ಎಷ್ಟು ಕಾಲ ಬೇಕು ಎಂಬುದನ್ನು ಯೋಚಿಸಿ. ಒಂದು ವರ್ಷಕ್ಕೆ ಎಷ್ಟು ಹಳ್ಳಿಗಳಿಗೆ ಕೊಡುವಿರಿ ? ಹಿಂದಿನ ಲೆಕ್ಕದ ಪ್ರಕಾರ ಎಳೂವರೆ ಸಾವಿರ ಹಳ್ಳಿಗಳಿಗೆ ಕೊಟ್ಟಿದ್ದೀರಿ. ಈಗ ವರ್ಷಕ್ಕೆ 800 ಹಳ್ಳಿಗಳಿಗೆ ಕೊಟ್ಟರೆ 5 ವರ್ಷಗಳಲ್ಲಿ ಪೂರ್ಣವಾಗಿ ಎಲ್ಲ ಹಳ್ಳಿಗಳಿಗೂ ಕೊಡಲು ಸಾಧ್ಯವೇ? ಒಂದು ಸರಿಯಾದ ಕಾರ್ಯಕ್ರಮವಿಲ್ಲ. ಸುಮ್ಮನೆ ಮಾಡುತ್ತೇವೆಂದು ಹೇಳುತ್ತಾರೆ. ಜನರಿಗೆ ಕುಡಿಯುವ ನೀರು ಒದಗಿಸುತ್ತೇವೆ, ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಒಂದನ್ನೂ ಮಾಡಿಲ್ಲ. ಇಷ್ಟೇ ಅಲ್ಲ. ಇನ್ನೊಂದು ವಿಚಾರ ಹೇಳಬೇಕೆಂದರೆ ಹಳ್ಳಿಗಳ ವಿಚಾರದಲ್ಲಿ ಕನಿಕರವಿಲ್ಲ, ಮಮತೆಯಿಲ್ಲ. ಉದಾಹರಣೆಗೆ ಇಂದು ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿದೆ, ಅದನ್ನು ನೋಡಿದ್ದೀರಿ, ಅದು ಕಳೆದ 4ವರ್ಷಗಳಲ್ಲಿ ಸೇಕಡ 150 ರಷ್ಟು ಜಾಸ್ತಿಯಾಗಿದೆ. ಮತ್ತು ಕೆಲವು ಧಾರಣೆಗಳು ಕೆಳಗಿಳಿದಿವೆ, ಹಳ್ಳಿಗಳವರಿಗೆ ಉತ್ಪತ್ತಿ ವೆಚ್ಚ ಒಂದು ಕಡೆ ಜಾಸ್ತಿಯಾಗಿದೆ, ಇನ್ನೊಂದು ಕಡೆ ಧಾರಣೆವಾಸಿ ಕಡಿಮೆಯಾಗಿದೆ. ಈ ಬಗ್ಗೆ ಏನು ಕ್ರಮ ಕೈಕೊಂಡಿದ್ದೀರಿ ? ಸಾಲದ್ದಕ್ಕೆ ತಕ್ಕಡಿ ಹಿಡಿಯುವವರ ಹಾವಳಿ ಬೇರೆ. ಮಾರ್ಕೆಟ್ಟುಗಳಿಗೆ

ಹೋಗಿ ಅಲ್ಲಿ ಅನ್ಯಾಯ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿ. ಶ್ರೀ ನಾಡಗೌಡ ಇಲಾಖೆಯಲ್ಲೇನು ಅನ್ಯಾಯವಾಗುತ್ತಿದೆ ಎಂದು ನೋಡಿ. ಉದಾಹರಣೆಗೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಮಾರಿದ ರೈತರಿಗೆ ಮಾರಿದ ದಿವಸವೇ ಹಣ ಕೊಡಬೇಕೆಂದಿದೆ. ಆದರೆ ಹಾಗೆ ಕೊಡುತ್ತಿಲ್ಲ. ದಾವಣಗೆರೆ ಮಾರ್ಕೆಟ್ಟಿನಲ್ಲಿ 3 ತಿಂಗಳಾದರೂ ಹಣ ದೊರೆಯುತ್ತಿಲ್ಲ. ಮಾರಾಟ ಮಾಡಿದ ದಿವಸವೇ ಹಣ ಕೊಡಬೇಕು ಎಂದು ಹೇಳಿದ್ದು ಎಲ್ಲಿ ಹೋಯಿತು? ತಕ್ಕಡಿಯವರು ಕೇಳಿದಾಗ ಹಣ ಕೊಡುವರು. ಆದುದರಿಂದ ಅವರಿಗೆ ಬೇಕಾದ ಅನುಕೂಲ ಮಾಡುವಿರಿ. ಅವರನ್ನು ವಿರೋಧ ಮಾಡಿಕೊಳ್ಳುವುದಿಲ್ಲ. ಇದರಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ಕಾಲ ಬದಲಾವಣೆಯಾಗಿದೆ ಈಗ. ಬೆಳೆದು ಮಾರುವವರಿಗೆ ಸರಿಯಾದ ಧಾರಣೆಯಿಲ್ಲ. ರೈತರಿಗೆ ಸಕಾಲದಲ್ಲಿ ಹಣ ಸಿಕ್ಕುತ್ತಿಲ್ಲ. ಕಂದಾಯ ಬಿಟ್ಟಿದ್ದೇವೆಂದು ಹೇಳುತ್ತೀರಿ. ಆದರೆ ತಾಸಿಲ್ದಾರರು ಗಂಗಳ, ಚೊಂಬು ಮುಂತಾದುವುಗಳನ್ನೆಲ್ಲಾ ಹರಾಜು ಹಾಕುತ್ತಿದ್ದಾರೆ. ಕಾನೂನಿಗೆ ವಿರುದ್ಧವಾಗಿ ವರ್ತಿಸಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಕಾನೂನು ಪ್ರಕಾರ ಪ್ರತಿಯೊಂದು ಜಮೀನಿಗೂ ಅಸಿಸ್ಟೆಂಟ್ ಕಮಿಷನರು ಮತ್ತು ಅಸಿಸ್ಟೆಂಟ್ ಎಂಜಿನಿಯರು ಹೋಗಿ ನೋಡಿ ಬೆಳೆ ಹೇಗೆ ಆಗಿದೆ, ನೀರು ಸರಬರಾಯಿ ಆಗಿದೆಯೇ ಎಂದು ನೋಡಿ ನಂತರ ಕಂದಾಯ ವಸೂಲು ಮಾಡಬೇಕು. ಹಾಗೆ ಮಾಡದೆ ಒಂದೊಂದು ಎಕರೆಗೆ 2—3 ಸಾವಿರ ರೂಪಾಯಿ ಬಾಕಿ ಕೇಳುತ್ತಿದ್ದಾರೆ. ಇದು ನಮ್ಮ ಕ್ಷೇತ್ರದಲ್ಲಿಲ್ಲ, ಭದ್ರಾ ಪ್ರಾಜೆಕ್ಟ್ ಇರುವ ಕಡೆ ಲಕ್ಷಗಟ್ಟಲೆ ಕೋಟಿಗಟ್ಟಲೆ ರೈತರು ಕೊಡಬೇಕಾಗಿದೆ. ಇದನ್ನು ಅಡ್ವೈಜರಿ ಕಮಿಟಿ ಮುಂದಿಡುವುದಕ್ಕೆ ಬರುವುದಿಲ್ಲ. ಕಂದಾಯ ಬಿಟ್ಟಿರುವುದಾಗಿ ಹೀಗೆ ವಸೂಲು ಮಾಡುತ್ತಿದ್ದಾರೆ. ಹೀಗಾದರೆ ನೀವು ನಡು ರಸ್ತೆಯಲ್ಲಿ ಹೋಗುವುದಕ್ಕಾಗುವುದಿಲ್ಲ. ಬೆಂಗಳೂರು ನಗರದಲ್ಲಿ ರಿಸರ್ವ್ ಪೋಲೀಸ್ ನಿಮ್ಮ ಸಹಾಯಕ್ಕೆ ಇರಬಹುದು, ಆದೇ ಬೇರೆ ಕಡೆ ಹಾಗಿರುವುದಿಲ್ಲ. ಇದನ್ನು ತಿಳಿದುಕೊಳ್ಳಬೇಕು.

ಮುಖ್ಯಮಂತ್ರಿಗಳು ಜಪಾನಿಗೆ ಹೋಗಿಬಂದಮೇಲೆ ವಿಧಾನಸೌಧಕ್ಕೆ ದೀಪಾಲಂಕಾರ ಮಾಡಿಸಿದರು. ಹಿಂದೆ ಶ್ರೀ ಹನುಮಂತಯ್ಯನವರು ವಿಧಾನಸೌಧ ಮೇಲೆ ಕೆತ್ತಿಸಿದ್ದುದನ್ನು ಅಳಿಸಿಹಾಕಿದರು. ಈಗ ಶ್ರೀ ವೀರೇಂದ್ರಪಾಟೀಲರ ಹೆಸರು ಚಿರಸ್ಥಾಯಿಯಾಗಿರುವಹಾಗೆ ದೀಪಾಲಂಕಾರ ಮಾಡಿಸಿದ್ದಾರೆ ಅದಕ್ಕೆ ಖರ್ಚುಮಾಡಿದ ಹಣವನ್ನು ಹಳ್ಳಿಗಾಡಿನವರ ಅನುಕೂಲಕ್ಕಾಗಿ ಉಪಯೋಗಿದ್ದರೆ ಎಷ್ಟೋ ಸಹಾಯವಾಗುತ್ತಿತ್ತು. ಹಳ್ಳಿಗಳಲ್ಲಿ ಬಾವಿಗಳನ್ನು ತೋಡಲು ಈ ಹಣ ವಿನಿಯೋಗಿಸಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಕ್ಯಾಬರೆ ಡ್ಯಾನ್ಸಿಗ್ ಬೇಕಾದರೆ 10 ಲಕ್ಷ ಕೊಡುವರು. ಹಳ್ಳಿಗಾಡಿನವರಿಗೆ ಅನುಕೂಲಮಾಡಲು ಹಿಂದುಮುಂದು ನೋಡುವರು. ಹೀಗೆ ಮಾಡುವುದರ ಉದ್ದೇಶವಾದರೂ ಏನೂ? ಜನರು ಚುನಾವಣೆ ಸಮಯದಲ್ಲ ಕೈಬಿಡುವುದಾದರೆ ಸಿನೀಮ ಸ್ಟಾರ್‌ಗಳನ್ನು ನಿಲ್ಲಿಸಿ ಓಟುಗಳಿಸಲು ಪ್ರಯತ್ನ ಮಾಡಬಹುದು, ಅವರು ಜನರಿಗೆ ಬೇಕಾದವರು, ಅವರಿಗೆ ಓಟು ಸಿಕ್ಕುವುದು. ಮೊನ್ನೆ ಚುನಾವಣೆಯಲ್ಲಿ ಅವರ ಸಹಾಯ ಪಡೆದರು. ಬೆಂಗಳೂರಿನಲ್ಲಿ ಶ್ರೀ ಹನುಮಂತಯ್ಯನವರನ್ನೆದುರಿಸಲು ದುಂದುವೆಚ್ಚ ಮಾಡುವುದಕ್ಕೆ ಬದಲಾಗಿ ಜನತೆಗೆ ಉಪಯೋಗವಾಗುವ ಕೆಲಸಗಳಿಗೆ ಅದನ್ನು ವಿನಿಯೋಗಿಸಿದ್ದರೆ ಧನ್ಯವಾದಗಳನ್ನರ್ಪಿಸಬಹುದಾಗಿತ್ತು. ಇಂದು ಸಮಾಜವಾದಿ ಸಮಾಜ ನಿರ್ಮಾಣವಾಗುತ್ತಿದೆ. ಶ್ರೀ ರಾಮಕೃಷ್ಣ ಹೆಗಡೆಯವರು ತಪ್ಪು ತಿಳಿಯಬಾರದು, ನಮಗೆ ಒದಗಿಸಿರುವ ಬಜೆಟ್ ಭಾಷಣದ ಪುಸ್ತಕದಲ್ಲಿ ಅವರು ಕೆಲವು ವಾಕ್ಯಗಳನ್ನು ಸೇರಿಸಿದ್ದಾರೆ. ಅದು ಉದ್ಧಟತನವಾಗಬಹುದು. ಕೇಂದ್ರ ಹೀಗೆ ಮಾಡಿದೆ, ಹಾಗೆ ಮಾಡಬಾರದಾಗಿತ್ತು ಎಂದು ತಿಳಿಸಿದ್ದಾರೆ. ಅನಿಷ್ಟಕ್ಕೆ ಶನೇಶ್ವರ ಗುರಿ ಎಂದು ಹೇಳುವಂತೆ ಕೇಂದ್ರ ಸರಕಾರ ಸಹಕರಿಸುವುದಿಲ್ಲ, ನಮಗೆ ತೊಂದರೆ ಮಾಡುತ್ತಿದೆ ಎಂದು ಕೇಂದ್ರ ಸರಕಾರದಮೇಲೆ ತಪ್ಪು ಹೊರಿಸುವ ಪ್ರಯತ್ನಮಾಡಿದ್ದಾರೆ. ಕೇಂದ್ರ ಸರಕಾರ ಮೈಸೂರಿಗೇನೂ ಅನ್ಯಾಯ ಮಾಡಿಲ್ಲ. ಅದು ಕೊಟ್ಟಿರುವ ಹಣಕಾಸಿನ ಸೌಲತ್ತು, ಇಂಟರಿಂ ರಿಲೀಫ್ ಕೈಗಾರಿಕಾ ಸೌಲತ್ತು ಮುಂತಾದ್ದೆಲ್ಲಾವನ್ನೂ ಗಮನಿಸದೆ ದುರಹಂಕಾರದಿಂದ ಉದ್ಧಟತನದಿಂದ ಕೇಂದ್ರದ ಮೇಲೆ ತಪ್ಪು ಹೊರಿಸಲುಹೊರಟಿದ್ದಾರೆ. ಕೇಂದ್ರದಮೇಲೆ ಯುದ್ಧ ಮಾಡಲು ಹೊರಟಿದ್ದಾರೆ. ಗದಾಯುದ್ಧವಾದಮೇಲೆ ದುರ್ಯೋಧನ ಸರೋವರದಲ್ಲಿ ಮುಳುಗಿಕೊಂಡು ಆಯ್ಯೋ ಎಂದು ಮರುಗಿದ ಹಾಗೆ ಇವರು ತೊಡೆ ಮುರಿದುಕೊಂಡು ಮರುಗುತ್ತಿದ್ದಾರೆ. ಈಗಲಾದರೂ ಇವರಿಗೆ ನಮ್ರತೆ ಇದೆಯೋ ಏನೋ ಎಂದರೆ ಅದೂ ಕಾಣುವುದಿಲ್ಲ. ಹಣಕಾಸಿನ ಮಂತ್ರಿಯವರ ಭಾಷಣದಲ್ಲಿ ಮೊದಲು ಒಂದೇ ವಾಕ್ಯವನ್ನು ಶ್ರೀಮತಿ ಇಂದಿರಾ ಗಾಂಧಿಯವರು ಈ ದೇಶದಲ್ಲಿ ಒಳ್ಳೆಯ ನಾಯಕಿಯಾಗಿ ಪರಿಣಮಿಸಿದ್ದಾರೆ. ಈ ದೇಶ ಅವರ ವಿಚಾರದಲ್ಲಿ ಅಚಲ ನಂಬಿಕೆಯನ್ನು ಇಟ್ಟಿದೆ ಎಂದು ಹೇಳಿದ್ದಾರೆ. ಇದು ನಿಷ್ಪಕ್ಷವಾದ ಮಾತೋ, ಮನಃ ಪೂರ್ವಕವಾಗಿ ಬಂದಿರುವ ಮಾತೋ ಗೊತ್ತಾಗುವುದಿಲ್ಲ. ಏಕೆಂದರೆ ಮುಂದಿನ ಪ್ಯಾರಾಗಳನ್ನು ನೋಡಿದರೆ ಯಾವ ರೀತಿಯಾದ ಮನಃಪೂರ್ವಕವಾದ ಕಳಕಳಿ ಇಲ್ಲ ಎನ್ನುವುದು ಗೊತ್ತಾಗುತ್ತದೆ.

3-00 P.M.

ಶ್ರೀ ರಾಮಕೃಷ್ಣ ಹೆಗಡೆ.—ಒಳ್ಳೆಯ ಮಾತು ಹೇಳಿದರೂ ಅದರಲ್ಲಿ ತಪ್ಪು ಹುಡುಕುತ್ತಿದ್ದಾರೆ. ಪ್ರಾಯಶಃ ಇವರ ಮನಸ್ಸಿನಲ್ಲಿ ಹೇಗೆ ಇದೆಯೋ ಹಾಗೆ ಹೇಳಬೇಕು ಎಂದು ಕಾಣುತ್ತದೆ.

[MR. DEPUTY CHAIRMAN in the Chair]

ಶ್ರೀ ಎಚ್. ಸಿದ್ಧವೀರಪ್ಪ.—ಇನ್ನೊಂದು ವಿಷಯವನ್ನು ತಮಗೆ ತಿಳಿಸುತ್ತೇನೆ. ಈ ಹೊತ್ತು ನಮ್ಮ ರಾಜ್ಯದಲ್ಲಿ ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಅದಕ್ಷತೆ ತುಂಬಿದೆ. ಶ್ರೀಮಾನ್ ರಾಜಶೇಖರ ಮೂರ್ತಿ ಅವರ ಕೈಗಾರಿಕೆ ಇಲಾಖೆಯನ್ನು ತೆಗೆದುಕೊಂಡರೆ, ಅದು ಎಷ್ಟು ಬೆಳವಣಿಗೆಯಾಗಬೇಕೆಂದು ನಾವು ನಿರೀಕ್ಷೆ ಮಾಡಿದ್ದೆವೋ ಹಾಗೆ ಆಗಿಲ್ಲ. ಚಾರ್ಟ್ ತಯಾರು ಮಾಡಿ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಆದರೆ ಕಾರ್ಯಗತ ವಾಗಿ ಏನೂ ಆಗುತ್ತಿಲ್ಲ. ಮೈಸೂರು ದೇಶ ಭಾರತದ ಮ್ಯಾಂಚೆಸ್ಟರ್ ಎಂದು ಹೇಳುತ್ತಿದ್ದ ಕಾಲವಿತ್ತು. ಆ ಪ್ರಖ್ಯಾತಿಯನ್ನು ಈಗ ಕಳೆದುಕೊಂಡಿದೆ. ಏನು ಕಾರಣವೋ ಗೊತ್ತಿಲ್ಲ. ಕೈಗಾರಿಕೆಗಳ ಬೆಳವಣಿಗೆಯಾಗುತ್ತಿಲ್ಲ, ಕುಂಠಿತವಾಗುತ್ತಿದೆ. ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ತೆಗೆದುಕೊಂಡರೆ ಬೆಂಗಳೂರು ನಗರದಲ್ಲಿ ಓಡಾಡುವುದೇ ಕಷ್ಟವಾಗಿದೆ. ನಮ್ಮಷ್ಟಕ್ಕೆ ನಾವು ರಸ್ತೆಯಲ್ಲಿ ಹೋಗುತ್ತಿದ್ದರೆ ನಮ್ಮ ಮೇಲೆ ಹತ್ತುವುದಕ್ಕೇ ವಾಹನಗಳು ಬರುತ್ತವೆ. ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ, ದೇವರೇ ಏನು ಕಾಲ ತಂದೆ ಎಂದು ಬಡಜನರು ವಿಚಾರ ಮಾಡುವ ಕಾಲ ಬಂದಿದೆ. ಎಲ್ಲ ಇಲಾಖೆಗಳಲ್ಲೂ ಅದಕ್ಷತೆಯನ್ನು ಎತ್ತಿ ತೋರಿಸುತ್ತಿದ್ದಾರೆ ಮತ್ತು ಪ್ರದರ್ಶನ ಮಾಡುತ್ತಿದ್ದಾರೆ.

ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಗೆದ್ದಿದ್ದೇವೆ ಎನ್ನುವ ಹೆಮ್ಮೆ ನಮಗೆ ಇಲ್ಲ. ನಾವು ಗೆದ್ದಿದ್ದೇವೆ, ಆದುದರಿಂದ ಏನು ಬೇಕಾದರೂ ಮಾಡುತ್ತೇವೆ ಎನ್ನುವ ಹೆಮ್ಮೆ ನಮಗೆ ಇಲ್ಲ. ನಾವು ಇನ್ನೂ ನಮ್ರತೆಯಿಂದ ಇರಬೇಕು, ಜನಗಳ ನಮ್ರ ಸೇವಕರಾಗಿ ಈ ದೇಶ ದಲ್ಲಿ ನಮ್ಮ ಕರ್ತವ್ಯವನ್ನು ಮಾಡಬೇಕು ಎನ್ನುವುದನ್ನು ನಾನು ಅತಿ ವಿನಯದಿಂದ ಹೇಳುತ್ತಿದ್ದೇನೆ. ನಾನು ಈಗ ಏನು ಟೀಕೆ ಮಾಡುತ್ತಿದ್ದೇನೆ ಅದರ ಹತ್ತರಷ್ಟು ಹಿಂದೆ ಟೀಕೆ ಮಾಡುತ್ತಿದ್ದೆ. ನಮ್ಮ ಪಕ್ಷದಲ್ಲಿ ಕೇವಲ 23 ಜನರಿದ್ದಾಗ ಇದಕ್ಕಿಂತ ಕಟುವಾಗಿ ನಾನು ಟೀಕೆ ಮಾಡುತ್ತಿದ್ದೆ. ಈಗ ನಾಲಗೆ ಹಿಡಿದು ಮಾತನಾಡುತ್ತಿದ್ದೇವೆ. ನೀವೆಲ್ಲ ಹಡಗಿನ ವ್ಯಾಪಾರಿ ಜನಗಳು ಸ್ವಲ್ಪ ಸ್ವಲ್ಪದರಲ್ಲಿ ತೃಪ್ತರಾಗುವ ಜನರಲ್ಲ. ಬೆಕ್ಕು ಮನೆಯಲ್ಲಿ ಎಲ್ಲರ ಕಣ್ಣಿಗೂ ಕಾಣದ ಹಾಗೆ ಹಾಲು, ಬೆಣ್ಣೆ ತಿಂದು ಇಷ್ಟು ದಿವಸ ದಪ್ಪವಾಗಿ ಓಡಾಡಿತು. ಇಲಿಗಳು ಕೂಡ ರೊಚ್ಚಿಗೆದ್ದಿವೆ. ಬೆಕ್ಕನ್ನು ಇಲಿಗಳು ತಿನ್ನತಕ್ಕ ರೀತಿಯಲ್ಲಿ ಈ ಹೊತ್ತು ಜನ ನಿಮ್ಮ ಮೇಲೆ ತಿರುಗಿ ಬಿದ್ದಿದ್ದಾರೆ. ಇದನ್ನು ಮರೆಯಬಾರದು. ಯಾವತ್ತಿಗೂ ಜನತೆಯ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು.

ಅನೇಕರು ಕೈಗಾರಿಕೆಗಳನ್ನು ಮಾಡುವುದರಲ್ಲಿ ಇವರಿಂದ ಲಾಭ ಪಡೆದುಕೊಂಡು ಆ ಲಾಭ ದಲ್ಲಿ ಕೆಲವು ಮಂತ್ರಿಗಳು ಭಾಗಿಗಳಾಗತಕ್ಕ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ದೇಶದಲ್ಲಿ ಜನ, ತಿಳಿದಿರತಕ್ಕವರು, ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಇವರು ಕೆಲವು ದುಡ್ಡನ್ನು ಪಾಶ್ಚಿಮಾತ್ಯ ಬ್ಯಾಂಕುಗಳಲ್ಲಿ ಇಟ್ಟಿದ್ದಾರೆ ಎಂದೂ ಸಹ ಜನ ಮಾತನಾಡುತ್ತ ಇದ್ದಾರೆ.

ಇನ್ನು ಲಾ ಅಂಡ್ ಆರ್ಡರ್ ವಿಚಾರ ಹೇಳಬೇಕಾದ್ದೇ ಇಲ್ಲ. ಅನೇಕ ಖೂನಿ ಕೇಸುಗಳು ಈ ಹೊತ್ತಿನವರೆಗೂ ರುಜುವಾತಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿರುವ ತೆಕ್ಕಲಕೋಟೆಯಲ್ಲಿ ಒಬ್ಬ ತಾಲ್ಲೂಕು ಬೋರ್ಡ್ ಸದಸ್ಯ, ಹಿಂದುಳಿದ ಪಂಗಡಕ್ಕೆ ಸೇರಿದ ಮನುಷ್ಯ, ಸರ್ಕಾರಿ ಬಸ್ಸಿನಲ್ಲಿ ಹೋಗುತ್ತಿರಬೇಕಾದರೆ, ಹಾಡ ಹಗಲಿನಲ್ಲಿ ಒಬ್ಬ ಕಾಂಗ್ರೆಸ್ ಪುಡಾರಿಯು ಜೀಪನ್ನು ಬಸ್ಸಿಗೆ ಅಡ್ಡವಾಗಿಟ್ಟು, ಅವನನ್ನು ಹಿಡಿದು ಖೂನಿ ಮಾಡಿದರು. ಬಸ್ಸಿನಲ್ಲಿ 18—20 ಜನ ಪ್ರಯಾಣಿ ಕರಿದ್ದರು. ಈ ಖೂನಿಯಾಗಿ ಆರೇಳು ತಿಂಗಳಾದರೂ ಈ ಹೊತ್ತಿನವರೆಗೂ ರುಜುವಾತಾಗಿಲ್ಲ; ಅದು ಏನಾಯಿತು ಎಂದು ಹೇಳಿಲ್ಲ. ಅದೇ ರೀತಿಯಲ್ಲಿ ಅನೇಕ ಜನ ಅಸೆಂಬ್ಲಿ ಸದಸ್ಯರನ್ನು, ನಮ್ಮ ಪಕ್ಷದವರನ್ನು ಚುನಾವಣೆಯ ಕಾರ್ಯಕ್ರಮಕ್ಕೆ ಹೋಗಿದ್ದಾಗ ಹೊಡೆಸಿದರು. ನಾವು ಫಿರ್ಯಾದು ಕೊಟ್ಟಾಯಿತು, ಅದೇನಾಯಿತು ಎಂದು ಗೊತ್ತಿಲ್ಲ. ನಮ್ಮ ಪಕ್ಷದವರ ವಿರುದ್ಧವಾಗಿ ಆ ಹೊತ್ತೇ ಕೇಸು ತೆಗೆದುಕೊಂಡು ಆ ಹೊತ್ತೇ ರಿಜಿಸ್ಟರ್ ಮಾಡಿಕೊಂಡಿರುವುದು ಎಷ್ಟೋ ಇವೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಯಾರ ಸರ್ಕಾರವೇ ಬರಲಿ, ಸರ್ಕಾರ ನ್ಯಾಯ, ಧರ್ಮ, ಸತ್ಯದ

ದೃಷ್ಟಿಯಿಂದ ಧರ್ಮ ರಕ್ಷಣೆ ಮಾಡಿ ದುಷ್ಟರನ್ನು ಶಿಕ್ಷೆ ಮಾಡಬೇಕು. ಆ ದೃಷ್ಟಿಯಿಂದ ಈ ಸರ್ಕಾರ ಹೋಗಿಲ್ಲ. ತಮಗೆ ಬೇಕಾದವರು ಸಹಸ್ರಾರು ತಪ್ಪು ಮಾಡಿದರೂ ಆ ತಪ್ಪುಗಳನ್ನೆಲ್ಲ ಮುಚ್ಚಿ ಬಿಡುತ್ತಾರೆ. ಸಹಕಾರ ಸಂಘಗಳಲ್ಲಿ ತಮಗೆ ಬೇಕಾದವರು, ಆ ಪಕ್ಷಕ್ಕೆ ಸೇರಿರುವವರು ಹಣವನ್ನು ದುರುಪಯೋಗ ಮಾಡಿದ್ದಾರೆ, ದುಡ್ಡು ತಿಂದಿದ್ದಾರೆ, ಲಕ್ಷಗಟ್ಟಲೆ ದುಡ್ಡು ತಿಂದಿದ್ದಾರೆ. ಆದರೆ ಯಾರ ಮೇಲೂ ಕೇಸು ಹಾಕಿಲ್ಲ. ಸಹಕಾರ ಸಂಘಗಳೊಂದರಿಂದಲೇ 200 ಕೋಟಿ ರೂಪಾಯಿ ಗಳಷ್ಟು ಹಣ ದುರ್ವ್ಯಯವಾಗಿದೆ. ಅದಕ್ಕೆ ಕೂಡ ಲೆಕ್ಕ ಸಿಕ್ಕುತ್ತಿಲ್ಲ. ಹಣ ಬರುತ್ತಿಲ್ಲ. ಈ ರೀತಿ ಪಕ್ಷಪಾತ ಮಾಡುವ ಆಡಳಿತದ ಕೊನೆಗಾಲವಾಗತಕ್ಕ ಸಮಯ ಬಹಳ ಹತ್ತಿರವಿದೆ. ಇದರ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ನಮ್ಮ ರೈತರ ಕಡೆಯಿಂದ ನೂರು ರೂಪಾಯಿ ಬರಬೇಕಾಗಿದ್ದರೆ ಅವರ ಬೆನ್ನು ಹತ್ತಿ ವಸೂಲು ಮಾಡುತ್ತಾರೆ. ಇಂಟರ್ ಸ್ಟೇಟ್ ಸೇಲ್ಸ್ ಟ್ಯಾಕ್ಸ್ ಎಂದು ಹಿಂದೆ ವಸೂಲು ಮಾಡಿದರು. ಕಾನೂನು ಪ್ರಕಾರ ಅದು ಸರಿಯಲ್ಲ ಎಂದು ಮೈಸೂರು ರಾಜ್ಯದ ಕೆಲವು ವರ್ತಕರು ಹೈಕೋರ್ಟ ನಲ್ಲಿ ರಿಟ್ ಅರ್ಜಿ ಹಾಕಿದಾಗ ನಮ್ಮ ಹೈಕೋರ್ಟ್ ಕೂಡ ಆ ರೀತಿ ಮಾರಾಟ ತೆರಿಗೆ ವಸೂಲು ಮಾಡುವುದು ಸರಿಯಲ್ಲ ಎಂದು ಹೇಳಿತು. ಒಂದೇ ರಾತ್ರಿ ಒಂದು ಕೋಟಿ 80 ಲಕ್ಷ ರೂಪಾಯಿ ವ್ಯಾಪಾರಸ್ಥರಿಗೆ ವಾಪಸು ಕೊಟ್ಟರು. ಆಮೇಲೆ ಸುಪ್ರಿಂ ಕೋರ್ಟನಲ್ಲಿ ತೆರಿಗೆ ಹಾಕಿದ್ದು ಸರಿ ಎಂದು ತೀರ್ಮಾನವಾಯಿತು. ಆ ತೀರ್ಪು ಬಂದಮೇಲೆ ಹಣಕಾಸಿನ ಮಂತ್ರಿಗಳಾದ ರಾಮಕೃಷ್ಣ ಹೆಗಡೆ ಅವರು ಇದೇ ಸಭೆಯಲ್ಲಿ ಹೇಳಿದರು, ವ್ಯಾಪಾರಸ್ಥರಿಗೆ ಕೊಟ್ಟಿರುವುದನ್ನು ಅವರಿಂದ ತರಿಸಿ ಕೊಳ್ಳುತ್ತೇನೆ ಎಂದು. ವ್ಯಾಪಾರಸ್ಥರ ಕೈಯಲ್ಲಿ ಒಬ್ಬೊಬ್ಬರ ಹತ್ತಿರವೂ 5 ಲಕ್ಷ, 10 ಲಕ್ಷ, 15 ಲಕ್ಷ ರೂಪಾಯಿ ಇದೆ, ಅವರಿಂದ ಹಿಂದಕ್ಕೆ ಪಡೆಯುತ್ತೇವೆಂದು ಹೇಳಿ ಮೂರುವರೆ ವರ್ಷವಾಯಿತು. ಈ ಹೊತ್ತಿನವರೆಗೂ ತರಿಸಿಲ್ಲ, ಅವರ ಹತ್ತಿರ ಹಣ ಕೇಳಲಿಲ್ಲ. ಮೊನ್ನೆ ಚುನಾವಣೆಯ ಕಾಲದಲ್ಲಿ ಶ್ರೀ ವೀರೇಂದ್ರ ಪಾಟೀಲರು ಹೋಗಿ ಹೇಳಿದರು, ನಿಮ್ಮಿಂದ ವಸೂಲು ಮಾಡಬೇಕಾಗಿದ್ದ ಹಣ ವನ್ನು ಶ್ರೀ ನಿಜಲಿಂಗಪ್ಪನವರ ಮಾತಿಗೆ ಕಟ್ಟು ಬಿದ್ದು ವಸೂಲು ಮಾಡದೆ ಇನ್ನೂ ಟೈಂ ಕೊಟ್ಟಿ ದ್ದೇವೆ, ಈಗಲೂ ಹಣ ವಸೂಲು ಮಾಡಿಲ್ಲ, ಆ ಹಣವನ್ನು ಉಪಯೋಗಿಸಿ ನೀವು ವ್ಯಾಪಾರ ಮಾಡಿದ್ದೀರಿ. ಆದ್ದರಿಂದ ಅದರ ಮೇಲೆ 6 ಪರ್ಸೆಂಟ್‌ನಂತೆ ಎಷ್ಟು ಬಡ್ಡಿ ಆಗುತ್ತದೆಯೋ ಅಷ್ಟು ಹಣವನ್ನಾದರೂ ನಮ್ಮ ಫಂಡಿಗೆ ಕೊಡಿ ಎಂದು ಕೇಳಿದರು.

ಶ್ರೀ ವೀರೇಂದ್ರ ಪಾಟೀಲ್.—ಯಾರಿಗೆ ?

ಶ್ರೀ ಎಚ್. ಸಿದ್ದವೀರಪ್ಪ.—ಮರ್ಚೆಂಟ್ಸ್‌ಗೆ. ಸ್ಪೀಕರ್‌ರವರು ಒಂದು ಕಮಿಷನ್ ಬೇಕಾದರೆ ನೇಮಿಸಲಿ ಅಲ್ಲಿ ಹೆಸರುಗಳನ್ನು ಕೊಡುತ್ತೇನೆ.

ಈ ರೀತಿ ಸರ್ಕಾರದ ದುಡ್ಡು ಒಂದಲ್ಲ ಎರಡಲ್ಲ ಎಷ್ಟೋ ಕಡೆ ದುರುಪಯೋಗವಾಗಿದೆ. ಇದರ ಬಗ್ಗೆ ಎಷ್ಟು ಹೆಸರು ಹೇಳಲಿ. ಇವೆಲ್ಲಾ ರೈತರ ದುಡ್ಡು. ಇವೆಲ್ಲಾ ನ್ಯಾಯವಾಗಿ ರೈತರು ಕೊಡುವ ದುಡ್ಡು. ಈ ದುಡ್ಡನ್ನು ವ್ಯಾಪಾರದವರಿಗೆ ಕೊಟ್ಟು ಅದರಿಂದ ಬರತಕ್ಕಂಥ ಬಡ್ಡಿಯನ್ನು ಒಂದು ಫಂಡ್ ರೂಪದಲ್ಲಿ ನಮಗೆ ಕೊಡಿ ಎಂದು ಕೇಳುವ ಸರ್ಕಾರ ಇನ್ನು ಎಷ್ಟು ದಿವಸ ಇರಬೇಕು ? ಅದನ್ನು ಯೋಚನೆ ಮಾಡಬೇಕು. ಹೀಗೆ ಹೇಳುತ್ತಾ ಹೋದರೆ ಇನ್ನೂ ಬೇಕಾದಷ್ಟು ಇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಯಾಗಿ 3-4 ವರ್ಷವಾಯಿತು ಎಂದು ಕಾಣುತ್ತದೆ. ಅವರ ವಿಚಾರದಲ್ಲಿ ನಾನು ಚೆನ್ನಾಗಿ ನಂಬಿಕೆ ಇಟ್ಟುಕೊಂಡಿದ್ದೆ. ಆದರೆ ಅದೆಲ್ಲಾ ಡಿಸ್‌ರಿಗಾರ್ಡ್ ಆಯಿತು. ಅವರ ಯಜಮಾನರು ಹೇಳಿಕೊಟ್ಟ ಪಾಠ ಹಾಗೆ ಇದೆ. ಅದರಲ್ಲಿ ಕೊಂಚವೂ ಬಿಟ್ಟು ಹೋಗುವ ಹಾಗಿಲ್ಲ. ಅವರು ಏನು ಒಂದು ಶಿಸ್ತು ಹಾಕಿಕೊಟ್ಟಿದ್ದಾರೆ ಅದರಲ್ಲಿ ಬಹಳ ಜನರು ಬೇಸತ್ತಿದ್ದಾರೆ. ಆದುದರಿಂದ ಆ ಕಡೆಯಲ್ಲಿರುವ ಮಾನ್ಯ ಸದಸ್ಯರನ್ನು ನಾನು ಕೇಳುತ್ತೇನೆ. ನೀವು ಏತಕ್ಕೆ ಈ ಪಾಪಕ್ಕೆ ಗುರಿಯಾಗುತ್ತೀರಿ ! ಈ ರೀತಿ ನೂರಾರು ಇವೆ. ಎಷ್ಟೋ ತೊಂದರೆಗಳನ್ನು ಜನಗಳಿಗೆ ಕೊಡುತ್ತಿದ್ದೀರಿ. ನೀವು ಇಂದಲ್ಲ ನಾಳೆ ಜನತೆಯ ಮುಂದೆ ಹೋಗಬೇಕಾಗುತ್ತದೆ. ಆವಾಗಲಾದರೂ ಮಾಡಿದ ಪಾಪ ವನ್ನು ಅನುಭವಿಸಬೇಕಾಗುತ್ತದೆ. ಆದರೆ ಯಾರೋ ಮಾಡಿದ ಪಾಪವನ್ನು ಯಾರ ತಲೆಯಮೇಲೋ ಹಾಕಿ ಅವರು ಅನುಭವಿಸಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಬಜೆಟ್ಟಿಗೆ ನಾನು ಒಪ್ಪಿಗೆ ಕೊಡುವುದಿಲ್ಲ, ಈ ಬಜೆಟ್ ಸರಿಯಾಗಿಲ್ಲ, ಜನತೆಯಲ್ಲಿ ಯಾವ ರೀತಿಯಾಗಿಯೂ ಪ್ರೇಮ ವಿಶ್ವಾಸವಿಲ್ಲ. ಆದುದರಿಂದ ಈ ಬಜೆಟ್ಟಿಗೆ ನಮ್ಮ ಅಸ್ತು ಇಲ್ಲ ಮತ್ತು ಅವರ ವ್ಯಕ್ತಿತ್ವ ವನ್ನು ಉಳಿಸಿಕೊಳ್ಳಲಿ ಎಂದು ನಿಮ್ಮ ಮೂಲಕ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇವೆ.

Sri B. P. KADAM (Karwar).—Mr. Speaker, Sir, the Hon. Finance Minister has largely dilated upon so many issues, and he has started with a praise for the Prime Minister. I do not know what exactly is the cause for the praise—it is just to retrieve the position and to amend for their own abuses against the Prime Minister and top leaders of the Government of India. I had no desire to dilate upon the elections. For over a month and a half, prior to the elections, the Hon. Chief Minister of the State assumed the position of a great heroic General like whom World History must not have seen any. He was in such an adventurous spirit to say 'border and water,—*nela* and *jala*—and he condemned all the Congress (R) people saying that they are all traitors and they should not be supported because they are going to betray the State's interests. He started condemning everybody and said that he should send 27 brave men of his party to the Lok Sabha. Now that the elections are over, I would like to ask him respectfully : 'where are his 27 brave men ; are they drowned in some river or in any gutter?' Is it not a fact that the Hon. Finance Minister commenting upon the results in 1967 of North Kanara district told the press Reporters : 'the people got leaders they deserved'. That means that the North Kanara people are useless and elected useless people. May I ask him, why the person, who was elected to the Lok Sabha in 1967 on of our support, was now supported by the Finance Minister if he was bad and why did he embrace him recently by supporting him for the Lok Sabha? The Government got what they deserved.

They held a political conference in Belgaum in the middle of February last year and broke the heads of many of the border leaders. Just a few hours prior to the Conference the Chief Minister requested the Police to attack us if there was a black flag demonstration. The result was, the Police were beating people even when they were unconscious, for it was the policy of the Government to kill us and murder us. When the Hon. Chief Minister made a mountain of the border issue and he got what he deserved. The enlightened masses did not care for his statements. The masses, both in Maharashtra and Mysore are well aware that the border issue is a minor one. The Hon. Chief Minister has made a mountain of the border issue, which in my opinion, is not baffling the masses. The masses realise that it does not matter whether some land is here or there though the issue is made very big by the leaders of the State. That is why it is a pointer that the issue must be settled on some recognised fundamental principles and the friction created is ended here and just now to strengthen the cause of national integration.

Coming to administration, the Hon. Finance Minister has made a reference to so many things ; he says that for the last so many years the British legacy has haunted us and we are just correcting ourselves. Sir, I know what an amount of corruption is there in the Government. In all the big P. W. D. contracts, the estimates are raised and lot of percentage is pocketed by the Government itself and the money is used

for political purposes. Can the Hon. Chief Minister deny that he has not spent Rs. 2 lakhs for each of his candidate on his own and even for the grand alliance candidate he has spent not less than One lakh of rupees? Can he say that he has not hand-in-glow with those big concerns in the State? Can he not make it very clear why so many Jeeps, Cars and conveyances from private industries and public undartakings were moving in various constituencies for election propoganda? Is this not bribery? When there is a powerful Secretary in the Government who had determined to do some-thing he was shifted somewhere repeatedly. If the Government wants to have a firm administration they should not unnecessarily interfere with the officers of the Secretariat. The delays are so much that people from mofussil areas are called to rush to the Secretariat to carry out their work. Is it not possible for the Government to have a policy to expedite all the correspondences and to have a time-limit fixed for expediting the correspondences? Until and unless the Government bestows its attention to all these things there cannot be a firm and fair administration.

Then the Hon. Minister has stated about minor irrigation works. I know Minor irrigation is quite necessary. For the last two years I have carried a lot of correspondence with the Department of Minor Irrigation and the Deputy Commissioner of North Kanara suggested for making site inspection by the Executive Engineer and the Assistant Engineer concerned and myself. When we started inspection of the site the Executive Engineer was hanging his head in shame. Some villagers told us that in order to find out existing irrigation works they have to spend fifty rupees. Every year a lot of amount is stated to have been spent for the maintenance of irrigation works. Sir, there has been lot of corruption in the Department and the officers of the P.W.D. are carrying on the works for their personal benefits and not for the benefit of the masses. They are carrying on the works only for the benefits of the big contractors and bosses here. The talk of Five year plans, irrigation works, major developmental schemes is all bogus. Hardly fifty per cent of the amount is spent and the rest is being pocketed.

Then coming to co-operation, may I ask the Hon. Minister for Finance as to how many co-operatives in the State, particularly in the North Kanara, are earning profit? Whether there is a proper audit of accounts? Can he rectify these co-operatives where there is a lot of misappropriation and mis-management going on, at the hands of his stooges.

Sir, I come from a district which is almost 85 per cent forest area. Last year we had a small conference in the chambers of the Hon. Finance Minister somewhere on the 18th of March last year. The concerned Minister and the officers were all present. The concerned Minister stated that the forest manual for our area would be completed within fifteen days. Now one year has gone by but no work has been done. They do not have sense to achieve things speedily and in a spirit of anxiety.

(SRI B. P. KADAM)

Then I would like to speak about the preservation of wild animals. On a previous occasion in this Assembly in about 1964, I spoke strongly about the extermination of tigers as such. If the present policy is continued I think all the tigers would be extinct within a short span of time. I had suggested to the Chief Conservator of Forests that some compensation is paid to the people whose Catte are lifted by the State so that the people should not have any grudge or hostility againt the tigers. Such a measure has been adopted by the Rajasthan Government. Therefore it is necessary to see that the people are compensated by the State and there must be some sort of affection among the people for the preservation of tigers. To create this affection education is necessary otherwise the entire race is going to be extinct within a short time.

Then Sir, the Hon. Minister has referred to the communications, power, electricity and so many other things. May I ask him how many centuries he would take to electrify a village in North Kanara District ?

Sri RAMAKRISHNA HEGDE.—If only the Hon. Member had cared to read the speech it would have been clear for him. It has been stated there that in the next five years we shall electrify every single village in the State.

Sri B. P. KADAM.—Sir, there are instances wherein some particular villages are being included again and again for electrification but are not electrified at all. In another village Majali in Karwar Taluka prior to the 1967. Elections electric poles were being fixed and once the elections were over and prior to the Counting, the poles were removed. I do not know why it is happening like this. Just prior to elections the electric poles were brought and after the elections are over, they have been removed. Labour, money and energy have been wasted They Policy of the Government is to give power to every village. In North Kanara District, Karwar, Supa and Haliyal will never see electric lights. There should not be discrimination like this. In North Kanara itself we have got richest electrical potential. When that is the position I do not know why this some particular Taluk ane being discriminated.

3-30 P.M.

About communication how many times I should tell about this. A President of the Road Congress had observed the difference between South Kanara and North Kanara in wealth. It was further observed that though the District has got vast potential, for want of communication, t is lagging far behind when compared to South Kanara. Therefore, I once again request the Government that top priority should be given to the communication. These are not the days of bullock carts. If the people are to be given all facilities in your administration, it is quite necessary that good roads are built.

I have often said that there should be legislation for prohibiting the burning of cow dung. Cow dung is a precious manure for ryots. I stated during 1954 on the floor of the Legislative Assembly of Bombay that indiscriminate use of fertilizer will be a fatal. Some members could not understand the point. It has been rightly realised by all the people and villagers that the Cow dung is a most precious manure. The people round about Belgaum have realised this now. The cow dung should be used in good proportion. About 30 years back in U. S. A. the agricultural officers started saying that the fertilizers can be used without using farm yard manure. Some of our so called Agricultural Officers who claim to be experts in the line know nothing about the use of fertilizers. They do not know what are the nutrition contents of the fertilizers. With the use of fertilizers, some of the fields have almost become barren. Once they were booming with corn with the use of cow dung. Now the fertilizers are being used indiscriminately. The plants are drying up during the second crop. The rate of the fertilizers also is very high. Therefore it is very necessary that burning of cow dung is prohibited if necessary by statute.

It is well known that we have to spend nearly Rs. 2 crores on foreign exchange for coconut products from foreign countries. Why don't you prohibit the consumption of tender coconut in the country so that we can save a huge quantily of coconut for producing coconut products.

SRI RAMAKRISHNA HEGDE.—It is good for kidney trouble. It is a nutritious food.

SRI B. P. KADAM.—My candid opinion is there. The consumption of tender coconut should be prohibited so that you can save foreign exchange, that is about Rs. 2 crores. Even the former food Minister, had stressed upon this point. This point should not be taken lightly. The Hon'ble Minister has referred to mal-nutrition and all that. This is a bad feature. Mal-nutrition is there. Simply by attacking the Government of India the problem cannot be solved. It can only be solved by determined efforts. Alround sincerety at all levels including at the level of Ministers is required to tackle any problem sucessfully so that common man can be benefitted. In such an effort, the black-marketers should be eradicated from the Society. The commonman feels that he has no respect because he is not able to earn through. Some of the people who were not able to earn anything sometime back, are millioneers to day. Such people are being encouraged and these people are playing prominent role in the Society. That is why there is discontentment among the people. That is why the entire troubles started in West Bengal. Unless the black-marketing and corruption are eliminated from the Society, whatever improvements you do will not be taken into account and it will not be useful also. Unless the matters are corrected as early as possible, there will be another storm which will engulf all those unwanted people. Thank you.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರುವ ಬಡ್ಜೆಟ್ ಬಹಳ ವೈಶಿಷ್ಟ್ಯತೆಯನ್ನು ಪಡೆದಿದೆ. ಅವರು ತಮ್ಮ ಭಾಷಣದ ಮೊದಲ ಹತ್ತು ಪುಟಗಳಲ್ಲಿ ಕೇಂದ್ರ ಸರ್ಕಾರದ ನಿಲುವನ್ನು ಟೀಕೆ ಮಾಡಿದ್ದಾರೆ. ಈ ಬಡ್ಜೆಟ್ಟನ್ನು ಮಂಡಿಸುವ ಮುನ್ನ ತಮ್ಮ ನಿಲುವು ಚೊಕ್ಕವಾಗಿದೆಯೇ ಎಂಬುದನ್ನು ವಿಚಾರ ಮಾಡಬೇಕಾಗಿತ್ತು. ಈ ಸರ್ಕಾರ ಎಷ್ಟು ಪ್ರಾಮಾಣಿಕತೆಯಿಂದ ನಡೆಯುತ್ತಿದೆಯೆಂಬುದು ಎಲ್ಲರಿಗೂ ಗೊತ್ತಿರುವಾಗ ಕೇಂದ್ರ ಸರ್ಕಾರದ ಬಗ್ಗೆ ಈ ರೀತಿಯ ಟೀಕೆಗಳನ್ನು ಮಾಡಬಾರದಾಗಿತ್ತು. ಮೊದಲು ತಮ್ಮಲ್ಲಿರುವ ಹುಳುಕನ್ನು ಸರಿಪಡಿಸಿಕೊಂಡು ನಂತರ ಕೇಂದ್ರ ಸರ್ಕಾರದ ಬಗ್ಗೆ ಹೇಳಿದ್ದರೆ ಚೆನ್ನಾಗಿತ್ತು. ಈ ರಾಜ್ಯದಲ್ಲಿರುವ ಇಂದಿನ ಆಡಳಿತ ಬಹಳ ಸತ್ಯದಿಂದ ಕೂಡಿದೆಯೆಂದು ಹೇಳಿದ್ದಾರೆ. ಆದರೆ ಈ ಆಡಳಿತದಲ್ಲಿ ಸತ್ಯವೂ ಇಲ್ಲ, ಸತ್ವವೂ ಇಲ್ಲವೆಂದು ನಾನು ಹೇಳುತ್ತೇನೆ. ಇದು 1972ರ ಆರಂಭದಲ್ಲಿ ರಾಜ್ಯದಲ್ಲಿ ಮತದಾನ ನಡೆಯುವುದಕ್ಕೆ ಮುಂಚೆ ನಾನು ಮಂಡಿಸುತ್ತಿರುವ ಕೊನೆಯ ಆಯವ್ಯಯ ಪತ್ರವೆಂದು ಮಾನ್ಯ ಮಂತ್ರಿಗಳು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದ್ದಾರೆ. ಅಷ್ಟರೊಳಗೆ ಎಷ್ಟು ಹಣ ಹೊಡೆಯುವುದಕ್ಕೆ ಸಾಧ್ಯವೆಂದು ಈ ಮಂತ್ರಿಮಂಡಲದವರು ವಿಚಾರ ಮಾಡುತ್ತಿದ್ದಾರೆ. ದುಡ್ಡು ಹೊಡೆಯುವುದರಲ್ಲಿ ಮುಖ್ಯಮಂತ್ರಿಯವರೇ ಮೊದಲನೆಯವರೆಂದು ಬಹಿರಂಗವಾಗಿ ಹೇಳಬೇಕಾಗಿದೆ. 75 ಕೋಟಿ ರೂಪಾಯಿಗಳನ್ನು ನೀರಾವರಿ ಮತ್ತು ವ್ಯವಸಾಯದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಇವೊತ್ತಿನದಿವಸ ನೀರಾವರಿ ಬಾಬಿಗಾಗಿ ಖರ್ಚು ಮಾಡುತ್ತಿರುವ ಹಣದಲ್ಲಿ ಶೇಕಡ 25 ಭಾಗದಷ್ಟು ಮೋಸದ ರೂಪದಲ್ಲಿ ಹೊರಗೆ ಹೋಗುತ್ತಿದೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಐ.ಟಿ.ಐ.ನಲ್ಲಿ 8 ಲಕ್ಷ ರೂಪಾಯಿಗಳ ಒಂದು ಕೆಲಸದ ಬಗ್ಗೆ ಟೆಂಡರ್ ಕರೆಯಲಾಗಿತ್ತು. ಕೆಲವು ಕಂಟ್ರಾಕ್ಟರ್‌ಗಳು ಈ ಕೆಲಸಕ್ಕೆ 10 ಪರ್‌ಸೆಂಟ್ ಕಡಿಮೆಯಾಗಿ ಟೆಂಡರ್ ಹಾಕುವುದಕ್ಕೆ ಸಿದ್ಧವಾಗಿದ್ದರು. ಆದರೆ ಚೀಫ್ ಇಂಜಿನಿಯರ್ ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೆ ಫೋನ್ ಮಾಡಿ ಯಾರಿಗೂ ಟೆಂಡರ್ ಫಾರಂ ಕೊಡಬೇಡಿ, ನಾರಾಯಣರಾವ್ ಅವರಿಗೆ ಮಾತ್ರ ಕೊಡಿ ಎಂದು ಹೇಳಿದರು. ಅದರ ಪ್ರಕಾರ ನಾರಾಯಣರಾವ್ ಅವರು 20 ಪರ್‌ಸೆಂಟ್ ಜಾಸ್ತಿ ರೇಟ್ ಹಾಕಿ ಟೆಂಡರ್ ಹಾಕಿದರು. ಅದನ್ನು ಒಪ್ಪಿಕೊಂಡು ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಹಣವನ್ನು ಆ ಕಂಟ್ರಾಕ್ಟರ್‌ಗೆ ಕೊಟ್ಟು ಅವರಿಂದ 50 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬೆಂಗಳೂರಿನಲ್ಲಿ ಲೋಕಸಭೆಗೆ ನಿಂತಿದ್ದ ತಮ್ಮ ಕಡೆಯ ಉಮೇದುವಾರರಾದ ಶ್ರೀ ಅಡಿಗಾ ಅವರಿಗೆ ಕೊಟ್ಟಿದ್ದಾರೆ. ಪ್ರತಿಯೊಂದು ಚಾನಲ್ ಕೆಲಸದ ಬಗ್ಗೆಯೂ ಕೂಡ ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು 10 ಸಾವಿರ ರೂಪಾಯಿಗಳ ಲಂಚ ತೆಗೆದುಕೊಂಡು ಅದನ್ನು ಚುನಾವಣೆ ಖರ್ಚಿಗಾಗಿ ಸಪ್ಲೈ ಮಾಡುತ್ತಿದ್ದಾರೆ. ಇದೇ ರೀತಿ ಎಲ್ಲ ಇಲಾಖೆಗಳಲ್ಲಿಯೂ ಕೂಡ ನಡೆಯುತ್ತಿದೆ. ತಿಪಟೂರಿನ ವರ್ತಕರು ಸರ್ಕಾರಕ್ಕೆ 30 ಲಕ್ಷ ರೂಪಾಯಿಗಳವರೆಗೆ ಸೇಲ್ಸ್ ಟ್ಯಾಕ್ಸನ್ನು ರೀಫಂಡ್ ಮಾಡಬೇಕಾಗಿತ್ತು. ಆದರೆ ಅವರಿಂದ ಕೂಡಲೆ ವಸೂಲಿ ಮಾಡದೆ ಅವರಿಗೆ ರೀಫಂಡ್ ಮಾಡಲು 5 ವರ್ಷಗಳ ಕಾಲಾವಕಾಶ ಕೊಟ್ಟು ಅವರಿಂದ ಮೂರು ಲಕ್ಷ ರೂಪಾಯಿಗಳನ್ನು ಚಂದಾ ರೂಪದಲ್ಲಿ ವಸೂಲಿ ಮಾಡಿಕೊಂಡು ಒಂದು ಲಕ್ಷ ರೂಪಾಯಿಗಳನ್ನು ಹಾಸನದಲ್ಲಿ ನಡೆದ ತಮ್ಮ ಕಾಂಗ್ರೆಸ್ ಅಧಿವೇಶನಕ್ಕೆ ಖರ್ಚು ಮಾಡಿದರು. ಉಳಿದ ಎರಡು ಲಕ್ಷ ರೂಪಾಯಿಗಳನ್ನು ತುಮಕೂರು ಕ್ಷೇತ್ರದಿಂದ ನಿಂತಿದ್ದ ತಮ್ಮ ಕಡೆಯ ಇಬ್ಬರು ಉಮೇದುವಾರರಿಗೆ ತಲಾ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವೊತ್ತು ತುಮಕೂರಿನಲ್ಲಿ ನೂರಕ್ಕೆ 24 ಪರ್‌ಸೆಂಟ್ ಬಡ್ಡಿ ಕೊಡಬೇಕು. ಅಂಥಾದ್ದರಲ್ಲಿ ಸರ್ಕಾರದವರು 30 ಲಕ್ಷ ರೂಪಾಯಿಗಳ ವಸೂಲಿಯನ್ನು 5 ವರ್ಷಕ್ಕೆ ಮುಂದೆ ಹಾಕಿರುವುದರಿಂದ ಸರ್ಕಾರಕ್ಕೆ ಎಷ್ಟು ಲುಕ್ಸಾನಾಯಿತು ಎಂಬುದು ಗೊತ್ತಾಗುತ್ತದೆ. ಸರ್ಕಾರದ ಹಣವನ್ನು ಈ ಸರ್ಕಾರದವರು ಲೂಟಿ ಮಾಡುವುದರ ಮೂಲಕ ದೇಶದ ಬೊಕ್ಕಸವನ್ನು ಬರಿದು ಮಾಡಿದ್ದಾರೆ. ಇವರು ಹಗಲು ದರೋಡೆ ಮಾಡುತ್ತಿದ್ದಾರೆ. ಆದರೆ ತಾವೇ ಆಚರಣೆಯ ಸಮಾಜವಾದಿಗಳೆಂದು ದೊಡ್ಡದಾಗಿ ತಮ್ಮ ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ಖದ್ದರ್ ಬಟ್ಟೆ ಹಾಕಿಕೊಂಡು ಇವರು ರಾಜ್ಯಭಾರ ಮಾಡುತ್ತಿದ್ದಾರೆ. ಪ್ರತಿಯೊಂದು ವ್ಯವಹಾರದಲ್ಲಿಯೂ ಕೂಡ ಈ ಸರ್ಕಾರದವರು ಒಳ ವ್ಯಾಪಾರ ಮಾಡುತ್ತಿದ್ದಾರೆ. ಅದೂ ಕೂಡ ಮಂತ್ರಿಗಳ ಮೂಲಕವೇ ಈ ಒಳ ವ್ಯಾಪಾರ ನಡೆಯುತ್ತಿದೆ. ಮೊದಲು ಮಂಡ್ಯದವರಿಗೆ ಮಾತ್ರ ಅರ್ರ್ಯಾಕ್ ತಯಾರು ಮಾಡುವ ಪರ್ಮಿಷನ್ ಕೊಡಲಾಗಿತ್ತು. ಈಗ ಬೆಂಗಳೂರಿನ ರಾಮಚಂದ್ರ ಖೋಡೆಯವರಿಗೂ ಸಹ ಇದನ್ನು ತಯಾರು ಮಾಡುವ ಹಕ್ಕನ್ನು ಕೊಟ್ಟಿದ್ದಾರೆ. ಇವರು ಎಷ್ಟು ತಯಾರು ಮಾಡುತ್ತಾರೆಂಬುದಕ್ಕೆ ಲೆಕ್ಕವಿಲ್ಲ. ಒಂದು ಲೀಟರ್ ಬ್ರಾಂದಿಗೆ ಒಂದೂವರೆ ರೂಪಾಯಿ ಎಕ್ಸೈಜ್ ಡ್ಯೂಟಿ ಇದೆ. ಆದರೆ ಅವರು ಸರಿಯಾದ ಲೆಕ್ಕ ಕೊಡದೆ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಒಂದು ಸಾರಿ ಅಕಸ್ಮಾತ್ ಹೋಗಿ ಚೆಕ್ ಮಾಡಲಾಗಿ ಇದು ಗೊತ್ತಾಗಿ ಅಲ್ಲಿದ್ದ

ಸರ್ಕಾರಿ ಆಫೀಸರನ್ನು 24 ಗಂಟೆಯೊಳಗೆ ಟ್ರಾನ್ಸ್‌ಫರ್ ಮಾಡಿದರು. ನನಗೆ ಗೊತ್ತಿರುವಂತೆ ಇವರಿಂದ ಮೂರು ನಾಲ್ಕು ಜನ ಮಂತ್ರಿಗಳಿಗೆ ಪ್ರತಿ ತಿಂಗಳು 25 ಸಾವಿರ ರೂಪಾಯಿಗಳು ಮತ್ತು ಎಕ್ಸೈಜ್ ಕಮೀಷನರ್ ಅವರಿಗೆ ತಿಂಗಳಿಗೆ 10 ಸಾವಿರ ರೂಪಾಯಿಗಳು ಸಿಗುತ್ತಿದೆಯೆಂದು ತಿಳಿದು ಬಂದಿದೆ. ಬೇಲಿಯೇ ಎದ್ದು ಹೊಲ ಮೇದಂತೆ ಆಗಿದೆ. ಇಂತಹವರು ಬಡ್ಜೆಟ್ ಮಂಡನೆ ಮಾಡುವುದಕ್ಕೆ ಯೋಗ್ಯರಲ್ಲವೆಂದು ಹೇಳುತ್ತೇನೆ. ತಾವು ಮಾಡುತ್ತಿರುವ ಕೆಲಸ ಬೇರೆಯವರಿಗೆ ಗೊತ್ತಾಗುವುದಿಲ್ಲವೆಂದು ತಾವು ತಿಳಿದಿರಬಹುದು. ಮುಂದೆಯಾದರೂ ಕೂಡ ಇದೆಲ್ಲಾ ವಿಚಾರಣೆ ಯಾಗಿ ತಾವು ಶಿಕ್ಷೆಗೆ ಗುರಿಯಾಗುತ್ತೀರೆಂದು ಎಚ್ಚರಿಕೆಯಿಂದ ಹೇಳಬೇಕಾಗಿದೆ. ಲೋಕೋಪ ಯೋಗಿ ಇಲಾಖೆಯವರು ಮಾಡಿಸುತ್ತಿರುವ ಯಾವ ಕೆಲಸವೂ ಕೂಡ ಚೆನ್ನಾಗಿಲ್ಲ. ನನ್ನ ತಾಲ್ಲೂಕ್ ನಲ್ಲಿಯೋ ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಕಟ್ಟಿಸಿದ್ದ ಎರಡು ಕೆರೆಗಳು ಒಡೆದು ಹೋಗಿವೆ. ತುಂಗ ಭಧ್ರಾ ಎಡನಾಲೆ ವರ್ಷಕ್ಕೆ ಎರಡು ಸಲ ಒಡೆದುಹೋಗುತ್ತಿದೆ. ಶರಾವತಿಯ ತಳಕಳಲೆಯ ಡ್ಯಾಂನ್ನು ಕಟ್ಟಿದ ವರ್ಷವೇ ಒಡೆದುಹೋಗಿ ರಿಪೇರಿ ಮಾಡಿಸಲಾಯಿತು. ಅದೇ ಮಂಡ್ಯದ ವಿಶ್ವೇಶ್ವರಯ್ಯ ನಾಲೆಯನ್ನು ಕಟ್ಟಿ ನೂರು ವರ್ಷವಾದರೂ ಕೂಡ ಇನ್ನೂ ಒಡೆದಿಲ್ಲ. ಇದಕ್ಕೆಲ್ಲಾ ಕಾರಣ ಕೆಲಸವನ್ನು ಸರಿಯಾಗಿ ಮಾಡದಿರುವುದು. ಈ ಬಾಬಿಗಾಗಿ ಖರ್ಚು ಮಾಡುವ ಹಣದಲ್ಲಿ 25 ಭಾಗದಷ್ಟು ಹಣ ಪೋಲಾಗುತ್ತಿದೆ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಚುನಾ ವಣೆಯ ಖರ್ಚಿಗಾಗಿ ಕಂಟ್ರಾಕ್ಟರ್‌ಗಳಿಂದ 3 ಸಾವಿರದಿಂದ 30 ಸಾವಿರ ರೂಪಾಯಿಗಳವರೆಗೆ ವಸೂಲಿ ಮಾಡುತ್ತಿದ್ದಾರೆ. ಇವರಿಂದ ಇಷ್ಟೊಂದು ಪ್ರಮಾಣದಲ್ಲಿ ಅನ್ಯಾಯ ಮತ್ತು ಭ್ರಷ್ಟಾಚಾರ ನಡೆಯುತ್ತಿರುವಾಗ ಇವರೇ ಮಂಡಿಸಿರತಕ್ಕಂಥ ಬಡ್ಜೆಟ್‌ನ್ನು ನಾವು ವಿಮರ್ಶೆ ಮಾಡಿ ಏನು ಪ್ರಯೋಜನ. ನಿಜವಾಗಿಯೂ ಯೋಚನೆ ಮಾಡಿ ನೋಡುವುದಾದರೆ ಇವರಿಂದ ಇನ್ನು ಮುಂದೆ ದೇಶಕ್ಕೆ ಕ್ಷೇಮವಿಲ್ಲವೆಂದು, ಭವಿಷ್ಯವಿಲ್ಲವೆಂದು ಹೇಳುತ್ತೇನೆ. ಕಳ್ಳರುಗಳು ಸೇರಿಕೊಂಡು ಆಡಳಿತ ನಡೆಸುವುದಕ್ಕೆ ಹೊರಟಿದ್ದಾರೆ. ನಾನು ಹೇಳುತ್ತಿರುವುದರಲ್ಲಿ ಏನಾದರೂ ಸತ್ಯವಿದೆಯೇ ಎಂದು ಯಾರಾದರೂ ಕೇಳಬಹುದು; ನಾನು ಹೇಳುತ್ತಿರುವುದು ಅಕ್ಷರಶಃ ಸತ್ಯವೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವವಿರಬಾರದೆಂದು ಇವರು ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಇವೊತ್ತಿನ ದಿವಸ ವೆಸ್ಟ್‌ಬೆಂಗಾಲ್‌ನಲ್ಲಿ ಏನು ಚಳುವಳಿ ನಡೆಯುತ್ತಿದೆಯೋ ಅದೇ ಚಳುವಳಿ ನಮ್ಮ ರಾಜ್ಯದಲ್ಲಿಯೂ ಕೂಡ ಪ್ರಾರಂಭವಾಗುವುದರಲ್ಲಿ ಸಂಶಯವಿಲ್ಲ. ನಿಜವಾಗಿಯೂ ಕೂಡ ನಮ್ಮ ರಾಜ್ಯದಲ್ಲಿ ಸ್ವಚ್ಛ ಆಡಳಿತ ಬರಬೇಕಾದರೆ ಈ ಸರ್ಕಾರ ಕೂಡಲೇ ಪತನವಾಗಬೇಕು. ಇಲ್ಲದಿದ್ದರೆ ಜನರಿಗೆ ಸ್ವಚ್ಛ ಆಡಳಿತ ಸಿಗುವುದಿಲ್ಲ. ಈ ಬಡ ದೇಶದಲ್ಲಿ ಪ್ರತಿಯೊಂದು ಕಾಸೂ ಕೂಡ ಪ್ರಾಮಾಣಿಕ ವಾಗಿ ಖರ್ಚು ಆಗಬೇಕಾಗಿರುವ ಸಮಯದಲ್ಲಿ ಈ 26 ಜನ ಮಂತ್ರಿಗಳು ದೇಶದ ಹಣವನ್ನು ತಮಗಿಷ್ಟಬಂದಂತೆ ಖರ್ಚು ಮಾಡುತ್ತಿದ್ದಾರೆ. ಇದರಿಂದ ರಾಜ್ಯದ ಕಲ್ಯಾಣವಾಗುವುದಿಲ್ಲ. ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಿದ್ದಾರೆ. ಅದು ಕೇವಲ ಘೋಷಣೆಯ ಸರ್ಕಾರ ಎಂದು ಹೇಳಿದ್ದಾರೆ. ಈ ಸರ್ಕಾರದಲ್ಲಿಯಾದರೂ ಕೂಡ ಏನಿದೆ ಎಂದು ಕೇಳುತ್ತೇನೆ. ಮಂತ್ರಿಗಳೇ ಲಂಚ ತೆಗೆದುಕೊಳ್ಳುತ್ತಿದ್ದಾರೆ. ಪೂರ್ವದಲ್ಲಿಯೂ ಕೂಡ ಲಂಚ ಎಂಬುದು ಇತ್ತು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಲಂಚ ಎಂಬುದು ಶಾನುಭೋಗರಿಂದ ಹಿಡಿದು ಜಿಲ್ಲಾಧಿ ಕಾರಿಯವರೆಗೆ ಮಾತ್ರ ಇತ್ತು.

ಈಗ ಲಂಚ ಮುಖ್ಯ ಮಂತ್ರಿಗಳಿಂದ ಶುರುವಾಗಿ ಮಳೆ ಸುರಿದಹಾಗೆ ಸುರಿಯುತ್ತಿದೆ. ಕೆಳಗಡೆ ಯಿಂದ ಬರುವುದನ್ನು ತಡೆಗಟ್ಟಬಹುದು. ಅದರೆ ಮೇಲುಗಡೆಯಿಂದ ಬರುವುದನ್ನು ತಡೆಗಟ್ಟು ವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ತಡೆಗಟ್ಟಬೇಕಾದರೆ ಜನಗಳು ಕ್ರಾಂತಿ ಮಾಡಬೇಕು. ಚಳುವಳಿ ಮಾಡಬೇಕು. ಆವೊತ್ತಿನದಿವಸ ಮಾತ್ರ ಲಂಚ ನಿಲ್ಲುತ್ತದೆ. ಎಲ್ಲಾ ಬಾಬುಗಳಲ್ಲಿಯೂ ಲಂಚ ತಾಂಡವವಾಡುತ್ತಿದೆ. ಫಾರೆಸ್ಟ್ ಮಂತ್ರಿಗಳು ರಂಗಸ್ವಾಮಿ ಎನ್ನುವವರಿಗೆ ಸಾಫ್ಟ್ ವುಡ್ ಅನ್ನು ಒಂದು ಘನ ಅಡಿಗೆ 10 ರೂಪಾಯಿಗಳಂತೆ ಕೊಟ್ಟಿದ್ದಾರೆ. ಅವರು ಅದನ್ನು ಬ್ಲಾಕ್ ಮಾರ್ಕೆಟಿನಲ್ಲಿ ಒಂದು ಘನ ಅಡಿಗೆ 30-35 ರೂಪಾಯಿಗಳಂತೆ ಮಾರಾಟ ಮಾಡಿ ಅದರಿಂದ ಲಕ್ಷೋ ಪಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಎಕ್ಸೈಜ್ ಕಂಟ್ರಾಕ್ಟರುಗಳನ್ನು ನುಂಗೋ ಮಂತ್ರಿಗಳು, ಪಿ ಡಬ್ಲ್ಯು. ಕಂಟ್ರಾಕ್ಟರುಗಳನ್ನು ನುಂಗೋ ಮಂತ್ರಿಗಳು, ಮತ್ತೊ ಬ್ಬರು ಸೊಸೈಟಿಗಳನ್ನು ನುಂಗೋ ಮಂತ್ರಿಗಳು ಈ ರೀತಿಯಾಗಿ ಎಲ್ಲವನ್ನೂ ನುಂಗಿಕೊಂಡು ಈ ಮಂತ್ರಿಮಂಡಲದವರು ಈ ದೇಶದ ರಾಜ್ಯಭಾರವನ್ನು ಮಾಡುತ್ತಿದ್ದಾರೆ. ಪ್ರಾಮಾಣಿಕವಾಗಿ ಏನಾದರೂ ದೇಶದಲ್ಲಿ ಕೆಲಸ ಕಾರ್ಯಗಳು ನಡೆದಿವೆಯೇ ಎಂದು ನೋಡಿದರೆ ಈ ದೇಶದಲ್ಲಿ ಅನಾಹುತವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್ ಮೆಂಟಿನವರು ಹಿಂದುಳಿದ ಜನಾಂಗದವರನ್ನು, ಬಡ ಜನಾಂಗದವರನ್ನು ಮುಂದುವರಿಸುತ್ತಿದ್ದೇವೆ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಎಂದು ಹೇಳುತ್ತಿದ್ದಾರೆ. ಆದರೆ ಹೆಂಡ ಸಾರಾಯಿ ಮಾರಾಟದಿಂದ ದೇಶದಲ್ಲಿ ಏನು ಅನಾಹುತ ವಾಗಿದೆ ಎಂದರೆ ಮರ್ಯಾದೆ ಇರುವ ಜನಗಳು, ಪ್ರಾಮಾಣಿಕರಾದ ಜನಗಳು ರಸ್ತೆಯಲ್ಲಿ ಓಡಾಡುವ ಹಾಗಿಲ್ಲ. ಕುಡಿಯುವುದಕ್ಕೆ ಒಂದು ಮಿತಿ ಇದೆ. ಕುಡಿಯುವುದಕ್ಕೆ ಒಂದು ಕಾಲ ಮಿತಿಯನ್ನು ಗೊತ್ತು ಮಾಡಬೇಕು. ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 11 ಗಂಟೆಯವರೆಗೂ ಅಂಗಡಿಗಳಲ್ಲಿ ಸಾರಾಯನ್ನು ಸೇಂದಿಯನ್ನು ಮಾರಾಟ ಮಾಡುತ್ತಿದ್ದರೆ ಹೇಗೆ ? ಈಗ ಕುಡಿತದಿಂದ ಏನು ಅನಾಹುತವಾಗುತ್ತಿದೆ ಎನ್ನುವುದಕ್ಕೆ ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ ಒಂದು ಕಡೆ ಒಬ್ಬರು ಹೆಂಗಸರು ದಾಸರು ಹರಿಕತೆ ಮಾಡುತ್ತಾ ಇರುವಾಗ ಅಲ್ಲಿಗೆ ಒಬ್ಬನು ಕುಡಿದು ಬಂದು ಅವರ ಎದುರಿನಲ್ಲಿ ನರ್ತನ ಮಾಡುತ್ತಿದ್ದ. ಅಂಥಾ ಕಡೆ ಅವರಿಗೆ ಪೋಲೀಸಿನವರ ಸಹಾಯವಿಲ್ಲ. ಇನ್ನೊಂದು ಕಡೆ ಒಂದು ದಿವಸ ಲ್ಯಾಂಡ್ ರಿಲೀಫ್ ಕಮಿಟಿ ಮೀಟಿಂಗ್ ನಡೆಯುತ್ತಿತ್ತು. ಆಗ ಎಂದರೆ ಸುಮಾರು 3 ಗಂಟೆಯ ಸಮಯದಲ್ಲಿ ಒಬ್ಬನು ಕುಡಿದು ಬಂದು ಮೀಟಿಂಗ್ ನಡೆಯುತ್ತಿದ್ದ ಸ್ಥಳಕ್ಕೆ ನುಗ್ಗಿದ. ಆಗ ಸಂಬಂಧಪಟ್ಟ ಕಮಿಟಿಯ ಅಧ್ಯಕ್ಷರು ಪೋಲೀಸಿನವರ ಸಹಾಯಕ್ಕೋಸ್ಕರ ಪೋಲೀಸ್ ಸ್ಟೇಷನ್ನಿಗೆ ಹೇಳಿಕಳುಹಿಸಿದರೆ ಅಲ್ಲಿ ಸೆಂಟರಿ ಬಿಟ್ಟು ಬೇರೆ ಯಾರೂ ಇಲ್ಲ ಪೋಲೀಸಿನವರು ಸಹಾಯಕ್ಕೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿದರು. ಕುಡಿಯುವುದಕ್ಕೆ ಮನಸ್ಸಿರುವ ಜನ ಸಾಯಂಕಾಲ 6 ಗಂಟೆಗೆ ಸೇಂದಿ ಸಾರಾಯನ್ನು ಕುಡಿದು ಮನೆಯಲ್ಲಿ ಮಲಗಿಕೊಳ್ಳಲಿ. ಈಗಿರುವ ರೀತಿಯಲ್ಲಿ ಕಾಲ ಮಿತಿ ಇಲ್ಲದೆ ಸಿಕ್ಕಾಪಟೆ ಕುಡಿದು ರಸ್ತೆಯಲ್ಲಿ ಓಡಾಡುವುದಾದರೆ ಇದನ್ನು ನಾಗರಿಕರ ದೇಶ ಎಂದು ನಾವು ಕರೆಯುವುದಕ್ಕಾಗುವುದಿಲ್ಲ. ಮಹಾತ್ಮಾ ಗಾಂಧಿಯವರು ಯಾವುಯಾವುದನ್ನು ಮಾಡಬಾರದು ಎಂದು ಹೇಳಿದ್ದರೋ ಅದನ್ನೆಲ್ಲಾ ಇವರು ಮಾಡಿದ್ದಾರೆ. ಅವರ ತತ್ವ ಮತ್ತು ಅವರ ನೀತಿಯನ್ನೆಲ್ಲಾ ಅಳಿಸಿ ಹೋಗಿದೆ. ಮಹಾತ್ಮ ಗಾಂಧೀಜಿಯವರ ತತ್ವ ಮತ್ತು ನೀತಿಯ ಆಧಾರದ ಮೇಲೆ ನಾವು ರಾಜ್ಯಭಾರ ಮಾಡುತ್ತೇವೆ. ಈ ದೇಶವನ್ನು ರಾಮರಾಜ್ಯ ಮಾಡುತ್ತೇವೆ ಎಂದು ಹೇಳಿದರು. ಆದರೆ ಇವೊತ್ತು ಇವರು ಮಾಡತಕ್ಕಂಥಾ ಅನ್ಯಾಯವನ್ನು ನೋಡಿದರೆ ಇದಕ್ಕಿಂತ ಅನ್ಯಾಯ ನಡೆಯುವುದು ಮತ್ತೊಂದಿಲ್ಲ ಎಂದು ಹೇಳಬೇಕಾಗಿದೆ. ಮಾನ್ಯ ಅರ್ಥ ಮಂತ್ರಿಗಳು ರಾಜ್ಯದಲ್ಲಿ ಲಾಟರಿ, ಕುಡಿತ, ಜೂಜುಗಾರಿಕೆ ಎಲ್ಲವನ್ನು ತಂದು, ಯಾವ ಯಾವ ಬಾಬಿನಲ್ಲಿ ಹಣದ ಸಂಪಾದನೆ ಮಾಡಬೇಕೋ ಅದನ್ನೆಲ್ಲಾ ಮಾಡಿ ರಾಜ್ಯದ ಬೊಕ್ಕಸವನ್ನು ತುಂಬುತ್ತಿದ್ದಾರೆ. ಲಂಚ ದೇಶದಲ್ಲಿ ಧಾರಾಕಾರವಾಗಿ ಹರಿಯುತ್ತಿದೆ. ಇಂಥಾ ವ್ಯವಹಾರವನ್ನು ಏತಕ್ಕೆ ಮಾಡುತ್ತಿದ್ದೀರಿ ?

ಆಸ್ಪತ್ರೆಗಳನ್ನು ಜಾಸ್ತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಬಜೆಟ್ ಪುಸ್ತಕವನ್ನು ತೆಗೆದುನೋಡಿದರೆ ಆಸ್ಪತ್ರೆಗಳ ಸಂಖ್ಯೆಗಳೇನೋ ಜಾಸ್ತಿಯಾಗುತ್ತಿವೆ ; ಒಂದಕ್ಕೆರಡಷ್ಟು, ಮೂರರಷ್ಟು ಜಾಸ್ತಿಯಾಗಿವೆ. ಆದರೆ ಆಸ್ಪತ್ರೆಗಳಿಗೆ ಔಷಧಿಗಳಿಗೆ ಕೊಡತಕ್ಕ ಗ್ರಾಂಟ್ ಮಾತ್ರ ಜಾಸ್ತಿ ಕೊಟ್ಟಿಲ್ಲ. ಆದ್ದರಿಂದ ಈ ಆಸ್ಪತ್ರೆಗಳು ಪ್ರಿಸ್‌ಕ್ರಿಪ್‌ಷನ್ ಸೆಂಟರುಗಳಾಗಿವೆ. ಆಸ್ಪತ್ರೆಯಲ್ಲಿ ಡಾಕ್ಟರುಗಳು ರೋಗಿಗಳಿಗೆ ಚೀಟಿ ಬರೆದು ಔಷಧಿಯನ್ನು ಅಂಗಡಿಯಲ್ಲಿ ಕೊಂಡುಕೊಳ್ಳಿ ಎಂದು ಬರೆದುಕೊಟ್ಟರೆ ಆಸ್ಪತ್ರೆಗಳು ಏತಕ್ಕೆ ಬೇಕು ? ಪ್ರೈವೇಟ್ ಡಾಕ್ಟರಿಗೂ ನಿಮಗೂ ವ್ಯತ್ಯಾಸವೇನು ? ಆಸ್ಪತ್ರೆಗಳನ್ನು ಜಾಸ್ತಿ ಮಾಡಿದಹಾಗೆ ಔಷಧಿಗೆ ಹೆಚ್ಚು ಗ್ರಾಂಟನ್ನು ಕೊಡದೇ ಹೋದರೆ ಏನು ಪ್ರಯೋಜನ ? ದಕ್ಷರೀತಿಯಿಂದ ಆಡಳಿತವನ್ನು ನಡೆಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ, ಆದರೆ ಇದು ಯಾವ ರೀತಿಯಲ್ಲಿ ಸುಧಾರಣೆಯಾಗಿದೆ ಎಂಬುದನ್ನು ಹೇಳಬೇಕು.

ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ನೀವು ಸೋಮಾರಿಗಳನ್ನು ಸೃಷ್ಟಿ ಮಾಡುತ್ತಿದ್ದೀರಿ ಎಂದು ನಾವು ಹೇಳಬೇಕಾಗಿದೆ. ಎಸ್. ಎಸ್. ಎಲ್. ಸಿ. ಪಾಸಾಗಿರುವವನು ಯಾವ ಕೆಲಸಕ್ಕೂ ಲಾಯಕ್ಕಿಲ್ಲ. ಇಂಥಹವರು ಇವೊತ್ತಿನದಿವಸ ನೂರಾರು ಜನ ಸೋಮಾರಿಗಳಾಗಿ ಯಾವ ಕೆಲಸವೂ ಇಲ್ಲದೇ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಆದ್ದರಿಂದ ವಿದ್ಯಾಭ್ಯಾಸದಲ್ಲಿ ಕ್ರಾಂತ್ರಿಕಾರಕವಾದ ಬದಲಾವಣೆ ಆಗಬೇಕು. ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸ ಮುಗಿದ ಮೇಲೆ ಯಾವುದಾದರೂ ಒಂದು ಉದ್ಯೋಗವನ್ನು ಅವಲಂಬಿಸುವಂತಹ, ವಿದ್ಯಾಭ್ಯಾಸವನ್ನು ಕೊಡಬೇಕು. ಅವನು ಕಷ್ಟಪಟ್ಟು ಕೆಲಸ ಮಾಡಬೇಕು. ಆ ರೀತಿ ಮಾಡದೇ ಈಗಿರತಕ್ಕಂಥಾ ವಿದ್ಯಾಭ್ಯಾಸವನ್ನು ಮುಂದುವರಿಸುವುದಾದರೆ ಇದರಿಂದ ದೇಶಕ್ಕೆ ಹಾನಿ, ಸಮಾಜಕ್ಕೂ ಹಾನಿ, ಸೋಮಾರಿಗಳನ್ನು ಸೃಷ್ಟಿಮಾಡಿದಹಾಗಾಗುತ್ತದೆ. ಎಸ್. ಎಸ್. ಎಲ್. ಸಿ. ಪಾಸಾದವನಿಗೆ ವ್ಯವಸಾಯ ಮಾಡುವುದಕ್ಕೆ ಬರುವುದಿಲ್ಲ, ಸಣ್ಣ ಕೈಗಾರಿಕೆ ಬರುವುದಿಲ್ಲ, ಅವನಿಗೆ ಸರಿಯಾದ ವಿದ್ಯೆಯೂ ಕೂಡ ಬರುವುದಿಲ್ಲ. ಆದ್ದರಿಂದ ಎಸ್. ಎಸ್. ಎಲ್. ಸಿ. ಪಾಸಾದ ವರಿಗೆ ಅವನು ಕಷ್ಟ ಪಟ್ಟು ಕೆಲಸ ಮಾಡುವ ಹಾಗೆ ಮಾಡಿ ಅವನು ಒಂದು ಕೈಗಾರಿಕೆಯನ್ನೋ,

ಕಾರ್ಪೆಂಟರಿ ಕೆಲಸವನ್ನೋ ಸ್ಮಿತಿ ಕೆಲಸವನ್ನೋ ಮಾಡುವಂತಹ ಒಂದು ಉದ್ಯೋಗ ಮಾಡುವಂತಹ ಟ್ರೈನಿಂಗ್ ಕೊಟ್ಟು ನಂತರ ಅವನಿಗೆ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಅವನು ಉದ್ಯೋಗದ ದಾರಿಯನ್ನು ಹಿಡಿದು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ವಿದ್ಯಾಭ್ಯಾಸದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಆಗಬೇಕು. ಇಲ್ಲದೇಹೋದರ ದೇಶಕ್ಕೆ ಹಾನಿಯಾಗುತ್ತದೆ. ಇವೊತ್ತು ವಿಶ್ವವಿದ್ಯಾನಿಲಯಕ್ಕೆ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಒಬ್ಬ ನನ್ನು ಗ್ರಾಜುಯೇಟ್ ಮಾಡಬೇಕಾದರೆ 3 ಸಾವಿರ ರೂಪಾಯಿಗಳಿಂದ 5 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಬ್ಬ ಇಂಜಿನಿಯರಿಗೆ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತನೆ. ಒಬ್ಬ ಡಾಕ್ಟರಿಗೆ 20-30 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಈ ರೀತಿಯಾಗಿ ಹೆಚ್ಚಿನ ಹಣವನ್ನು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಆದರೆ ಪ್ರೀ ಪ್ರೈಮರಿ ವಿದ್ಯಾಭ್ಯಾಸ, ಶಿಶುವಿಹಾರ ವಿದ್ಯಾಭ್ಯಾಸಕ್ಕೆ ಎಷ್ಟು ಗಮನಕೊಡಬೇಕೋ ಅಷ್ಟು ಗಮನ ಕೊಟ್ಟಿಲ್ಲ. ಇದರಿಂದಾಗಿ ಇಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಯಾವ ತರಹ ಅನುಕೂಲವೂ ಇಗಿಲ್ಲ. ಇವೊತ್ತು ಹಳ್ಳಿಗಾಡುಗಳಲ್ಲಿ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಕ್ಕದೆ ಅವರು ಸರಿಯಾದ ಬಟ್ಟೆ ಬರೆ ಇಲ್ಲದೆ ಬೀದಿಯಲ್ಲಿ ಅಲೆಯುತ್ತಿರುತ್ತಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ಇಂಜಿನಿಯರಿಂಗ್, ಮೆಡಿಕಲ್, ಸೈನ್ಸ್ ಮತ್ತು ಟೆಕ್ನಿಕಲ್ ಕಾಲೇಜುಗಳೇನೋ ಜಾಸ್ತಿಯಾಗಿವೆ. ಪ್ರಿಪ್ರೈಮರಿ ಮತ್ತು ಶಿಶುವಿಹಾರ ವಿದ್ಯಾಭ್ಯಾಸದ ಕಡೆಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು. ಮತ್ತು ಆ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ನಿಜವಾಗಿಯೂ ಇವೊತ್ತಿನ ದಿವಸ ಕಾಲೇಜುಗಳು ಜಾಸ್ತಿಯಾಗಿವೆ, ಗ್ರಾಜುಯೇಟ್‌ಗಳನ್ನು ಪ್ರೊಡ್ಯೂಸ್ ಮಾಡುತ್ತಿದ್ದಾರೆ. ಇದರಿಂದ ನಿರುದ್ಯೋಗಿಗಳು ಜಾಸ್ತಿಯಾಗಿ ಅವರು ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಇದರಿಂದ ದೇಶಕ್ಕೆ ಹಾನಿ ಮತ್ತು ಕಳಂಕ ಉಂಟಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ವಿದ್ಯಾಭೋದನೆಯ ಸ್ವರೂಪವನ್ನು ಬದಲಾವಣೆ ಮಾಡದೇ ಹೋದರೆ ಖಂಡಿತವಾಗಿಯೂ ಮುಂದೆ ದೇಶಕ್ಕೆ ಹಾನಿ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದ ಹತೋಟಿಯಲ್ಲಿರತಕ್ಕ ಕೈಗಾರಿಕೆಗಳನ್ನು ಯಾರಾದರೂ ಮಾರ್ವಾಡಿಗೋ ಗುಜರಾತಿಗೋ ಮಾರಾಟ ಮಾಡುತ್ತಾರೆಯೋ ಏನೋ ನನಗಂತೂ ಅರ್ಥವಾಗುವುದಿಲ್ಲ. ಈ ದೇಶದಲ್ಲಿ ಮುಖ್ಯಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಬೊಂಬಾಯಿ ಕಲ್ಕತ್ತಾ ಮುಂತಾದ ಕಡೆಗಳಿಗೆ ಹೋಗಿ ಕೈಗಾರಿಕೋದ್ಯಮಗಳನ್ನು ಆಹ್ವಾನ ಮಾಡಿ ನೀವು ನಮ್ಮ ದೇಶಕ್ಕೆ ಬನ್ನಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ನಿಮಗೆ ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆ. ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಕೈಗಾರಿಕಗಳಲ್ಲಿ ಕೆಲಸ ಮಾಡತಕ್ಕವರು ದೊಡ್ಡ ದೊಡ್ಡ ಗೆಜೆಟೆಟ್ ಹುದ್ದೆಯಲ್ಲಿ ಹೊರಗಡೆಯವರು ಇದ್ದಾರೆ. ಕೂಲಗಾರರು ಕೇರಳದವರು ಮತ್ತು ಮದ್ರಾಸಿನವರು ಇದ್ದಾರೆ. ನಮ್ಮ ದೇಶದಲ್ಲಿ ಇರತಕ್ಕ ಕೈಗಾರಿಕೆಗಳಲ್ಲಿ ಕನ್ನಡ ಮಕ್ಕಳಿಗೆ, ಕನ್ನಡಿಗರಿಗೆ ಯಾವ ಉಪಕಾರವೂ ಆಗುತ್ತಿಲ್ಲ. ಅಲ್ಲಿ ಮದ್ರಾಸಿನ ಮತ್ತು ಕೇರಳದ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ನಾವು ಇದರ ಬಗ್ಗೆ ಅನೇಕ ಸಲ ಸರ್ಕಾರಕ್ಕೆ ಹೇಳಿದ್ದೇವೆ. ಇವತ್ತು ನಮ್ಮ ಬೆಂಗಳೂರು ಪಟ್ಟಣವನ್ನೇ ನೋಡಿ ತಮಿಳರು ಎಷ್ಟು, ಜನ ಇದ್ದಾರೆ, ಕೇರಳದವರು ಎಷ್ಟು ಜನ ಇದ್ದಾರೆ ? ಬೊಂಬಾಯಿ ನಗರದಲ್ಲಿ ಕಾರ್ಮಿಕರು ಹೆಚ್ಚಾಗಿ ಮರಾಠಿಯವರೇ ಆಗಿರುತ್ತಾರೆ. ಅಲ್ಲಿ ಮದ್ರಾಸಿನವರು ಅಥವಾ ಕರ್ಣಾಟಕದವರು ಕೇವಲ 2 ಪರ್ಸೆಂಟ್ ಕೂಡ ಇಲ್ಲ. ಸೇಲಂ ನಲ್ಲಿ ಸ್ಟೀಲ್ ಪ್ಲಾಂಟ್ ನಲ್ಲಿ ಕೇವಲ ತಮಿಳರನ್ನೇ 3 ನೇ ಮತ್ತು 4ನೇ ದರ್ಜೆ ನೌಕರಿಗೆ ತೆಗೆದುಕೊಳ್ಳಬೇಕೆಂದು ಶ್ರೀ ಕರುಣಾನಿಧಿಯವರು ಅಲ್ಲಿ ಅಧಿಕಾರಿ ವರ್ಗದವರಿಗೆ ಬರೆದಿದ್ದಾರೆ. ಅದರೆ ನಮ್ಮ ರಾಜ್ಯದಲ್ಲಿ ಅಂತಹ ಯಾವ ಕಾರ್ಯವನೂ ಸರ್ಕಾರ ದವರು ಮಾಡುತ್ತಾ ಇಲ್ಲ. ಇಲ್ಲಿ ಎಲ್ಲಾ ಹೊರಗಡೆ ಯಿಂದಲೇ ಜನರನ್ನು ತರುತ್ತಿದ್ದಾರೆ.

4-00 P.M.

ನಮ್ಮ ಅಸೆಂಬ್ಲಿಯಲ್ಲಿಯೂ ಇದನ್ನು 4-6 ಸಲ ಒತ್ತಿ ಒತ್ತಿ, ಹೇಳಿದ್ದೇವೆ. ನಮ್ಮ ಹೊಸಪೇಟೆ ಸ್ಟೀಲ್ ಪ್ಲಾಂಟಿನಲ್ಲೂ ಬೇರೆಯವರು ಬಂದು ನಮ್ಮ ಕನ್ನಡಿಗರಿಗೆ ಜಾಗ ಸಿಗುತ್ತದೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಅದೇ ರೀತಿ ನಮ್ಮ ಸಿಟಿಯಲ್ಲಿ ಹೊರಗಿನ ತಮಿಳರು ಹೆಚ್ಚುತ್ತಾ ಇದ್ದಾರೆ. ಒಂದು ದಿವಸ ಕಾರ್ಪೊರೇಶನ್ ಚುನಾವಣೆಯಲ್ಲಿ ತಮಿಳರೇ ಹೆಚ್ಚು ಬಂದು ಕನ್ನಡಿಗ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರಿಗೆ ಸ್ಥಾನವಿಲ್ಲದ ಸಂದರ್ಭವೂ ಬರಬಹುದು. ಇವತ್ತು ಕನ್ನಡ ನಾಡಿನ ನೆಲ, ಜಲ ಮತ್ತು ಸಂಪತ್ತು ಹೊರಗಡೆಯವರಿಗೆ ಹೋಗುತ್ತಿದೆ. ಇವರು ಮಾರ್ವಾಡಿ ಮತ್ತು ಗುಜರಾತಿಯವರನ್ನು ಇಲ್ಲಿಗೆ ಕರಕೊಂಡು ಬಂದರೆ, ಇವರಿಗೆ ಒಂದು ಒಳ ವ್ಯಾಪಾರ ಮಾಡುವುದಕ್ಕೋಸ್ಕರ ಅನುಕೂಲ ವಾಗುತ್ತದೆಂದು ಕಾಣುತ್ತದೆ. ಅದಕ್ಕೋಸ್ಕರ ಆ ರೀತಿ ಮಾಡುತ್ತಿದ್ದಾರೆಂದು ಕಾಣುತ್ತದೆ. ಮೈಸೂರಿನಲ್ಲಿ ಎಲೆಕ್ಟ್ರಿಸಿಟಿ ನೀರು ಮತ್ತು ನೆಲವನ್ನು ಕೊಟ್ಟು ಕಲ್ಕತ್ತಾದಿಂದ ಮತ್ತು ಬೊಂಬಾಯಿಂದ ಕೈಗಾರಿಕೋದ್ಯಮಿಗಳನ್ನು ಕರೆಯುತ್ತಿದ್ದಾರೆ. ಹೊರಗಿನವರು ಬಂದು ನಮ್ಮ ರಾಜ್ಯದ ಸಂಪತನ್ನು ದೋಚಿಕೊಂಡು ಹೋಗುತ್ತಿದ್ದಾರೆ. ಇವತ್ತು ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿಗೆ ಲಕ್ಷಾಂತರ ಎಕರೆ ಕಾಡುಗಳನ್ನು ಕೊಟ್ಟು ಬಿಟ್ಟಿದ್ದಾರೆ. ಆದರೆ ಮಂಡ್ಯದಲ್ಲಿರುವ ಮಿಲ್ಲಿಗೆ ಅಷ್ಟು ಸುಲಭ ದರದಲ್ಲಿ ಅಂತಹ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿಲ್ಲ. ಆದ್ದರಿಂದ ಹೊರಗಡೆಯವರು ಬಂದು ನಮ್ಮ ರಾಜ್ಯದ ಸಂಪತನ್ನು ತೆಗೆದು ಕೊಂಡು ಹೋಗುತ್ತಿದ್ದಾರೆ. ದಾಂಡೇಲಿಯ ಪೇಪರ್ ಮಿಲ್ಲಿನವರು ಬಾಂಬಾಯಿಯಲ್ಲಿ ತಮ್ಮ ಸಂಪತ್ತನ್ನು ಬೆಳೆಸುತ್ತಿದ್ದಾರೆ. ಇದರಿಂದ ನಮ್ಮ ದೇಶದ ಅಭಿವೃದ್ಧಿಯಾದರೂ ಹೇಗೆ ಆಗುತ್ತದೆ ? ಹೋಗಲಿ, ಆದರಿಂದ ನಮ್ಮ ರಾಜ್ಯದ ಜನರಿಗೆ ಯಾವ ಉದ್ಯೋಗ ಕೊಡಸಿಗುತ್ತಾ ಇಲ್ಲ. ಅದು ಕೂಡ ಹೊರಗಿನ ಜನರಿಗೆ ಅನುಕೂಲವಾಗುತ್ತದೆ. ಇದು ಬಹಳ ಶೋಚನಿಯವಾದ ವಿಚಾರ. ಸರ್ಕಾರದವರು ಇನ್ನಾದರೂ ಕಣ್ಣು ತೆರೆದು, ಇದಕ್ಕೆ ಗಮನ ಕೊಟ್ಟು ಕನ್ನಡ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರದ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಬಜೆಟನ್ನು ನಾನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಹೆಗಡೆಯವರನ್ನು ನಾನು 10 ವರ್ಷಗಳಿಂದಲೂ ನೋಡುತ್ತಿದ್ದೇನೆ. ಅವರ ಬಜೆಟ್ ಭಾಷಣ ಓದುವುದಕ್ಕೆ ಬಹಳ ಚೆನ್ನಾಗಿರುತ್ತದೆ. ಆದರೆ ಅದರ ಒಳಗಡೆ ಅರ್ಥ ಅಷ್ಟೇ ಕಠೋರವಾಗಿರುತ್ತದೆ. ನನ್ನ ಅಭಿಪ್ರಾಯದ ಪ್ರಕಾರ ಇವರು ಅಷ್ಟೋತ್ತರ ನಾಮಗಳನ್ನು ಹೇಳಿ, ತಪಸ್ಸನ್ನು ನಡೆಸಿ ದೇವರಿಂದ ವರ ಪಡೆದು ಬಂದ ಸಂತತಿಯಲ್ಲಿ ಬೆಳೆದು ಬಂದವರೋ ಎಂದೆನಿಸುತ್ತದೆ. ಇವರು ಹೇಳಿರತಕ್ಕ ಶೈಲಿಯಲ್ಲಿ ವಿದ್ಯೆ ಇಲ್ಲದಿರತಕ್ಕ ಜನರು ಈ ಬಜೆಟ್ ಭಾಷಣವನ್ನು ಕೇಳಿದರೆ, ಇವರಂತಹ ಒಳ್ಳೆಯ ಜನರು ಬೇರೆ ಯಾರೂ ಇಲ್ಲವೋ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅದರಂತೆ ನಾನೂ ಕೂಡ 5 ವರ್ಷಗಳಿಂದ ಮೋಸ ಹೋಗಿದ್ದೇನೆ. ಇವರ ಭಾಷಣದಲ್ಲಿ ಒಂದು ಹೇಳಿದ್ದಾರೆ ಏನೆಂದರೆ, ಶ್ರಮ, ದುಡಿಮೆ ಮತ್ತು ಕಾರ್ಯಾಚರಣೆ-ಇವುಗಳಿಂದ ನಮ್ಮ ರಾಜ್ಯದ ಅಧಿಕ ಉತ್ಪತ್ತಿಯಾಗುತ್ತದೆಂದು ಹೇಳಿದ್ದಾರೆ. ಆದರೆ ಬೆಲೆ ಏಕೆ ಕಡಿಮೆಯಾಗಿಲ್ಲ ? ಕೇಂದ್ರಸರ್ಕಾರದ ರೀತಿ ನೀತಿಗಳು ಸರಿಯಾಗಿಲ್ಲದಿರುವುದರಿಂದ ಬೆಲೆ ಕಡಿಮೆಯಾಗಿಲ್ಲವೆಂದು ಹೇಳಿದ್ದಾರೆ. ನಮ್ಮ ರಾಜ್ಯಸರ್ಕಾರದವರು ಸರಿಯಾದ ಬೆಲೆ ಸಿಗುವುದಕ್ಕೆ ಏನು ಮಾಡಿದ್ದಾರೆ ? ಈ ಬಜೆಟಿನಲ್ಲಿ ಅದರ ಬಗ್ಗೆ ಏನು ಹೇಳಿದ್ದಾರೆ ? ಮಾರ್ಕೆಟ್ ವಿಚಾರ ಏನು ಹೇಳಿದ್ದಾರೆ; ಪ್ರೊಡ್ಯೂಸರ್ಸ್ ಬಜಾರಿಗೆ ಬರುವುದಕ್ಕೆ ಏನು ಅನುಕೂಲ ಮಾಡಿದ್ದಾರೆ.? ಇಂತಹದ್ದು ಏನೂ ಇದರಲ್ಲಿ ಕಾಣುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ನಮ್ಮ ಸರ್ಕಾರದವರು ಈ ಮಧ್ಯವರ್ತಿಗಳಾದ ವರ್ತಕರಿಗೆ ಅನುಕೂಲ ಮಾಡುತ್ತಾರೆಯೇ ಹೊರತು ರೈತರಿಗೆ ಅನುಕೂಲ ಮಾಡುತ್ತಾ ಇಲ್ಲ. ಇವತ್ತು ಆ ವರ್ತಕರನ್ನು ಇವರಿಗೆ ಅಲ್ಲಾಡಿಸುವುದಕ್ಕೂ ಆಗುವುದಿಲ್ಲ. ಇಂದು ರೈತರು ಎಷ್ಟು ಕಷ್ಟಪಟ್ಟರೂ, ಶ್ರಮ ಪಟ್ಟರೂ, ಸರ್ಕಾರದ ಬೆಂಬಲ ಅವರಿಗೆ ಇಲ್ಲ. ಇದರಿಂದ ಅವರು ಪಡಬಾರದ ಕಷ್ಟ ಅನುಭವಿಸಬೇಕಾಗಿದೆ. ಅದೇ ರೀತಿ ಇವರು ವ್ಯವಸಾಯಗಾರರಿಗೆ ಎರಡೂವರೆ ರೂಪಾಯಿ ಕೂಲಿ ಎಂದು ಗೊತ್ತು ಮಾಡಿದ್ದಾರೆ. ಎಂದು ಹೇಳಿದ್ದಾರೆ. ನಾವು ಈ ರೀತಿಯ ಕೂಲಿಯನ್ನು 5 ವರ್ಷಗಳಿಂದಲೂ ಕೊಡುತ್ತಿದ್ದೇವೆ. ಇದನ್ನು ಈಗ ಇವರು ಹೇಳುತ್ತಿದ್ದಾರೆ. ಇವತ್ತು ಸಾಮಾನು ಬೆಲೆ ಏನಿದೆ, ಗೊಬ್ಬರದ ಬೆಲೆ ಏನಿದೆ, ಮತ್ತು ಭೂಮಿ ಬೆಲೆ ಏನಿದೆ ? ಇದನ್ನೆಲ್ಲಾ ನೋಡಿಕೊಂಡು ರೈತನು ಬೆಳೆಯತಕ್ಕ ಬೆಳೆಗೆ ಕನಿಷ್ಟ ಬೆಲೆ ಗೊತ್ತು ಮಾಡಿದ್ದಾರೆಯೇ ! ಇವರು ರಾಗಿ, ಭತ್ತ, ಜೋಳ ಮುಂತಾದುವುಗಳಿಗೆ ಏನು ಬೆಲೆ ನಿಗದಿ ಮಾಡಿದ್ದಾರೆ ? ರೈತರಿಗೆ ಇದರ ಬಗ್ಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ? ನೂರರಲ್ಲಿ 85 ಭಾಗ ಇರುವ ಈ ಜನರಿಗೆ ನಿಮ್ಮ ಸಹಾಯ ಇಲ್ಲದಿರುವಾಗ ಅವರಾಗಿಯೇ ನಿಮ್ಮನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇವತ್ತು ನೀವು ಹೇಳತಕ್ಕದ್ದು ನಿಜವಲ್ಲವೆಂದು ಅವರು ತಿಳಿದು ಕೊಂಡಿದ್ದಾರೆ. ಮತ್ತು ಇದರಿಂದ ಅವರಿಗೆ ಸಮಾಧಾನವು ದೊರಕುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ, ವೈದ್ಯಕೀಯ ಸೌಕರ್ಯ ಮುಂತಾದ ಪ್ರಗತಿಯನ್ನು ಸಾಧಿಸಿದ್ದೇವೆಂದು

ಹೇಳುತ್ತಿದ್ದಾರೆ. ಏನು ಪ್ರಗತಿ ಸಾಧಿಸಿದ್ದಾರೆ! ಇವತ್ತು ಹಳ್ಳಿಗಳಲ್ಲಿರುವ ರಸ್ತೆಗಳನ್ನು ನೋಡಲಾಗುವುದಿಲ್ಲ. ಅದೇ ರೀತಿ ಟೌನ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿಯೂ ಇರುವ ರಸ್ತೆಗಳನ್ನು ನೋಡಲಾಗುವುದಿಲ್ಲ. ಬಹುಶಃ ಮಂತ್ರಿಯವರು ಬರುವ ದಿನ ನಮ್ಮ ಲೋಕೋಪಯೋಗಿ ಸಚಿವರು ಅಲ್ಲಿ ರಸ್ತೆಗಳನ್ನು ಸರಿಪಡಿಸಲು ಏರ್ಪಾಡು ಮಾಡುತ್ತಾರೆಂದು ಕಾಣುತ್ತದೆ; ಆದ್ದರಿಂದ ನಿಮಗೆ ತಿಳಿಯುವುದಿಲ್ಲ. ಆದರೆ ನೀವು ಬೇರೆ ಹಳ್ಳಿಗಳಿಗೆ ಅಕಸ್ಮಾತ್ ಹೋದರೆ, ಅಲ್ಲಿಯ ರಸ್ತೆಗಳು ಹೇಗಿರುತ್ತವೆಂದು ಗೊತ್ತಾಗುತ್ತದೆ. ಆದರೆ ನೀವು ಹೇಳುತ್ತಿದ್ದೀರಿ—ರಸ್ತೆಗಳನ್ನು ಮಾಡಿದ್ದೇವೆ, ವಿದ್ಯುಚ್ಛಕ್ತಿ ಪೂರೈಕೆ ಮಾಡಿದ್ದೇವೆ, ವೈದ್ಯಕೀಯ ಸೌಕರ್ಯ ಒದಗಿಸಿದ್ದೇವೆ—ಇತ್ಯಾದಿ. ಆದರೆ ಅದರಲ್ಲಿ ಸತ್ಯಾಂಶ ಒಂದೂ ಇಲ್ಲ. ಉದಾಹರಣೆಗೆ ನಮ್ಮ ದೇವನಹಳ್ಳಿಯ ನಿದರ್ಶನವನ್ನೇ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ 70 ಮೈಲು ತೆಗೆದು ಕೊಂಡಿದ್ದಾರೆ. ಆದರೆ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಕೇವಲ 10-6 ಮೈಲಿ ಮಾತ್ರ ತೆಗೆದು ಕೊಂಡಿದ್ದಾರೆ ಅಷ್ಟೆ. ಆದರೆ ನನಗೆ ಓಟು ಕೊಟ್ಟವರಿಗೆ ಒಂದು ಮೈಲಿವರೆಗಾದರೂ ರಸ್ತೆ ಕೆಲಸ ತೆಗೆದುಕೊಂಡಿಲ್ಲವೆಂದು ಹೇಳಿದರೆ, ಅದು ಸರಿಯಲ್ಲ. ಆದ್ದರಿಂದ ಈ ಪುಸ್ತಕದಲ್ಲಿ ನೀವು ಹೇಳ ತಕ್ಕದ್ದರಲ್ಲಿ ಏನಾದರೂ ಅರ್ಥವಿದೆಯೇ? ಕಾಂಗ್ರೆಸ್ ರೆಪ್ರಸೆಂಟೆಟಿವ್ಸ್ ಇರುವ ಕಡೆ ಅದರಲ್ಲಿಯೂ ತಮಗೆ ಬೇಕಾದವರು ಇರುವ ಕಡೆಗಳಲ್ಲಿ 78 ಮೈಲಿಗಳವರೆಗೂ ರಸ್ತೆ ರಿಪೇರಿ ಕೆಲಸಗಳನ್ನು ಮಾಡಿ ಸುಮಾರು 16 ಲಕ್ಷರೂಪಾಯಿಗಳನ್ನು ಖರ್ಚುಮಾಡುವಾಗ ದೊಡ್ಡಬಳ್ಳಾಪುರದ ಸದಸ್ಯನಾಗಿರುವ ನಾನು ಮಾಡಿರತಕ್ಕ ಅನ್ಯಾಯವೇನು? ನನ್ನ ಕ್ಷೇತ್ರಕ್ಕೆ ಮಾಡದೇ ಇದ್ದರೂ ಸಂಸ್ಥಾ ಕಾಂಗ್ರೆಸ್ ಸದಸ್ಯರು ಇರುವಕಡೆ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಈ ಭಾಷಣದಲ್ಲಿ ಕ್ರಮಬದ್ಧವಾಗಿ ಆ ಕೆಲಸಗಳನ್ನು ಮಾಡಿಸಿದ್ದೇವೆಂದು ಹೇಳಿರುವುದನ್ನು ಇದರಿಂದ ತೆಗೆದುಹಾಕಬೇಕು. ಈ ತರಹ ದೇಶದಲ್ಲಿ ಆಗಬಾರದು. ಇದು ಅಸಹ್ಯ. ರಾಜ್ಯಕ್ಕೆಲ್ಲಾ ಸಮಭಾವನೆ ಬೇಕು. ಮಂತ್ರಿಗಳಿಗೆ ದೇವರು ಒಳ್ಳೆಯ ಬುದ್ಧಿ ಕೊಡಬೇಕು. ಇವರು ಆಡಳಿತಕ್ಕೆ ಬಂದಮೇಲೆ ಎಲ್ಲಾ ಊರು ಒಂದೇ ಎಂಬ ಮಮತೆ ಇವರಿಗೆ ಬಾರದೇ ಹೋದರೆ ಬಹಳ ಕಷ್ಟ. ರೈತರಲ್ಲಿ ಒಂದು ಸಮ ಭಾವನೆ ಉಂಟಾಗುವ ರೀತಿಯಲ್ಲಿ ಇವರು ನಡೆದುಕೊಳ್ಳುವ ಹಾಗೆ ಒಂದು ಶಕ್ತಿಯನ್ನು ದೇವರು ಇವರಿಗೆ ಕೊಡಬೇಕು.

ಇನ್ನು ಕುಡಿಯುವ ನೀರಿನ ಬಾವಿಗಳನ್ನು ಎಲ್ಲಾ ಹಳ್ಳಿಗಳಲ್ಲಿಯೂ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 70 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲ. ಈ ಜನವರಿಯಿಂದ 50 ಹಳ್ಳಿಗಳಲ್ಲಿರತಕ್ಕ ಬಾವಿಗಳಲ್ಲಿ ನೀರು ಇಲ್ಲ. ಈಗ 120 ಗ್ರಾಮಗಳಿಗೆ ಜನವರಿಯಿಂದ ಮೇವರೆಗೆ ಕುಡಿಯುವ ನೀರು ಇಲ್ಲದೇ ಇದ್ದರೆ ನಿಮ್ಮ ಮಾತಿನಲ್ಲಿ ಏನು ಸತ್ಯಾಂಶವಿದೆಯೆಂಬುದನ್ನು ತಾವು ಯೋಚನೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಆಗಿದ್ದಾಗ, ನಮ್ಮ ತಾಲ್ಲೂಕಿನಲ್ಲಿ ಸುಮಾರು 12½ಮೈಲಿ ಗಳಷ್ಟು ರಸ್ತೆಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿಗೆ ಬೆಲೆ ಇಲ್ಲದಂತೆ ಇವರು ಮಾಡಿದ್ದಾರೆ. ಇದಕ್ಕಿಂತಲೂ ಅನ್ಯಾಯ ಈ ರಾಜ್ಯದಲ್ಲಿ ಏನಾಗಬೇಕು? ಮುಖ್ಯಮಂತ್ರಿಗಳ ಮಾತನ್ನು ಉಳಿಸತಕ್ಕ ಯೋಗ್ಯತೆ ಕ್ಯಾಬಿನೆಟ್ ಮಿನಿಸ್ಟರಿಗೇ ಇಲ್ಲ. 1962ನೇ ಫೆಬ್ರವರಿ 28ನೇ ತಾರೀಖು ಮುಖ್ಯ ಮಂತ್ರಿಗಳು ಹೇಳಿದ್ದನ್ನು ಈಗಿನ ಪಿ.ಡಬ್ಲ್ಯು.ಡಿ. ಮಂತ್ರಿಗಳಿಗೆ ಹೇಳಿದರೆ, ಅವರು ಅರ್ಧ ಸಚಿವರ ಮೇಲೆ ಜವಾಬ್ದಾರಿ ವಹಿಸುತ್ತಾರೆ. ಅವರು ಈ ವರ್ಷ ಯಾವ ರಸ್ತೆಯನ್ನೂ ತೆಗೆದುಕೊಳ್ಳುವುದಿಲ್ಲ, ಮುಂದಿನವರ್ಷ ಅದಕ್ಕೆ ಹಣ ಕೊಡುತ್ತೇವೆಂದು ಹೇಳಿದರೆಂದು ಹೇಳಿದ್ದಾರೆ. ಮೊನ್ನೆ ನೋಟಿಫಿಕೇಷನ್ನಿನಲ್ಲಿಯೂ ದೊಡ್ಡ ಬಳ್ಳಾಪುರದ ಕ್ಷೇತ್ರದ ಹೆಸರೇ ಇಲ್ಲ. ಈ ದೊಡ್ಡಬಳ್ಳಾಪುರ ಕ್ಷೇತ್ರ ನಿಮ್ಮ ಭೂಪಟದಲ್ಲಿ ಇದ್ದರೆ, ಅದು ಶುದ್ಧ ತಪ್ಪು ಎಂಬುದಾಗಿ ನೀವು ತಿಳಿದಿದ್ದರೆ, ಆ ರೀತಿ ಖಂಡಿತವಾಗಿ ನಡೆಯುವುದಿಲ್ಲ. ಅದು ಆಗುವುದಿಲ್ಲ.

ಇನ್ನು ವೈದ್ಯಕೀಯ ಸೌಕರ್ಯದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ 25 ಬೆಡ್‌ಗಳು ಇರತಕ್ಕ ಒಂದು ಆಸ್ಪತ್ರೆಮಾಡುತ್ತೇವೆಂದು ಹೇಳಿದ್ದಾರೆ. ನಮ್ಮಲ್ಲಿ 25 ಬೆಡ್‌ಗಳು ಇರುವುದರಿಂದ ನಮಗೆ ಸೊನ್ನೆ ಸಿಕ್ಕಿದೆಯೆಂದು ನಾನು ಹೇಳು ತ್ತೇನೆ. 25 ಸಾವಿರ ಜನಸಂಖ್ಯೆಗೆ ಒಂದು ಯೂನಿಟ್ ಕೊಡುತ್ತೇವೆಂದು ಪ್ಲಾನಿನಲ್ಲಿ ಹೇಳಿದ್ದೀರಿ ಇನ್ನು 2—3 ಯೂನಿಟ್ಟುಗಳನ್ನು 71ನೇ ಸೆನ್ಸಸ್ ಆದಮೇಲೆ ಕೊಡುತ್ತೇವೆಂದು ಹೇಳಿರುವುದು ಬಾಯಿಯಲ್ಲಿ ನೀರು ಬರುವ ಮಾತೇ ಹೊರತು ಖಂಡಿತವಾಗಿ ಏನೂ ಅದರಿಂದ ಉಪಕಾರವಾಗುವು ದಿಲ್ಲ. ಇದರಿಂದ ನೀವು ಇನ್ನು ಮುಂದೆ ನಿಮ್ಮ ಸೆಕ್ರೆಟರಿಗಳು, ಪ್ಲಾನಿಂಗ್ ಆಫೀಸರ್ ಇವರುಗಳ ಸಂಪರ್ಕ ಇಡದೆ ಸಾಮಾನ್ಯ ಜನರ ಸಂಪರ್ಕವನ್ನು ಇಟ್ಟುಕೊಂಡರೆ ಸಾಕು. ಆಗ ನಿಮಗೇ ನಿಜಾಂಶ ಗೊತ್ತಾಗುತ್ತದೆ. ಮತ್ತು ಬಹಳ ಕೆಲಸಗಳು ಆಗುತ್ತವೆ.

(ಶ್ರೀ ಜಿ. ರಾಮೇಗೌಡ)

ಇನ್ನು ವಿದ್ಯುಚ್ಛಕ್ತಿ ಪೂರೈಕೆಯನ್ನು ಐದು ವರ್ಷಗಳಲ್ಲಿ ಪೂರೈಸುತ್ತೇವೆಂದು ಹೇಳಿದ್ದೀರಿ. ನಾನು ನಿಮಗೆ 10 ವರ್ಷಗಳ ಟೈಂ ಕೊಡುತ್ತೇವೆ. ನೀವು ಅಷ್ಟರೊಳಗೆ ಆ ಕಾರ್ಯ ಮಾಡಿದರೆ ನಿಮಗೆ ಶರಣು ಆಗುತ್ತೇನೆ. ಈಗ ನಮ್ಮ ತಾಲ್ಲೂಕಿನಲ್ಲಿ 6 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಮಾನ್ಯ ಶ್ರೀ ಪರಮೇಶ್ವರಪ್ಪನವರು ಇತ್ತೀಚೆಗೆ ವಿದ್ಯುಚ್ಛಕ್ತಿ ಮಂಡಲಿಯ ಮೇಲೆ ಅವರ ಪ್ರಭಾವವನ್ನು ಬೀರಿ ಎರಡು—ಮೂರು ಜಾಸ್ತಿ ಮಾಡಿದ್ದಾರೆ, ನಮ್ಮ ಊರುಗಳಿಗೆಲ್ಲಾ ವಿದ್ಯುಚ್ಛಕ್ತಿ ಕೊಡಬೇಕಾದರೆ ಇನ್ನು 32 ವರ್ಷಗಳು ಬೇಕು. ಆದ್ದರಿಂದ ಇವರು 5 ವರ್ಷಗಳಲ್ಲಿ ಎಲ್ಲ ಗ್ರಾಮಗಳಿಗೂ ಕೊಡುತ್ತೇವೆಂದು ಹೇಳಿದರೆ ಇದು ಯಾವ ಲೆಕ್ಕ? ಮೂರು ಮೂರು ಆರೋ ಅಥವಾ ಒಂಭತ್ತೋ ಎಂದು ನಾನು ಕೇಳಬೇಕಾಗಿದೆ. ಅದನ್ನು ದಯವಿಟ್ಟು ನಿಮ್ಮ ಉತ್ತರದಲ್ಲಿ ಹೇಳಿದರೆ ಬಹಳ ಸಂತೋಷಪಡುತ್ತೇನೆ. ಈಗ 6 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡಬೇಕಾಗಿದ್ದರೆ ಸೇಕಡ 10½ಯಷ್ಟು ಇನ್‌ವೆಸ್ಟ್ ಮಾಡಬೇಕು. ಸೇಕಡ 7½ಯಷ್ಟು ಆಗುವುದಿಲ್ಲ. ನೀರಾವರಿಗೋಸ್ಕರ 210 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನನ್ನ ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳನ್ನು ಮಾತ್ರ ಮೈನರ್ ಇರ್ರಿಗೇಷನ್ನಿಗೋಸ್ಕರ ಕೊಟಿದ್ದಾರೆ. 67ನೇ ಇಸವಿಯಿಂದ ನಮ್ಮ ತಾಲ್ಲೂಕಿನಲ್ಲಿ ನಿಂತಿರತಕ್ಕ ನೀರಾವರಿ ಯೋಜನೆಗಳಿಗಾಗಿ ಕೇವಲ 5 ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದಾರೆ. ಇದು ನಿಮ್ಮ ದುರುದ್ದೇಶದಿಂದಲೋ, ಅಥವ ನಿಮ್ಮ ಅದಕ್ಷತೆಯೋ ಅಥವಾ ಬೇಕೆಂದೇ ಮಾಡಲಿಲ್ಲವೋ ಗೊತ್ತಿಲ್ಲ. 5 ಲಕ್ಷ ರೂಪಾಯಿಗಳು ನಿಮ್ಮ ಲೆಕ್ಕಕ್ಕೆ ಬರುತ್ತದೆ. ಈ ವರ್ಷ 3 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆಗ 8 ಲಕ್ಷ ರೂಪಾಯಿಗಳು ಆಗುತ್ತದೆ. ಅಧಿಕಾರಿಗಳಿಗೆ ಏನೇನೋ ಹೇಳಿಕೊಡುತ್ತಾರೆ. ನಮ್ಮ ತಾಲ್ಲೂಕಿಗೆ ಬರತಕ್ಕ ಅಧಿಕಾರಿಗಳು ರಾಜಕೀಯದಲ್ಲಿ ಪ್ರವೀಣರೇ ಎಂದು ನೋಡಿ ಸೆಲೆಕ್ಟ್‌ಮಾಡಿ ಹಾಕುತ್ತಾರೆ. ಬೆಂಗಳೂರು ಜಿಲ್ಲೆಯಲ್ಲಿ ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರ ಸರ್ಕಾರವಿದ್ದರೆ, ನಮ್ಮ ತಾಲ್ಲೂಕಿನಲ್ಲಿ ಎಂ.ಪಿ.ಸಿ.ಸಿ. ಜನರಲ್ ಸೆಕ್ರೆಟರಿ ಸರ್ಕಾರ ಇದೆಯೆಂದು ನಾವು ತಿಳಿದುಕೊಳ್ಳಬೇಕು. ಇಂಜನಿಯರ್ಸ್ ಆಗಿರುವವರು ಅದನ್ನು ನೋಡುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಅಧಿಕಾರಿಗಳು ಚುನಾವಣೆಯ ಪ್ರಚಾರಮಾಡುವುದು ಬೇರೆ. ಅವರು ಏನು ಹೇಳುತ್ತಾರೆ, ಇಂಥಾದನ್ನು ಮಾಡಬೇಡಿ ಎಂದು ಹೇಳುವುದೇ ಆಗಿದೆ. ಅಭಿವೃದ್ಧಿ ಕಾರ್ಯಗಳನ್ನು ಮಾಡಬಾರದೆಂದು ಹೇಳುವ ಸರ್ಕಾರವನ್ನು ನಾನು ಎಲ್ಲಿಯೂ ನೋಡಿಲ್ಲ. ದೊಡ್ಡಬಳ್ಳಾಪುರದಲ್ಲಿ ಒಂದು ಕೆರೆ ಮಂಜೂರು ಮಾಡುತ್ತಾರೆಂದರೆ ಅದನ್ನು ಮಾಡಬೇಡಿ ಎಂದು ಹೇಳುವ ಅಧಿಕಾರಿಗಳು ಇದ್ದಾರೆ. ಮಂತ್ರಿಗಳೂ ಇದ್ದಾರೆ. ಅಂತಹ ಅಧಿಕಾರಿಗಳು ಈಗ ಎಲ್ಲ ಕಡೆಯೂ ಇದ್ದಾರೆ. ಬಹಳ ದುರಾದೃಷ್ಟ. ನಮ್ಮಲ್ಲಿ ಸೇಕಡ 88ರಷ್ಟು ರೈತರು ಇದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಅನೇಕ ಮೈಲಿಗಳಷ್ಟು ರಸ್ತೆ ಕೆಲಸಗಳನ್ನು ಪ್ರಾರಂಭಮಾಡಿದರು. ಅದು ಮುಂದೆ ಜೀವದಿಂದ ಇರುತ್ತದೋ ಇಲ್ಲವೋ ಗೊತ್ತಿಲ್ಲ.

ಇನ್ನು 10 ಎಕರೆವರೆಗೆ ಕಂದಾಯ ವಜಾ ಮಾಡುತ್ತೇವೆಂದು ಹೇಳಿದರು. ಅಭಿವೃದ್ಧಿ ಯೋಜನೆಯಲ್ಲಿ ಎರಡೂವರೆ ಎಕರೆಗೆ ಒಂದು ಬಾವಿ ತೆಗೆಯಬೇಕೆಂದು ಹೇಳುತ್ತೇನೆ. 10 ಎಕರೆಗೆ ಕಂದಾಯ ವಜಾಮಾಡುತ್ತೇವೆಂದು ಹೇಳುವ ಸಮಯದಲ್ಲಿ ನೀರಾವರಿ ಸೌಕರ್ಯವನ್ನಾದರೂ ಮಾಡಿಕೊಡಿ. ಇದಕ್ಕಾಗಿ 7 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದಾರೆ. ಅದು ಕಾರ್ಯರೂಪಕ್ಕೆ ಬರಬೇಕು. ಅದನ್ನು ನಾವು ಕಾದು ನೋಡಬೇಕು.

ಇನ್ನು ಬೆಂಗಳೂರು ಡೈರಿ ವಿಷಯವಾಗಿ ಬಹಳ ಚೆನ್ನಾಗಿ ಬರೆದಿದ್ದಾರೆ. ನಾನು ಅದನ್ನು ಸ್ವತಃ ಅನುಭವಿಸತಕ್ಕ ಒಬ್ಬ ರೈತ. ಪ್ರತಿದಿನವೂ ಡೈರಿಯೊಳಗೆ ಈಗ 30 ಸಾವಿರ ಲೀಟರುಗಳಷ್ಟು ಹಾಲನ್ನು ಖರ್ಚುಮಾಡುತ್ತಿದ್ದಾರೆ.

ಬೆಂಗಳೂರಿನ ಜನಸಂಖ್ಯೆ 15 ಲಕ್ಷ. 15 ಲಕ್ಷಕ್ಕೆ ಒಂದು ಲಕ್ಷ ಜನರಾದರೂ ಹಾಲು ಕುಡಿಯುವವರು ಇದ್ದಾರೆ. ಹಾಲು ಸರಬರಾಜು ಮಾಡುವುದು 30 ಸಾವಿರ ಲೀಟರುಗಳು ಮಾತ್ರ. ಇದರಲ್ಲಿ ಇರತಕ್ಕಂಥ ನ್ಯೂನತೆಗಳು ಏನು ಎಂದರೆ ಕಳೆದ 5 ವರ್ಷಗಳಿಂದ ಮಳೆಗಾಲದಲ್ಲಿ ಒಂದು ರೇಟು, ಬೇಸಿಗೆಯಲ್ಲಿ ಒಂದು ರೇಟು. ಮಳೆಗಾಲದಲ್ಲಿ 100 ಲೀಟರ್ ಹಾಲು ಮಾತ್ರ ಕೊಡಿ, ಬೇಸಿಗೆಯಲ್ಲಿ ಎಷ್ಟು ಕೊಟ್ಟರೂ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಬೇಸಿಗೆಯಲ್ಲಿ 50 ಲೀಟರ್ ಹಾಲು ಕೊಟ್ಟರೆ ಮಳೆಗಾಲದಲ್ಲಿ 100 ಲೀಟರ್ ಹಾಲು ಮಾತ್ರ ಕೊಡಬೇಕು. ಅದರಮೇಲೆ ಹಾಲು ಕೊಟ್ಟರೂ ದುಡ್ಡು ಇಲ್ಲ. ಯಾವ ಕಮ್ಯೂನಿಸ್ಟ್ ರಾಜ್ಯದಲ್ಲಿಯೂ ಈ ರೀತಿ ಇಲ್ಲ, ಎರಡು ಲೀಟರ್ ಹಾಲು ಹೆಚ್ಚಿಗೆ ಕೊಟ್ಟರೆ ಅದಕ್ಕೆ ದುಡ್ಡು ಇಲ್ಲ. ಇದಕ್ಕಿಂತ ಅನಾನುಕೂಲ ರೈತರಿಗೆ

ಇನ್ನೇನು ಮಾಡಬಲ್ಲಿರಿ.? ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ರೈತರ ಹಣವನ್ನು ಡೇರಿ ಯೊಳಗೆ ಇಟ್ಟುಕೊಂಡಿದ್ದೀರಿ. ಇದು ಯಾವ ನ್ಯಾಯ ? ಮಳೆಗಾಲದಲ್ಲಿ ಬರುವ ಹಾಲನ್ನು ಪೌಡರ್ ಮಾಡಿ ಇಟ್ಟು ಕೊಂಡರೆ, ಬೇಸಿಗೆಯಲ್ಲಿ ಹಾಲು ಕಡಿಮೆ ಇದ್ದಾಗ, ಪೌಡರ್ ಹಾಲು ಮಾಡಿ ಕೊಟ್ಟರೆ ಮಳೆಗಾಲದಲ್ಲಿ ರೈತರ ಹಾಲಿನ ಉತ್ಪತ್ತಿಗೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ, ಮತ್ತು ಬೇಸಿಗೆಯಲ್ಲಿ ಹಾಲುಕುಡಿಯತಕ್ಕ ಜನಗಳಿಗೆ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ಇದಕ್ಕೆ ಯಂತ್ರ ಬೇಕು ಎಂದು. ತಜ್ಞರು ಯೋಜನೆ ಬರೆದು ಕೊಟ್ಟು ಮೂರು ವರ್ಷಗಳಾಯಿತು. ಈ ಪ್ಲಾಂಟಿನ ಬೆಲೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳಾಗುತ್ತದೆ. ಮಂತ್ರಿಗಳು ನಮ್ಮ ಹತ್ತಿರ 4 ಲಕ್ಷ ರೂಪಾಯಿಗಳು ಇಲ್ಲ ಎಂದು ಹೇಳುತ್ತಾರೆ. ಕಂಠೀರವ ಸ್ಟೇಡಿಯಂ ಕಟ್ಟುವುದಕ್ಕೆ, 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ರೈತರಿಗೆ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ನಿಮಗೆ ಮನಸ್ಸು ಬರುವುದಿಲ್ಲ. ಬೆಂಗಳೂರು ಜಿಲ್ಲೆಯಲ್ಲಿರುವ 11 ತಾಲ್ಲೂಕು ಕೋಲಾರ, ಮತ್ತು ತುಮಕೂರಿನ ರೈತರು ಉತ್ಪತ್ತಿ ಮಾಡಿದ ಹಾಲಿಗೆ ಸುಧಾರಿಸಿದ ಬೆಲೆಯನ್ನು ಕೊಡಲು ಯಾಕೆ ದೇವರು ನಿಮಗೆ ಬುದ್ಧಿ ಕೊಡಲಿಲ್ಲವೋ? ನಿಮಗೆ ರೈತರಿಗೆ ಸಹಾಯ ಮಾಡು ವುದಕ್ಕೆ ಮನಸ್ಸು ಇಲ್ಲ. ವರ್ತಕರಿಗೆ, ಕಂಟ್ರಾಕ್ಟರುಗಳಿಗೆ ಸಹಾಯ ಮಾಡುತ್ತೀರಿ. ಅವರಿಗೆ ಅಕ್ರಾಯಿಯ್ ವಜಾ ಮಾಡುತ್ತೀರಿ, ವರ್ತಕರು ಮಾಡಿದ ಮನವಿ ಸರಕಾರಕ್ಕೆ ಮುಟ್ಟಿದೆ. ಆದರೆ ನಾವು ಮಾಡಿದ ಮನವಿ ಮಾತ್ರ ಸರಕಾರಕ್ಕೆ ಯಾಕೆ ಮುಟ್ಟಲಿಲ್ಲ !

ಶ್ರೀ ರಾಮಕೃಷ್ಣ ಹೆಗಡೆ.—ರೈತರೂ ಸಹ ಮನವಿಯನ್ನು ಮಾಡಿದ್ದರು.

ಶ್ರೀ ಜಿ. ರಾಮೇಗೌಡ.—ರೈತರಿಗೆ ಸಹಾಯ ಮಾಡಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಬಾವಿಗಳಿಗೆ, ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಸಾಲ ಕೊಟ್ಟಿದ್ದಾರೆ. ಕೊಟ್ಟ ಸಾಲವನ್ನು ಸರಿಯಾದ ಕಾಲಕ್ಕೆ ವಾಪಸ್ಸು ಕೊಡಲಿಲ್ಲ ಎಂದರೆ ನಾಲ್ಕು ಪರ್ಸೆಂಟ್ ಬಡ್ಡಿ ಮತ್ತು 9 ಪರ್ಸೆಂಟ್ ಸುಸ್ತಿಬಡ್ಡಿ ಕೊಡಬೇಕು ಎಂದು ಇದೆ. ಸಾಲದ ಹಣವನ್ನು ವಾಪಸ್ ಕೊಡದಿದ್ದರೆ ಹೀಗೆ ಒಟ್ಟಿಗೆ 13 ಪರ್ಸೆಂಟ್ ಹಾಕಿ ಹಣವನ್ನು ವಸೂಲು ಮಾಡುತ್ತಾರೆ. ನಾನು ಈ ವಿಚಾರ 1962, 1963, 1964, ಮತ್ತು 1965 ರಲ್ಲಿ ಹೇಳಿದೆ, ಈಗಲೂ ಇಲ್ಲಿ ಹೇಳುತ್ತೇನೆ, ಒಟ್ಟಿನಲ್ಲಿ ರೈತರ ಮನವಿ ಸರ ಕಾರಕ್ಕೆ ಮುಟ್ಟಲಿಲ್ಲ ರೈತರ ಹತ್ತಿರ ಇರುವ ಎತ್ತು, ಕುರಿ, ಕೋಳಿ ಎಲ್ಲವನ್ನೂ ಹರಾಜು ಹಾಕಿ 13 ಪರ್ಸೆಂಟ್ ಹಣವನ್ನು ವಸೂಲು ಮಾಡುತ್ತಿದ್ದಾರೆ.

ಎಲೆಕ್ಟ್ರಿಸಿಟಿ ಚಾರ್ಜಸ್ ವಿಚಾರ ಹೇಳಿದ್ದಾರೆ. ನಮ್ಮದೇಶದಲ್ಲಿ ಉತ್ಪತ್ತಿಯಾಗುವಷ್ಟು ವಿದ್ಯುಚ್ಛಕ್ತಿ ಬೇರೆ ಯಾವ ದೇಶದಲ್ಲಿಯೂ ಆಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ 5½ ರೂಪಾಯಿ ಚಾರ್ಜು ಇದ್ದರೆ ಶೇಕಡ 50 ಸರ್‌ಚಾರ್ಜ್‌ನ್ನು ಸರಕಾರದವರು ತೆಗೆದುಕೊಳ್ಳುತ್ತಾರೆ. ಯಾತ ಕ್ಕೋಸ್ಕರ ಸರ್‌ಚಾರ್ಜ್ ತೆಗೆದುಕೊಳ್ಳುತ್ತೀರಾ ? ಕಾರಣ ಏನು! ವ್ಯವಸಾಯಕ್ಕೆ ಉಪಯೋಗಿಸ ತಕ್ಕ ಪದಾರ್ಥಗಳಿಗೆ ಸೇಲ್ಸ್ ಟ್ಯಾಕ್ಸ್ ಹಾಕಬಾರದು, ಗೊಬ್ಬರಕ್ಕೆ, ನೇಗಿಲಿಗೆ, ಟ್ರಾಕ್ಟರುಗಳಿಗೆ ಹಾಕಬಾರದು ಎಂದು ಹೇಳಿದ್ದರೂ ಅದರ ಮೇಲೆ ಕೋಟಿಗಟ್ಟಲೆ ಹಣವನ್ನು ವಸೂಲು ಮಾಡು ತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟಾದರೂ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿ ಲುಕ್ಸಾನು ಆಗುತ್ತಿದೆ.

ಶ್ರೀ ಜಿ. ರಾಮೇಗೌಡ,—ನೀವು ಸಮುದ್ರದ ಉಪ್ಪು ನೀರಿನವರೇ ಹೊರತು ಸಿಹಿ ನೀರಿನವರು ಅಲ್ಲ. ಉಪ್ಪು ನೀರು ಕುಡಿದ ದೇಹ ಹಣಕಾಸಿನ ಪರಿಸ್ಥಿತಿ ತಿನ್ನುವುದಲ್ಲದೆ ನಮ್ಮನ್ನು ತಿನ್ನು ವುದಕ್ಕೂ ಹತ್ತಿದ್ದೀರಿ. ಹಾಗೆ ಮಾಡಬೇಡಿ ನಮ್ಮಲ್ಲಿ ಸಂಘಟನೆ ಇಲ್ಲ. ಎಂದು ಹೇಳಿದಿರಿ. ಇದುವರೆಗೂ ಇರಲಿಲ್ಲ. ಇನ್ನು ಮುಂದೆ ಸಂಘಟನೆ ಆಗುತ್ತದೆ. ಆಗ ನಾವು ಹೇಳಿದಂತೆ ನೀವು ಮಾಡುವಂಥ ಪರಿಸ್ಥಿತಿ ಬರುತ್ತದೆ. ಆಗ ನೀವು ಮಾಡಬೇಕಾಗುತ್ತದೆ. ಅದಕ್ಕೆ ಮುಂಚಿತವಾಗಿ ರೈತರ ಕಷ್ಟ ಏನು ಇದೆ ಎಂದು ಆಲೋಚನೆ ಮಾಡಿ. ಕಷ್ಟಕ್ಕೆ ಅನುಗುಣವಾಗಿ ಸಹಾಯ ಮಾಡಿದರೆ ಕಂದಾಯ ಕೊಡುವುದಿಲ್ಲ ಎಂದು ಹೇಳುವುದಿಲ್ಲ. ಕೊಡಬೇಕಾದ್ದನ್ನು ಇವೊತ್ತು ಅಲ್ಲ ನಾಳೆ ದಿವಸ ಕೊಟ್ಟೇ ಕೊಡುತ್ತೇವೆ.

ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವುದಕ್ಕೆ ತಾಲ್ಲೂಕು ಬೋರ್ಡಿನವರಿಗೆ ಕೊಟ್ಟಿರು ವುದನ್ನು ಬದಲಾಯಿಸಿ ಪಿ. ಡಬ್ಲ್ಯೂ. ಡಿ. ಇಲಾಖೆಯವರಿಗೆ ಕೊಟ್ಟಿದ್ದಾರೆ. ಕಾರಣ ಬಾವಿಗಳು ಆಗಬಾರದು ಎಂದು ಒಂದೇ ದುರುದ್ದೇಶ ಇರಬಹುದು. ಏತಕ್ಕೋಸ್ಕರ ತಾಲ್ಲೂಕು ಬೋರ್ಡ್ ನಿಂದ ಪಿ. ಡಬ್ಲ್ಯೂ. ಡಿ. ಯವರಿಗೆ ಕೊಟ್ಟರಿ ? ಊರಿಗೆ ಒಂದು ಕುಡಿಯುವ ನೀರಿನ ಬಾವಿಯನ್ನು ಕೇಳಿದರೆ ಇಲ್ಲ. ಬಾವಿ ತೆಗೆಸುವುದಕ್ಕೆ ಪಿ. ಡಬ್ಲ್ಯೂ ಡಿ. ಇಲಾಖೆಯವರಿಗೆ ವಹಿಸಿಕೊಟ್ಟಿರುವು

(ಶ್ರೀ ಜಿ. ರಾಮೇಗೌಡ)

ದರಿಂದ ಅವರು ಪರ್ಸೆಂಟೇಜ್ ಹಾಕಿ ಲಾಭ ಸಂಪಾದಿಸುವಂತೆ ಮಾಡಿಕೊಂಡಿದ್ದಾರೆ. ಇದರಲ್ಲಿ ಬಹಳ ಅನ್ಯಾಯವಾಗುತ್ತಾ ಇದೆ. ಮಹಾತ್ಮ ಗಾಂಧಿ ಶತಮಾನೋತ್ಸವದ ಸಮಯದಲ್ಲಿ ಎಲ್ಲಾ ಊರಿನಲ್ಲಿಯೂ ಕುಡಿಯುವ ನೀರಿನಬಾವಿಗಳನ್ನು ತೆಗೆಸುತ್ತೇವೆ ಎಂದು ಹೇಳಿದರು. ಆದರೆ ಒಂದು ಊರಿನಲ್ಲಿಯೂ ಕೂಡ ಕುಡಿಯುವ ನೀರಿನ ಬಾವಿ ಇಲ್ಲ. ಬಾವಿ ಇದೆ ಎಂದು ಹೇಳಿದರೆ ನಾನು ಹೇಳುವುದನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ರೈತರಿಗೆ ಈಗ ಆಧಾರಭೂತ ವಾದದ್ದು ಎಂದರೆ ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋಗುವುದು, ದೊಡ್ಡಬಳ್ಳಾಪುರ ತಾಲ್ಲೂಕು ಹೋಬಳಿ ಹೆಡ್‌ಕ್ವಾರ್ಟರ್ಸ್‌ಗೆ ದೀಪ ಇಲ್ಲ. ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕು ಎಂದು ಆಲೋಚನೆ ಮಾಡಬೇಕು. ಈ ಪರಿಸ್ಥಿತಿಯನ್ನು ಸರಿಪಡಿಸಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಏನು ಒಂದು ಕಡ್ಡಾಯವಾಗಿ ಇಷ್ಟೇ ಲಾಭ ಬರಬೇಕು ಎಂದು ಹೇಳುತ್ತೀರಿ ಅದನ್ನು ಇಲ್ಲದಂತೆ ಮಾಡಿ ರೈತರಿಗೆ ಅನುಕೂಲ ಮಾಡಿಸಿಕೊಡಬೇಕು ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ನಿಮ್ಮ ಬಜೆಟ್ ಭಾಷಣವನ್ನು ನೋಡಿದರೆ ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಸಹಕಾರ ಸಂಸ್ಥೆಗಳ ವಿಚಾರವಾಗಿ ತಾವು ಏನೂ ಹೇಳಲಿಲ್ಲ. ತಾವು ಪರದೇಶಕ್ಕೆ ಹೋಗುವುದಕ್ಕೆ ಮುಂಚೆ ಭಾಷಣ ಮಾಡಿದಾಗ ಇನ್ನು ಐದು ವರ್ಷಗಳಲ್ಲಿ ಈ ಒಂದು ಡಿಪಾರ್ಟಮೆಂಟ್ ಏನಿದೆ ಅದನ್ನು ಇಲ್ಲದಹಾಗೆ ಮಾಡುತ್ತೇನೆ ಎಂದು ಹೇಳಿದಿರಿ. ಆದರೆ ಈಗ ಏನು ಮಾಡಿದ್ದೀರಿ ಎಂದರೆ ರೆವಿನ್ಯೂ ಇಲಾಖೆಯಲ್ಲಿ ಯಾರು ಯಾರು ಆಫೀಸರು ಇದ್ದಾರೋ ಅದರಂತೆ ಸಹಕಾರ ಇಲಾಖೆಯಲ್ಲಿಯೂ ಇಟ್ಟಿದ್ದೀರಿ. ಷೇಕ್‌ದಾರರಿಗೆ, ಷೇಕ್‌ದಾರರು, ಅಮಲದಾರರಿಗೆ ಅಮಲ್‌ದಾರರು, ಅಸಿಸ್ಟೆಂಟ್ ಕಮೀಷನರಿಗೆ ಅಸಿಸ್ಟೆಂಟ್ ಕಮೀಷನರು ಇದ್ದ ಹಾಗೆ ಎಲ್ಲಿ ನೋಡಿದರೂ ಈ ಇಲಾಖೆಯಲ್ಲಿ ಅಧಿಕಾರಿಗಳನ್ನು ತುಂಬಿಸಿದ್ದೀರಿ. ಕಾರ್ಯಕ್ರಮ ಏನನ್ನೂ ಮಾಡಲಿಲ್ಲ. ಸೊಸೈಟಿಗಳಲ್ಲಿ ತಪ್ಪು ಮಾಡಿದ್ದರೆ ಪೋಸ್ಟ್‌ಮಾರ್ಟಂ ಮಾಡುತ್ತೀರಿ. ಅದರ ಬದಲು ತಪ್ಪು ಆಗದ ಹಾಗೆ ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕು.

ಷೆಡ್ಯೂಲ್ಡ್ ಬ್ಯಾಂಕಿನವರು 25 ಕೋಟಿ ಕೊಟ್ಟಿದ್ದಾರೆ, 35 ಕೋಟಿ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಯಾರಿಗೆ ಕೊಟ್ಟಿದ್ದಾರೆ ಎಂದರೆ ಲಕ್ಷಾಂತರ ರೂಪಾಯಿ ಇರುವವರಿಗೆ ಕೊಟ್ಟಿದ್ದಾರೆಯೇ ಹೊರತು ಬಡವರಿಗೆ ಕೊಡಲಿಲ್ಲ. ಇದನ್ನು ತಾವು ಗಮನಿಸಬೇಕು. ಸಾಮಾನ್ಯ ಜನಗಳಿಗೂ ಸಾಲ ಸಿಕ್ಕುವಂತೆ ಮಾಡಬೇಕೆಂದು ಷೆಡ್ಯೂಲ್ಡ್ ಬ್ಯಾಂಕಿನವರಿಗೆ ಇನ್‌ಸ್ಟ್ರಕ್ಷನ್ಸ್‌ನ್ನು ಕೊಡಬೇಕು 20 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದನ್ನು ಉಪಯೋಗಿಸಿಕೊಂಡು ವಾಪಸ್ಸು ಕೊಡದೆ ಇರುವುದನ್ನು ತಪ್ಪಿಸಬೇಕು. ಸಾವಿರ ರೂಪಾಯಿ ಸಾಲಕ್ಕೆ ಅರ್ಜಿ ಹಾಕಿದರೆ ಅದರ ಪರೀಕ್ಷೆಗಾಗಿ 25 ರೂಪಾಯಿಗಳನ್ನು ಖರ್ಚುಮಾಡಬೇಕು, ಉತ್ಪತ್ತಿನೋಡಿಕೊಂಡು ಬಂದರೆ ಅದಕ್ಕೆ 50 ರೂಪಾಯಿ ಖರ್ಚು ಮಾಡಬೇಕು. ಹೀಗೆ 125 ರೂಪಾಯಿ ಬಡ್ಡಿ ಜೊತೆಗೆ ಕೊಡುವುದನ್ನು ತಪ್ಪಿಸಬೇಕು. ಸುಮ್ಮನೆ ಕೆಲಸ ಚೆನ್ನಾಗಿ ಮಾಡುತ್ತಿದ್ದಾರೆ ಎಂದರೆ ರೈತ ಬಹಳ ನರಳಬೇಕಾಗುತ್ತದೆ. ಹಿಂದೆ ಸಾಹುಕಾರರು ಶೋಷಣೆ ಮಾಡುತ್ತಿದ್ದರು. ಸಹಕಾರ ಸಂಸ್ಥೆಗಳನ್ನು ತಂದಿಟ್ಟಿದ್ದಾರೆ ಅವುಗಳಿಂದ ಶೋಷಣೆ ನಡೆಯುತ್ತಿದೆ. ಅವು ರೈತರಿಗೆ ಬೆಂಬಲಕೊಡದಿದ್ದರೆ ರೈತ ಮುಂದೆ ಬರುವುದಕ್ಕೆ ಆಗುವುದಿಲ್ಲ. ಇವುಗಳ ಶೋಷಣೆ ತಪ್ಪಿಸಬೇಕೆಂದು ಹೇಳುತ್ತೇನೆ.

4-30 P.M.

ಸ್ವಾಮಿ, ವ್ಯವಸಾಯದ ಅನುಕೂಲಕ್ಕಾಗಿ ತಾವು ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನ್ನು ಮಾಡಿ ಖಂಡಿತವಾಗಿಯೂ ಬಹಳ ಒಳ್ಳೆಯ ಕೆಲಸ ಮಾಡಿದಿರಿ. ಆದರೆ ಇದರಿಂದ ನಮ್ಮ ವ್ಯವಸಾಯಕ್ಕೆ ಬಹಳ ಕಷ್ಟವಾಗುತ್ತಿದೆ, ಅವರು ಎಲ್ಲ ಚಾರ್ಜಸ್‌ನ್ನು ಜಾಸ್ತಿ ಮಾಡಿದ್ದಾರೆ. ಹಿಂದೆ ಇದ್ದುದಕ್ಕಿಂತ ಹತ್ತರಷ್ಟು ಜಾಸ್ತಿಯಾಗಿರುವುದು ಖಂಡಿತವಾಗಿಯೂ ಸರಿಯಲ್ಲ, ಆದ್ದರಿಂದ ಹಿಂದೆ ಏನು ಚಾರ್ಜಸ್ ಇತ್ತೋ ಅದನ್ನೇ ಇಟ್ಟುಕೊಳ್ಳುವಂತೆ ಮಾಡಿ ಅನುಕೂಲ ಮಾಡಿಕೊಡಬೇಕು. ಅದು ಬಹಳ ಉತ್ತಮವಾಗಿ ಕೆಲಸ ಮಾಡುತ್ತಾ ಇದೆ ಅದರಲ್ಲಿ ಯಾವ ಸಂದೇಹವೂ ಇಲ್ಲ ಆದರೆ ರೈತನ ಮೇಲೆ ಅದು ಹೊರಿಸುತ್ತಾ ಇರಕ್ಕ ಭಾರವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ಅಲ್ಲಿ ಸಾಲ ದೊರೆಯುವುದಿಲ್ಲ, ತಿರುಗಿ ಬೇರೆ ಕಡೆ ಸಾಲಕ್ಕೆ ಹೋಗತಕ್ಕ ರೂಢಿ

ಬಂದಿರುವುದರಿಂದ ರೈತನಿಗೆ ತುಂಬಾ ಕಷ್ಟವಾಗುತ್ತಿದೆ. ಹಿಂದೆ ಸರ್ಕಾರದಲ್ಲಿ ಎಷ್ಟು ಸುಲಭವಾಗಿ ಸಾಲ ಸಿಕ್ಕುತ್ತಿತ್ತೋ ಅಷ್ಟೇ ಸುಲಭವಾಗಿ ಅಲ್ಲಿ ಸಾಲ ಸಿಕ್ಕಬೇಕು, ಅಂತಹ ಒಂದು ವ್ಯವಸ್ಥೆಯಾಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೂ ವರ್ತಕರು ಹೇಗೆ ಅನುಕೂಲ ಮಾಡಿಕೊಡುತ್ತಾರೋ ಅದಕ್ಕಿಂತ ಇಮ್ಮಡಿಯಾಗಿ ಅನುಕೂಲ ಮಾಡಿಕೊಟ್ಟು ಅದನ್ನು ಕಾರ್ಯರೂಪದಲ್ಲಿ ತರಬೇಕು. ಸಮಾಜವಾದ ಎಂದು ಹೇಳುತ್ತೀರಿ, 15 ಪರ್‌ಸೆಂಟ್ ಆದರೆ ಸಾಲದು, 85 ಪರ್ಸೆಂಟ್ ಸಾಮಾನ್ಯ ಜನತೆಗೆ ಅನ್ವಯವಾಗುವಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಅದಕ್ಕೆ ನಮ್ಮ ಮಾನ್ಯ ಅರ್ಥಿಕ ಮಂತ್ರಿಗಳು ಮನಸ್ಸು ಮಾಡಬೇಕು, ತಾಲ್ಲೂಕು ತಾಲ್ಲೂಕಿಗೆ ವ್ಯತ್ಯಾಸ ಮಾಡುತ್ತಾ ಇರುವುದು ಒಂದು ದೊಡ್ಡ ಅಪರಾಧ, ಇದನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ನಮ್ಮ ಆರ್ಥಿಕ ಸಚಿವರು ಪಿ.ಎಚ್.ಡಿ. ಗೆ ಥೀಸೀಸ್ ಬರೆಯುತ್ತಾರಲ್ಲಾ ಆ ರೀತಿ ಒಂದು ಬಹಳ ಶ್ಲಾಘನೀಯವಾದಂತಹ ಒಂದು ಈ ಬಡ್ಜೆಟ್ಟಿನ ವಿವರಣೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಡ್ಜೆಟ್ಟನ್ನೆಲ್ಲಾ ಓದಿದ ಮೇಲೆ ನಾವು ಜನಸಾಮಾನ್ಯರ ದೃಷ್ಟಿಯಿಂದ ಈ ಆಡಳಿತದಲ್ಲಿ ಜನಗಳ ಆಹಾರ ಸಮಸ್ಯೆ ಏನಾದರೂ ಬಗೆಹರಿದಿದೆಯೇ, ಬಟ್ಟೆ ಸಮಸ್ಯೆ ಏನಾದರೂ ಬಗೆಹರಿದಿದೆಯೇ ಮತ್ತು ಜನಗಳು ವಾಸಮಾಡತಕ್ಕ ಮನೆಗಳ ಸಮಸ್ಯೆ ಏನಾದರೂ ಬಗ್ಗೆ ಹರಿದಿದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಹೋದ ವರ್ಷ ದೈವವಶಾತ್ ಮಳೆ ಸರಿಯಾಗಿ ಆಗಿದ್ದರಿಂದ ರಾಗಿ, ಅಕ್ಕಿ ಮತ್ತು ಜೋಳದ ಬೆಲೆ ಬಿಟ್ಟು ಮಿಕ್ಕ ಎಲ್ಲಾ ಸಾಮಾನುಗಳ ಬೆಲೆ ಕೂಡ ಯದ್ವಾತದ್ವಾ ಏರುತ್ತಾ ಇರುವುದು ತಮಗೆ ಗೊತ್ತಿದೆ. ಬಟ್ಟೆ ಬೆಲೆ ಕಳೆದ 6 ತಿಂಗಳಿನಲ್ಲಿ ಶೇಕಡ 25ರಷ್ಟು ಏರಿದೆ. 9 ರೂಪಾಯಿನ ಒಂದು ಕೋರ್ಸ್‌ಧೋತ್ರ ಇವತ್ತಿನ ದಿವಸ 15 ರೂಪಾಯಿ ಆಗಿದೆ. ಫೈನ್ ಧೋತಿ 25 ರೂಪಾಯಿ ಇದ್ದದ್ದು 30 ರೂಪಾಯಿ, ಸೂಪರ್ ಫೈನ್ 35 ರಿಂದ 40 ರೂಪಾಯಿ ಆಗಿದೆ. ಲಾಂಗ್ ಕ್ಲಾತ್ 2 ರೂಪಾಯಿ ಇದ್ದದ್ದು ಎರಡೂ ಮುಕ್ಕಾಲು ರೂಪಾಯಿ ಆಗಿದೆ. ಜೊತೆಗೆ ತೆಂಗಿನಕಾಯಿ ಬೆಲೆ ಹೋದ ವರ್ಷ 50 ಅಥವಾ 60 ಪೈಸೆ ಇದ್ದದ್ದು ಇವತ್ತು 80-90 ಪೈಸೆ ಒಂದು ರೂಪಾಯಿ ಆಗಿದೆ. ಇದಕ್ಕೆ ಕಾರಣವೇನೆಂದು ಕೇಳಿದ್ದಕ್ಕೆ ಈಚಲು ಮರಗಳನ್ನೆಲ್ಲಾ ಕಡಿದು ಹಾಕಿದರು, ಈಗ ಪಾನನಿರೋಧ ತೆಗೆದ ಮೇಲೆ ಹೆಂಡ ತೆಗೆಯುವುದಕ್ಕೆ ತೆಂಗಿನ ಮರಗಳನ್ನು ಉಪಯೋಗಿಸುತ್ತಾರೆ, ಆದ್ದರಿಂದ ತೆಂಗಿನ ಫಸಲು ಕಡಿಮೆಯಾಗಿದೆ ಬೆಲೆ ಏರಿದೆ ಎಂದು ಹೇಳುತ್ತಾರೆ. ಸರ್ಕಾರದವರು ಈ ಪಾನನಿರೋಧವನ್ನು ಕಿತ್ತುಹಾಕಿದ್ದರಿಂದ ಒಂದು ವಿಧದಲ್ಲಿ ವರಮಾನ ಬಂದರೂ ಕೂಡ ಹೆಚ್ಚು ವಿಧದಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗುತ್ತಾ ಇದೆ ಎಂಬುದನ್ನು ಈ ಸಂಧರ್ಭದಲ್ಲಿ ಗಮನಿಸಬೇಕಾಗಿದೆ. ಈಗ ಸೌದೆಯ ಬೆಲೆ ಯದ್ವಾತದ್ವಾ ಏರಿದೆ. ಕಳೆದ ವರ್ಷ ಸರ್ವೆಸೌದೆ ಒಂದು ಟನ್‌ಗೆ 75 ರೂಪಾಯಿ ಇದ್ದದ್ದು ಇವತ್ತು 125 ಅಥವಾ 130 ರೂಪಾಯಿ ಆಗಿದೆ. ಇದರ ಜೊತೆಗೆ ಪವರ್ ಬೆಲೆಯೂ ಕೂಡ ಜಾಸ್ತಿಯಾಗಿರುವುದರಿಂದ ಜನಗಳ ನಿತ್ಯ ಜೀವನ ಬಹಳ ಕಷ್ಟವಾಗುತ್ತಾ ಇದೆ. ಒಂದು ಕಾಲದಲ್ಲಿ ಭದ್ರಾವತಿ ಮತ್ತು ಜಮಷೆಡ್‌ಪುರದ ಸ್ಟೀಲ್ ಬೆಲೆ ಟನ್‌ಗೆ 500–600 ರೂಪಾಯಿ ಇದ್ದದ್ದು ಇವತ್ತು 1800 ಅಥವಾ 2000 ರೂಪಾಯಿ ತನಕ ಹೋಗಿರುವುದನ್ನು ನಾನು ನೋಡಿದ್ದೇನೆ. ಇಟ್ಟಿಗೆ ಬೆಲೆ ಹೋದ ವರ್ಷ 90 ರೂಪಾಯಿ ಇದ್ದದ್ದು ಇವತ್ತಿನದಿವಸ 120–130 ರೂಪಾಯಿ ಆಗಿದೆ. ಮನೆಗಳು ಒಂದು ಚದುರಕ್ಕೆ ಎರಡು ವರ್ಷಗಳ ಕೆಳಗೆ 2 ಸಾವಿರ ರೂಪಾಯಿ ಇದ್ದದ್ದು ಇವತ್ತು 3 ಸಾವಿರ ರೂಪಾಯಿ ಆಗುತ್ತಾ ಇದೆ. ಈಗ ಊಟದ ವ್ಯವಸ್ಥೆಯಾಗಲಿ, ಬಟ್ಟೆ ವ್ಯವಸ್ಥೆಯಾಗಲಿ ವಾಸಮಾಡತಕ್ಕ ಮನೆಗಳ ವ್ಯವಸ್ಥೆಯಾಗಲಿ ಜನಸಾಮಾನ್ಯರಿಗೆ ಅವರ ಶಕ್ತ್ಯಾನುಸಾರವಾಗಿ ದೊರೆಕಿಸದಿದ್ದಲೆ ಈ ಸರ್ಕಾರದ ಆಡಳಿತ ಮೆಚ್ಚಿಕೊಳ್ಳತಕ್ಕದ್ದಾಗಿದೆಯೇ ಎಂಬುದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಎಲ್ಲಿ ಭಾಷಣಗಳಾದರೂ ಕೂಡ ಅನ್‌ಎಂಪ್ಲಾಯಮೆಂಟ್ ಬಗ್ಗೆ ಯೋಚನೆಮಾಡೋಣ—ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ನಮ್ಮ ಜನಗಳ ಗೋಳು ಕೇಳುವುದಕ್ಕೆ ಸಾಧ್ಯವಿಲ್ಲ, ವಿದ್ಯಾವಂತನಾಗಲಿ, ವಿದ್ಯೆ ಇಲ್ಲದವನಾಗಲಿ ಕಡೆ ಪಕ್ಷ ನೂರು ನೂರೈವತ್ತು ಜನರು ಕೆಲಸವಿಲ್ಲದೆ ಒದ್ದಾಡುತ್ತಾ ಇರತಕ್ಕ ಸಮಸ್ಯೆಯನ್ನು ನೋಡುತ್ತಾ ಇದ್ದೇವೆ. ಈ ಸಮಸ್ಯೆಗಳು ಒಂದೂ ಬಗೆಹರಿಯದೆ ಎಲ್ಲರೂ ಕೂಡ ಸೋಷಿಯಲಿಸಂ ಎಂಬ ಸ್ಲೋಗನನ್ನು ಹೇಳುತ್ತಾ ಇದ್ದಾರೆ. ನಾನಾ ಕಾರಣಗಳಿಂದ ಜನಗಳಿಗೆ ಆಗಬೇಕಾದ ಸೌಕರ್ಯ ಯಾವುದೂ ಆಗುತ್ತಾ ಇರುವುದು ನಮಗೆ ಕಾಣುತ್ತಾ ಇಲ್ಲ. ಈಗ ಏನಾಗಿದೆಯೆಂದರೆ ಇವರ ಮೇಲೆ ಅವರು ತಪ್ಪು, ಅವರ ಮೇಲೆ ಇವರು ತಪ್ಪು ಹಾಕತಕ್ಕ ಒಂದು ಕಾರಣ ನಮ್ಮ ಮುಂದೆ ಕಾಣುತ್ತಾ ಇದೆ; ಕಾರಣಾಂತರದಿಂದ ಈಗಿನ ಬಡ್ಜೆಟ್‌ನಲ್ಲಿ ಚುನಾವಣೆಯ ವಿಚಾರವನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ, ನಾನು ತಮಗೆ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳಬೇಕಾದರೆ ಈಗ ಜನ ತಮ್ಮ ಮೆಚ್ಚುಗೆಯನ್ನು ತೋರಿಸಿ ಶ್ರೀಮತಿ ಇಂದಿರಾಗಾಂಧಿಯವರಿಗೆ

(ಶ್ರೀ ಟಿ. ಆರ್. ಶಾಮಣ್ಣ)

ಸಾಕಾದಷ್ಟು ಬೆಂಬಲ ಕೊಟ್ಟಿದ್ದಾರೆ. ತಪ್ಪನ್ನು ಬೇರೆಯವರ ಮೇಲೆ ಹೊರಿಸಿದ ಹಾಗೆ ಹೊರಿಸಿ ಈ ಕಾಂಗ್ರೆಸ್ಸು ಎರಡು ಭಾಗವಾಗಿದ್ದು ದೇಶದ ದೌರ್ಭಾಗ್ಯ. ಆದ್ದರಿಂದ ಈ ಕಾಂಗ್ರೆಸ್ಸಿನ ಪೂರ್ಣ ಜವಾಬ್ದಾರಿಯನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಬಿಟ್ಟು ಬಿಟ್ಟು ಆಡಳಿತ ನಡೆಸುವುದಕ್ಕೆ ಅವಕಾಶಮಾಡಿ ಕೊಟ್ಟರೆ ಏನಾದರೂ ದೇಶಕ್ಕೆ ಅನುಕೂಲವಾಗುತ್ತದೆಯೇ, ಕಾದು ನೋಡುವುದು ಸರಿಯೆಂದು ಕಾಣುತ್ತದೆ. ಏಕೆಂದರೆ ಈ ರಾಜಕೀಯದ ಜುಂಗಾಟದಿಂದ ಜನಸಾಮಾನ್ಯರಿಗೆ ಯಾವ ವಿಧವಾದ ಸೌಲಭ್ಯವೂ ಕಾಣುತ್ತಿಲ್ಲ. ಈ ರಾಜಕೀಯದ ಜುಂಗಾಟದಿಂದ ಮೊನ್ನೆ ಮಧ್ಯ ಕಾಲಿಕ ಚುನಾವಣೆ ಯಾದ್ದರಿಂದ ನನ್ನ ಅಂದಾಜಿನಲ್ಲಿ ಕಡೆಪಕ್ಷ ಸುಮಾರು 300 ರಿಂದ 400 ಕೋಟಿ ರೂಪಾಯಿಗಳವರೆಗೂ ಜನಸಾಮಾನ್ಯರ ದುಡ್ಡು ಖರ್ಚಾಗಿದೆ. ಇದು ಯಾವ ದೇವರಿಗೆ ಪ್ರೀತಿಯೋ ಗೊತ್ತಾಗಲಿಲ್ಲ. ಆದ್ದರಿಂದ ನನ್ನ ಸವಿನಯ ಪ್ರಾರ್ಥನೆಯೆಂದರೆ ಜನ ಮೆಚ್ಚುವ ಸರ್ಕಾರ ಈಗ ಕೇಂದ್ರದಲ್ಲಿ ರಚಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ಪೂರ್ಣವಾಗಿ ಸರ್ಕಾರವನ್ನು ರಚನೆ ಮಾಡಲು ಅವಕಾಶ ಮಾಡಿಕೊಟ್ಟು ಇರತಕ್ಕ ಅಡಚಣೆಗಳು, ಅಡ್ಡಿಗಳನ್ನು ತೆಗೆದು ಹಾಕಿದರೆ ದೇಶಕ್ಕೆ ಏನಾದರೂ ಸೌಲಭ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕೇ ಹೊರತು ಪೊಲಿಟಿಕಲ್ ಅನ್‌ಸರ್ಟನ್ಟಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂಬುದನ್ನು ಈಗ ಯೋಚನೆ ಮಾಡಬೇಕಾದ ಕಾಲ ಒದಗಿದೆ.

ಅರ್ಬನ್ ಡೆವಲಪ್‌ಮೆಂಟ್ ವಿಚಾರದಲ್ಲಿ ಆರ್ಥಿಕ ಸಚಿವರ ಭಾಷಣದಲ್ಲಿ ಸಾಕಾದಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ವಿಚಾರದಲ್ಲಿ ನಾನು ಮಾತನಾಡಬೇಕಾದರೆ ನಮ್ಮಲ್ಲಿ ಸಿಟಿ ಇಂಪ್ರೂವಮೆಂಟ್ ಟ್ರಸ್ಟ್ ಬೋರ್ಡ್ ಇದೆ. ಈ ಟ್ರಸ್ಟ್ ಬೋರ್ಡಿಗೆ ರಾಜಕೀಯ ಕಾರಣದಿಂದಲೋ ಮತ್ತಾವ ಕಾರಣದಿಂದಲೋ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರಿ. ಹಿಂದೆ ನಗರಾಭಿವೃದ್ಧಿ ಮಂಡಲಿಯು ಯಾವ ಅಧ್ಯಕ್ಷರ ಕಾಲದಲ್ಲೂ ಕೂಡ ಇಷ್ಟು ಹೀನಸ್ಥಿತಿಗೆ ಬಂದಿರಲಿಲ್ಲ. ಎಷ್ಟೋ ಜನರಿಗೆ ಏಳೆಂಟು ಸಾರಿ ಅಪ್ಲಿಕೇಷನ್ ಹಾಕಿದರೂ ಕೂಡ ಸೈಟು ಸಿಕ್ಕಿಲ್ಲದಿರುವ ಅನೇಕ ಸಂದರ್ಭಗಳಿವೆ. ರೆವೆನ್ಯೂ ಸೈಟುಗಳನ್ನು ಕ್ರಮಪಡಿಸಿಲ್ಲ, ಸೈಟುಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದವರನ್ನು ಬಿಡಿಸಿ ಆ ಮನೆಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಕಟ್ಟಿಕೊಂಡಿದ್ದ ಮನೆಗಳನ್ನು ಕೆಡವಿಸಿದ್ದಾರೆ. ಇಂಥವರು ಛೇರ್ಮನ್ನರಾಗಿರುವುದಕ್ಕೆ ಲಾಯಖ್ ಅಲ್ಲ. ಜನರ ಗೋಳು ಹೇಳತೀರದು, ದಿನವೂ ಕೂಡ ಆಗಬೇಕಾದ ಕೆಲಸಗಳಿಗಾಗಿ ಅಲೆಯಬೇಕಾಗಿದೆ. ಜೊತೆಗೆ ಯಲಹಂಕದ ಬಳಿ ಒಂದು ಉಪನಗರ ನಿರ್ಮಾಣಮಾಡಲು ತೀರ್ಮಾನಿಸಿದ್ದಾರೆ. ಕೆಂಗೇರಿ ಬಳಿ ಟೌನ್ ಮಾಡಬೇಕೆಂದಿದ್ದರು, ಅಲ್ಲಿ ನೀರಿಲ್ಲದೆ ವಾಸಮಾಡಲು ಅನುಕೂಲವಾಗಿಲ್ಲ ಆ ಕೆಲಸ ಮುಂದುವರೆದರೆ ಹಣ ಖರ್ಚಾಗುವುದೇ ಹೊರತು ಜನಸಾಮಾನ್ಯರಿಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಇದು ಶೋಚನೀಯವಾದ ವಿಚಾರ. ಬೆಂಗಳೂರಿನಲ್ಲಿ 110 ಸ್ಲಂಗಳಿವೆ, ಇತ್ತೀಚೆಗೆ 3 ಹೊಸದಾಗಿ ಆಗಿವೆ ಎಂದು ಕೇಳುತ್ತೇವೆ. ಆ ಸ್ಲಂ ಕ್ಲಿಯರ್ ಮಾಡಲು ಸಾಧ್ಯವೇ? ಶ್ರೀಮತಿ ಇಂದಿರಾಗಾಂಧಿಯವರು ತಾವು ಭಾಷಣ ಮಾಡುವಾಗ ಸ್ಲಂ ಕ್ಲಿಯರೆನ್ಸ್‌ಗೆ ಸುಮಾರು 50 ರಿಂದ 100 ಕೋಟಿ ರೂಪಾಯಿ ಖರ್ಚು ಮಾಡುವುದಾಗಿ ಚುನಾವಣೆ ಸಮಯದಲ್ಲಿ ಹೇಳಿದ್ದಾರೆ. ಕೇಂದ್ರದ ಸಹಕಾರ ಪಡೆದು ಅಥವಾ ರಾಜ್ಯದ ಹಣದಿಂದ ಸ್ಲಂ ಕ್ಲಿಯರೆನ್ಸ್ ಮಾಡಿದರೆ ಅನುಕೂಲವಾಗುವುದು. ಇದನ್ನು ಅನೇಕ ಸಲ ಹೇಳಿದ್ದೇವೆ.

ಸಂಸ್ಕೃತ ಮತ್ತು ಸಂಗೀತ-ನೃತ್ಯಗಳ ಅಧ್ಯಯನಗಳಿಗೆ, ಡ್ರಾಮಾ-ಡ್ಯಾನ್ಸ್ ಮುಂತಾದವುಗಳಿಗೆ ಇರುವ ಸೌಕರ್ಯಗಳನ್ನು ಸುಧಾರಿಸುವ ಬಗೆಗೆ ಪ್ರಾಮುಖ್ಯ ನೀಡಲು ನಿರ್ಧರಿಸಿರುವುದಾಗಿ ಹೇಳಿದ್ದಾರೆ. ಇದರಿಂದ ಕೆಲವು ವ್ಯಕ್ತಿಗಳಿಗೆ ಮಾತ್ರ ಅನುಕೂಲವಾಗುವುದು. ಇದರಿಂದ ಹೆಚ್ಚಾಗಿ ನಮ್ಮ ನಾಡಿನ ಕಲ್ಯಾಣವಾಗುವುದಿಲ್ಲ, ನಾಡಿನ ಸಂಸ್ಕೃತಿಯಾಗಲಿ ಅಥವಾ ಕನ್ನಡಿಗರ ಬೆಳವಣಿಗೆಗೆ ಸಹಾಯವಾಗಲಿ ಆಗಲು ಹೆಚ್ಚು ಅವಕಾಶವಾಗುವುದಿಲ್ಲ. ಈಗಾಗಲೆ ಮೂರುಪ್ಲಾನ್ ಮುಗಿದುವು. ಇದುವರೆಗೂ ಕೂಡ ಅತ್ಯವಶ್ಯಕವಾಗಿ ಬೇಕಾದ ಸೌಕರ್ಯಗಳು ಜನತೆಗೆ ಒದಗಿಲ್ಲ. ಇದಿನ್ನು ಯೋಚಿಸಬೇಕಾಗಿದೆ. ಈಗ ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿ ವರ್ಷೇವರ್ಷೇ ಹೆಚ್ಚುಹೆಚ್ಚಾಗಿ ಖರ್ಚುಮಾಡುತ್ತಿದ್ದಾರೆ. ಅನೇಕ ಸಲ ಹೇಳಿದಂತೆ ನಮ್ಮ ದೇಶದಲ್ಲಿ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ, ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿದೆ, ಹಣ ಒಂದಕ್ಕೆ ಎರಡರಷ್ಟು ಖರ್ಚಾಗುತ್ತಿದೆ. ಅದರಿಂದ ಪ್ರಯೋಜನ ಎಷ್ಟರಮಟ್ಟಿಗೆ ಆಗಿದೆ, ದೇಶಕ್ಕೆ ಅನುಕೂಲವೇನಾಗಿದೆ ಎಂದು ದೀರ್ಘವಾಗಿ ಯೋಚನೆಮಾಡಬೇಕಾಗಿದೆ. ಎಷ್ಟೇ ಪ್ರಯತ್ನ ಪಟ್ಟರೂ ಕೂಡ ವಿದ್ಯಾರ್ಥಿಗಳಲ್ಲಿರುವ ಅನ್‌ರೆಸ್ಟ್ ಹೋಗಿಲ್ಲ, ಪರೀಕ್ಷೆಗಳಲ್ಲಿ ತೇರ್ಗಡೆಯಾದ ಮೇಲೆ ಮುಂದೆ ಕೆಲಸ

ದೊರೆಯದೆ ಮಾಡುವುದಕ್ಕೆ ಕೆಲಸವಿಲ್ಲದೆ ಕೆಲವರು ನಕ್ಸಲೈಟ್ಸ್ ಆಗುವರು ಕೆಲವರು ರೈಲು ಮುಂತಾದವುಗಳ ಕೆಳಗೆ ಬಿದ್ದು ಆತ್ಮಹತ್ಯಮಾಡಿಕೊಳ್ಳುವರು. ಇಂಥ ಪರಿಸ್ಥಿತಿಯಿದೆ. ಅದುದರಿಂದ ಸುಮ್ಮನೆ ವಿದ್ಯಾಭ್ಯಾಸಕ್ಕೆ ಹಣ ಖರ್ಚು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಅವರು ಕಲತ ಮೇಲೆ ಸಾಕಾದಷ್ಟು ಉತ್ತೇಜನ ದೊರೆಯಬೇಕು, ಅವರು ಜೀವನ ನಡೆಸುವುದಕ್ಕೆ ಸಹಾಯವಾಗಬೇಕು. ಹಾಗಾಗದಿದ್ದರೆ ಸರಕಾರ ಕೋಟಿಗಟ್ಟಲೆ ಹಣ ಖರ್ಚುಮಾಡಿ ಪ್ರಯೋಜನ ವೇನು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಈಗ ನಮ್ಮಲ್ಲಿ ಕನ್ನಡ ರಾಜ್ಯೋತ್ಸವ ವರ್ಷೇವರ್ಷೇ ನಡೆಯುತ್ತಿದೆ. ಕನ್ನಡ ರಾಜ್ಯನಿರ್ಮಾಣ ವಾಗಿ ಅನೇಕ ವರ್ಷವಾಯ್ತು, 16-17 ವರ್ಷವಾದರೂ ಕೂಡ ಇನ್ನೂ ಕನ್ನಡ ಆಡಳಿತಭಾಷೆಯಾಗಿಲ್ಲ. ನಾನು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕಾದರೆ ಕನ್ನಡ ಆಡಳಿತ ಭಾಷೆ ಆಗಬೇಕಾದರೆ ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಕಲಿಯಲು ಸಾಕಾದಷ್ಟು ಉತ್ತೇಜನಕೊಡಬೇಕು. ಈಗ ಅದನ್ನು ಕಲಿಯಲು ಸಾಕಷ್ಟು ಉತ್ತೇಜನ ಕೊಟ್ಟಿಲ್ಲ. ಈಗ ಅನುಕೂಲ ಮಾಡಿಕೊಡುವುದಾಗಿ ಹೇಳಿದ್ದಾರೆ. ಈ ಸಂಬಂಧದಲ್ಲಿ ನನ್ನ ಸಲಹೆ ಇಷ್ಟು. ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಕಲಿಯುವವರಿಗೆ ವಿದ್ಯಾರ್ಥಿವೇತನ ಕೊಡಬೇಕು ಮತ್ತು ಫ್ರೀಷಿಪ್ ಕೊಡಬೇಕು, ಇದು ಅತ್ಯಗತ್ಯ. ಮತ್ತು ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರುವವರೆಗೆ ಸ್ಪೆಷಲ್ ಇನ್‌ಸೆಂಟಿವ್ ಅಲೋಯನ್ಸ್ ಕೊಡಬೇಕಾದ್ದು ಅವಶ್ಯಕ. ಮೈಸೂರು ರಾಜ್ಯದಲ್ಲಿ ಸುಮಾರು 400 ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳಿವೆ, ಸುಮಾರು 60-70 ಸಾವಿರ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಲ್ಲಿ ಅಭ್ಯಾಸಮಾಡುತ್ತಿದ್ದಾರೆ. ವಿದ್ಯಾಭ್ಯಾಸದ ಬಾಬಿಗೆ ಸುಮಾರು 53-54 ಕೋಟಿ ರೂಪಾಯಿ ಖರ್ಚುಮಾಡಿದರೂ ಕೂಡ ಕಾಮರ್ಸ್ ಎಜುಕೇಷನ್ನಿಗೆ 50 ನೂರು ರೂಪಾಯಿ ಕೂಡ ಖರ್ಚು ಮಾಡುತ್ತಿಲ್ಲ. ಖಾಸಗಿ ಇನ್‌ಸ್ಟಿಟ್ಯುಟುಗಳು ಸುಮಾರು ಸೇಕಡ 99 ರಷ್ಟಿವೆ, ಯಾವ ಇನ್‌ಸ್ಟಿಟ್ಯೂಟುಗಳಿಗೂ ಕೂಡ ಯಾವ ವಿಧವಾದ ಗ್ರಾಂಟೂ ಇಲ್ಲ. ಮತ್ತು ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಹೇಳಿಕೊಡಲು ಅನುಕೂಲವಾಗುವಂತೆ ಎಲ್ಲರೂ ಕನ್ನಡ ಟೈಪ್‌ರೈಟರುಗಳನ್ನು ತೆಗೆದುಕೊಳ್ಳಬೇಕಾಗಿದೆ. ಈಗ ಇನ್‌ಸ್ಟಿಟ್ಯೂಟುಗಳವರು ಇಂಗ್ಲೀಷ್ ಟೈಪ್‌ರೈಟರುಗಳಿಗೆ ಸಾವಿರಾರು ರೂಪಾಯಿಗಳನ್ನು ಸುರಿದು ತೆಗೆದುಕೊಂಡಿರುತ್ತಾರೆ. ಅವನ್ನು ಕನ್ನಡಕ್ಕೆ ಬದಲಾಯಿಸಬೇಕಾದರೆ, ಹೊಸದನ್ನು ಕೊಳ್ಳಬೇಕಾದರೆ ಕಷ್ಟವಾಗಿದೆ. ಆದುದರಿಂದ ಇನ್‌ಸ್ಟಿಟ್ಯೂಟುಗಳವರೆಗೆ ಉತ್ತೇಜನ ಕೊಡಲು ಸಾಲದ ರೂಪದಲ್ಲಿ ಅಥವಾ ಸಬ್ಸಿಡಿ ರೂಪದಲ್ಲಿ ಸ್ವಲ್ಪ ಹಣ ಕೊಡಬೇಕು. ಫೀಜಿನ ರಿಯಾಯಿತಿ ತೋರಿಸಬೇಕು. ಹೀಗೆ ಮಾಡಿದರೆ ವಿದ್ಯಾರ್ಥಿಗಳು ಮುಂದೆ ಬಂದು ಕಲಿಯಲು ಅನುಕೂಲವಾಗುವುದು ಮತ್ತು ಆಫೀಸುಗಳಲ್ಲಿ ಕನ್ನಡದಲ್ಲಿ ಆಡಳಿತ ನಡೆಸಲೂ ಅವಕಾಶವಾಗುವುದು. ಆದ್ದರಿಂದ ಬೇರೆ ವಿದ್ಯಾಭ್ಯಾಸಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವಾಗ ಕಾಮರ್ಸ್ ವಿದ್ಯಾಭ್ಯಾಸಕ್ಕೆ ಕೂಡ ಕೆಲವು ಸಾವಿರ ರೂಪಾಯಿ ಖರ್ಚುಮಾಡುವುದು ಅವಶ್ಯಕ, ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸರ್ಕಾರದವರು ಜನರ ವಿಶ್ವಾಸವನ್ನು ಗಳಿಸಬೇಕೆಂದು ಅನೇಕ ಮಾರ್ಗಗಳನ್ನು ಅನುಸರಿಸಿದ್ದಾರೆ, ಚುನಾವಣೆ ಸಮಯದಲ್ಲಿ ಈ ಕೆಲಸ ನಡೆದಿದೆ. ಎಷ್ಟೋ ಜನರಿಗೆ ಬೇಕಾದಷ್ಟು ಈ ಸಮಯದಲ್ಲಿ ಅನುಕೂಲ ಕಲ್ಪಿಸಿರುವುದು ಒಂದು ವಿಧವಾದ ಬೇಸರ ಉಂಟುಮಾಡಿದೆ. ಕಾರ್ಪೋರೇಷನ್ ಚುನಾವಣೆಯಲ್ಲಿ ನಾಲ್ಕು ವರ್ಷದಿಂದ ಜನತೆಗೆ ಸಾಕಷ್ಟು ಅನುಕೂಲ ಮಾಡಿಕೊಡದೆ ಇದ್ದುದರಿಂದ ಜನರು ಸರಕಾರಿ ಪಕ್ಷದವರಿಗೆ ಓಟು ಮಾಡಲಿಲ್ಲ. ಲೋಕಸಭೆ ಚುನಾವಣೆ ಸಮಯದಲ್ಲಿ ಅನುಕೂಲ ಮಾಡಿದರೂ ಜನರು ಓಟು ಕೊಡಲಿಲ್ಲ. ಜಮೀನು ಕಂದಾಯವನ್ನು ಕಿತ್ತು ಹಾಕಿದಿರಿ, ಎನ್.ಜಿ.ಓ. ಗಳಿಗೆ ಅನುಕೂಲ ಮಾಡಿದಿರಿ. ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಬೇಕಾದಷ್ಟು ಪ್ರಯತ್ನ ಮಾಡಿದಿರಿ. ಆದರೂ ಕೂಡ ಜನರು ಓಟು ಮಾಡಲಿಲ್ಲ, ಇದಕ್ಕೆ ಕಾರಣವೇನು ಎಂದು ಯೋಚನೆ ಮಾಡಬೇಕು. ಸರ್ಕಾರಿ ನೌಕರರಿಗೆ ಮತ್ತು ಕಾರ್ಮಿಕರಿಗೆ ಸಂಬಳ ಮತ್ತು ಭತ್ಯಗಳು ಜಾಸ್ತಿ ಮಾಡಿರಬಹುದು. ಆದರೆ ಅವರು ಸೇಕಡ 25 ಭಾಗವಿರಬಹುದು, ಉಳಿದ ಸೇಕಡ 75 ಭಾಗದ ಜನತೆಗೆ ಯಾವ ವಿಧವಾದ ಅನುಕೂಲವೂ ಆಗಿಲ್ಲ. ಅವರ ಆದಾಯ ಹೆಚ್ಚಾಗದೆ ಅವರು ಕಷ್ಟಪಡುತ್ತಿದ್ದಾರೆ. ಬೆಲೆಗಳು ಒಂದಕ್ಕೆ ನಾಲ್ಕರಷ್ಟು ಏರಿರುವಾಗ ಜೀವನಮಾಡುವುದೇ ಕಷ್ಟವಾಗಿರುವಾಗ ಕೇವಲ ಕಾಲು ಭಾಗ ಜನರಿಗೆ ಸಹಾಯ ಮಾಡಿದರೆ ಉಳಿದ ಮುಕ್ಕಾಲು ಭಾಗದವರೇನು ಮಾಡಬೇಕು ? ಇದು ಶೋಚನೀಯ ವಿಚಾರ. ಅವರು ಕೇವಲ ಒಂದು ಹೊತ್ತು ಊಟ ಮಾಡುವರು, ಹೊಟ್ಟೆಬಟ್ಟೆಗೆ ಅನೇಕರಿಗಿಲ್ಲ. ಜನ ಅನೇಕ ಕಷ್ಟಗಳನು ಅನುಭವಿಸುತ್ತಿದ್ದಾರೆ. ಆ ಕಷ್ಟದಿಂದ ಜನರು ರೋಸಿಹೋಗಿ ಯಾವುದಾದರೂ ಬದಲಾವಣೆ ಯಾದರೆ ಸಾಕು ಎನ್ನುವ ಜಿಗುಪ್ಸೆ ಜನರಲ್ಲಿ ಬಂದಿರುವುದೇ ಈ ಚುನಾವಣೆಗಳಲ್ಲಿ ನಿಮ್ಮ ಪಕ್ಷವನ್ನು ಚುನಾಯಿಸದೆ ಇರುವುದಕ್ಕೆ

(ಶ್ರೀ ಟಿ. ಆರ್. ಶಾಮಣ್ಣ)

ಕಾರಣವೆಂದು ಹೇಳಿದರೆ ತಪ್ಪು ತಿಳಿಯುವುದಿಲ್ಲವೆಂದು ಭಾವಿಸುತ್ತೇನೆ. ಯಾವುದೋ ಗುಂಪಿಗೆ ಸಹಾಯ ಮಾಡುವುದಕ್ಕಿಂತ ಜನಸಾಮಾನ್ಯರಿಗೆ ಹೆಚ್ಚಾಗಿ ಅನುಕೂಲವಾಗುವ ಹಾಗೆ ಅವರೆ ಜನರನ್ನು ಒಲಿಸಿಕೊಳ್ಳುವುದಕ್ಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರ ಚೆನ್ನಾಗಿ ನಡೆಯಬೇಕು, ಅಡ್ಮಿನಿಸ್ಟ್ರೇಷನ್ ಸ್ಟ್ರೀಂಲೈಸ್ ಮಾಡಬೇಕು ಎಂದು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಸಂಬಳ ಸಾರಿಗೆ ಖರ್ಚುಗಳು ದಿನೇ ದಿನೇ ಏರುತ್ತಿವೆ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಆರು ವರ್ಷದ ಕೆಳಗೆ 87 ಲಕ್ಷ ರೂಪಾಯಿ ಸಿಬ್ಬಂದಿ ಖರ್ಚು ಇದ್ದುದು ಈ ಹೊತ್ತು ಸರ್ಕಾರ ಕೊಟ್ಟಿರತಕ್ಕ ಹೆಚ್ಚುವರಿ ಸಂಬಳ ಸಾರಿಗೆಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ 2 ಕೋಟಿ 20 ಲಕ್ಷ ರೂಪಾಯಿ ಆಗುತ್ತದೆ, ಐದು ವರ್ಷದಲ್ಲಿ ಇಷ್ಟು ಹೆಚ್ಚಾಗಬೇಕಾದರೆ ಸಿಬ್ಬಂದಿ ಖರ್ಚನ್ನು ಈ ರೀತಿಯಾಗಿ ಏರಿಸಿಕೊಂಡು ಹೋಗಿರುವುದರಿಂದ ಅನೇಕ ಇಲಾಖೆಗಳಲ್ಲಿ ಸಂಬಳವನ್ನು ಕೊಟ್ಟು ಇಲಾಖೆಯನ್ನು ನಡೆಸುವುದಕ್ಕೆ ಬೇಕಾದ ವ್ಯವಸ್ಥೆಯೇ ಇಲ್ಲದೆ ಅವೇಕರು ದಂಡದ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಯಾರು ಕೆಲಸ ಮಾಡುತ್ತಿದ್ದಾರೆ, ಯಾರು ಕೆಲಸ ಮಾಡುತ್ತಿಲ್ಲ, ಆ ಇಲಾಖೆಯಲ್ಲಿ ಅಷ್ಟು ಸಿಬ್ಬಂದಿಯ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವುದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಇಲ್ಲದೆ ಹೋದರೆ ನೀವು ಖರ್ಚು ಮಾಡುತ್ತಿರುವ ಸಿಬ್ಬಂದಿ ನಿಮ್ಮನ್ನು ತಿನ್ನತಕ್ಕ ಸಂದರ್ಭ ಬರುತ್ತದೆ ಎಂದು ನನ್ನ ಅಭಿಪ್ರಾಯ ಅಡ್ಮಿನಿಸ್ಟ್ರೇಷನ್ ಸ್ಟ್ರೀಂಲೈನ್ ಮಾಡುವುದಕ್ಕೆ ಯಾವ ಯಾವ ಇಲಾಖೆಬೇಕು, ಯಾವ ಯಾವ ಇಲಾಖೆಯಲ್ಲಿ ಎಷ್ಟು ಕೆಲಸ ನಡೆಯಬೇಕು, ಯಾವುದನ್ನು ಸರಿಪಡಿಸಬೇಕು ಎನ್ನುವುದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ.

ಬೆಂಗಳೂರಿನ ಬಗ್ಗೆ ಹೇಳಬೇಕಾದರೆ ಅನೇಕ ಸಂದರ್ಭಗಳಲ್ಲಿ ಸರ್ಕಾರದಿಂದ ಪ್ರಯೋಜನವಾಗುತ್ತಿಲ್ಲ. ಬೆಂಗಳೂರು ನಗರದಲ್ಲಿ ಹೆಚ್ಚು ತೆರಿಗೆ ವಸೂಲಾಗುತ್ತಿದೆ. ಬೆಂಗಳೂರು ನಗರದ ಬಗ್ಗೆ, ಹೊರಗಿನಿಂದ ಬರುವವರು ಒಳ್ಳೆಯ ಮಾತನ್ನಾಡುತ್ತಾರೆ, ಬೆಂಗಳೂರು ಒಂದು ಸ್ವರ್ಗವೆಂದು ಹೇಳುತ್ತಾರೆ. ಸರ್ಕಾರದಿಂದ ಬೆಂಗಳೂರು ನಗರಕ್ಕೆ ಪ್ರಯೋಜನವಾಗುತ್ತಿಲ್ಲವೆಂದರೆ ಬೇರೆ ಭಾಗಗಳಿಂದ ಬರುವವರು ತಪ್ಪು ತಿಳಿದುಕೊಳ್ಳಬಾರದು. ಇಲ್ಲಿಯ ಟಾರ್ ರಸ್ತೆ, ಅಲಂಕಾರದ ದೀಪಗಳು, ಇವುಗಳನ್ನು ನೋಡಿದರೆ ಬೇಕಾದಂಥ ಸೌಲಭ್ಯಗಳು ಇದ್ದ ಹಾಗೆ ಕಾಣುತ್ತದೆ. ಆದರೆ ಹೆಚ್ಚು ಜನ, ಸೇಕಡ 90 ಭಾಗದ ಜನ ಕಷ್ಟಪಡುತ್ತಿರುವ ಸ್ಥಿತಿ ಇದೆ. ಕಾವೇರಿ ನೀರನ್ನು ತರಬೇಕೆಂದು ಒಂದು ಯೋಜನೆ ಇದೆ. ಇಷ್ಟು ಹೊತ್ತಿಗೆ ನೀರು ಬರಬೇಕಾಗಿತ್ತು. ನಾನಾ ಕಾರಣಗಳಿಂದ ಬರಲಿಲ್ಲ. ಈಗಿನ ಬೋರ್ಡ್ ಆಡಳಿತ ನೀರಿನ ದರ ಸಾವಿರ ಗ್ಯಾಲನ್ನಿಗೆ ನಾಲ್ಕು ರೂಪಾಯಿ ಆಗುತ್ತದೆ ಎಂದು ಹೇಳುತ್ತಾರೆ. ಬೆಂಗಳೂರಿನ ಜನ ನೀರು ಕುಡಿಯುವ ಬದಲು ಬೀರ್ ಕುಡಿಯಬೇಕೋ ಏನೋ ? ಸಾವಿರ ಗ್ಯಾಲನ್ನಿಗೆ ನಾಲ್ಕು ರೂಪಾಯಿ ಕೊಡುವುದಕ್ಕೆ ಜನ ಎಂದೂ ಒಪ್ಪುವುದಿಲ್ಲ. ನಾಲ್ಕು ರೂಪಾಯಿ ದರ ಆಗದ ಹಾಗೆ, ನೀರಿನ ಸೌಕರ್ಯ ಜನಗಳಿಗೆ ಈಗ ಇರುವ ರೀತಿಯಲ್ಲಿಯೇ ಒದಗಿಸುವುದಕ್ಕೆ ಯಾವುದಾದರೂ ಯೋಜನೆ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಕ್ಟ್ರಾಯಿ ತೆಗೆದು ಹಾಕಬೇಕೆಂದು ಅರ್ಥ ಸಚಿವರು ಹೇಳಿದ್ದಾರೆ. ಅಕ್ಟ್ರಾಯಿ ತೆಗೆದು ಹಾಕಬೇಕು ಎನ್ನುವುದನ್ನು ನಾನು ಕೂಡ ಒಪ್ಪುತ್ತೇನೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಸಾಗಾಣಿಕೆಯಲ್ಲಿ ತೊಂದರೆಗಳಿವೆ, ವರ್ತಕರು ತೆರಿಗೆ ಕೊಡುವುದಕ್ಕೆ ಸಿದ್ಧವಾಗಿದ್ದರೂ ಅಲ್ಲಿರತಕ್ಕ ಕಿರುಕುಳ, ಲಂಚಕೋರತನದಿಂದ ಬಹಳ ಕಷ್ಟ ಪಡುತ್ತಿದ್ದಾರೆ. ಈ ಬಗ್ಗೆ ನನಗೆ ಚೆನ್ನಾಗಿ ಅರಿವಿದೆ. ನಗರಾಡಳಿತದಲ್ಲಿ ಸ್ವಲ್ಪ ನನಗೆ ಅನುಭವ ಇರುವುದರಿಂದ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಕಾರ್ಪೊರೇಷನ್ನಿಗೆ ಬರುತ್ತಿರುವ 6 ಕೋಟಿ ರೂಪಾಯಿ ವರಮಾನದಲ್ಲಿ 2 ಕೋಟಿ 20 ಲಕ್ಷ ರೂಪಾಯಿ ಅಕ್ಟ್ರಾಯಿನಿಂದ ಬರುತ್ತದೆ. ಎಂದರೆ ಕಾರ್ಪೊರೇಷನ್ ವರಮಾನದಲ್ಲಿ ಮೂರನೇ ಒಂದು ಭಾಗದಷ್ಟು ಇದರಿಂದ ಬರುತ್ತಿದೆ. 10 ವರ್ಷದ ಕೆಳಗೆ 60 ಲಕ್ಷ ರೂಪಾಯಿ ಇದ್ದುದು ಈಗ 2 ಕೋಟಿ 20 ಲಕ್ಷ ರೂಪಾಯಿ ವರಮಾನ ಅಕ್ಟ್ರಾಯಿನಿಂದ ಬರುತ್ತಿದೆ. ಪ್ರೊಗ್ರೆಸಿವ್ ಆಗಿ ಹೆಚ್ಚಾಗುತ್ತಿದೆ. ಈಗ ಅರ್ಥ ಸಚಿವರು ಹೇಳುವಂತೆ ಅಕ್ಟ್ರಾಯಿ ರದ್ದುಪಡಿಸಿದರೆ ಆಡ್‌ಹಾಕ್ ಕಾಂಪೆನ್‌ಸೇಷನ್ ಕೊಟ್ಟರೆ ಸ್ಥಳೀಯ ಸಂಸ್ಥೆಗಳಿಗೆ ಬಹಳ ಕಷ್ಟವಾಗುತ್ತದೆ, ಅದರಲ್ಲಿಯೂ ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಬಹಳ ಕಷ್ಟವಾಗುತ್ತದೆ. ಯಾವಾಗಲೂ ಪ್ರೊಗ್ರೆಸಿವ್ ಆಗಿರತಕ್ಕ ಕಾಂಪೆನ್‌ಸೇಷನ್ ಕೊಡಬೇಕು. 1956ನೇ ಇಸವಿಯಲ್ಲಿ ಮೋಟಾರು ವಾಹನಗಳ ಮೇಲಿನ ಟೋಲ್ ಟಾಕ್ಸ್ ತೆಗೆದಾಗ ಬೆಂಗಳೂರು ನಗರ ಸಭೆಗೆ ಕಾಂಪೆನ್‌ಸೇಷನ್

ಎಂದು 4,56,000 ರೂಪಾಯಿ ಕೊಡುವುದು ಎಂದು ಗೊತ್ತು ಮಾಡಿದರು. ಆವಾಗ ಗೊತ್ತು ಮಾಡಿದ್ದು 1971ನೇ ಇಸವಿಯಲ್ಲಿ ಕೂಡ ಅದೇ ಗ್ರಾಂಟ್ ಕೊಡುತ್ತಿದ್ದಾರೆ. ಆದ್ದರಿಂದ ಅಡ್‌ಹಾಕ್ ಗ್ರಾಂಟ್ ಗೊತ್ತು ಮಾಡಿದರೆ ಕಾರ್ಪೊರೇಷನ್ ಆಡಳಿತ ನಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ, ಅನೇಕ ಸ್ಥಳೀಯ ಸಂಸ್ಥೆಗಳಿಗೆ ಬಹಳ ತೊಂದರೆಯಾಗುತ್ತದೆ. ಆಕ್ಟ್ರಾಯಿ ತೆಗೆಯುವುದರ ಬಗ್ಗೆ ವಿರೋಧವಿಲ್ಲದೆ ಇದ್ದರೂ, ಅದನ್ನು ತೆಗೆಯುವುದಕ್ಕೆ ಮುಂಚೆ ಸರ್ಕಾರ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಕಾರ್ಪೊರೇಷನ್ನಿನ ಸಂಪನ್ಮೂಲಗಳನ್ನು ಯಾವ ರೀತಿಯಲ್ಲಿ ಸರಿಪಡಿಸಬೇಕು ಎನ್ನುವುದರ ಬಗ್ಗೆ ದಯವಿಟ್ಟು ಯೋಚನೆ ಮಾಡಿ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳ ಭರವಸೆ ಬಹಳ ಆಶಾದಾಯಕವಾಗಿದ್ದು, ಸ್ವಾಗತಾರ್ಹವಾಗಿದ್ದರೂ ಕೂಡ ಅದನ್ನು ಜಾರಿಗೆ ತರುವುದಕ್ಕೆ ಮುಂಚೆ ಅದಕ್ಕೆ ಸಂಬಂಧಪಟ್ಟಂಥ ಎಲ್ಲ ಆಗು ಹೋಗುಗಳನ್ನೂ ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೆ ಸ್ಥಳೀಯ ಸಂಸ್ಥೆಗಳಿಗೂ ಒಂದು ಅವಕಾಶವನ್ನು ಕೊಟ್ಟು ಅವರಿಂದ ಇದರ ಬಗ್ಗೆ ಅನುಕೂಲ ಪ್ರತಿಕೂಲಗಳೇನು ಎನ್ನುವುದನ್ನು ತಿಳಿದುಕೊಂಡು ತೀರ್ಮಾನ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ.

ಕೈಗಾರಿಕೆಗಳು ಬೆಳೆಯುತ್ತಿವೆ, ಆಹಾರ ಮತ್ತು ಸಂಪನ್ಮೂಲಗಳು ಇಳಿಯುತ್ತಿವೆ, ಅನೇಕ ವಿಧವಲ್ಲಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. 1964—65ರಲ್ಲಿ ರಾಜ್ಯದ ಖರ್ಚು 108 ಕೋಟಿ ರೂಪಾಯಿ ಇದ್ದುದನ್ನು 1971—72ರಲ್ಲಿ 276 ಕೋಟಿ ರೂಪಾಯಿ ಆಗಿದೆ ಎಂದು ಹೇಳುತ್ತಿದ್ದಾರೆ. ಹಳೇ ಮೈಸೂರಿನಲ್ಲಿ ಆರು ಕೋಟಿ ಅಥವಾ ಹತ್ತು ಕೋಟಿ ರೂಪಾಯಿ ವರಮಾನವಿದ್ದಾಗ ಜನ ಎಷ್ಟು ಸುಖವಾಗಿದ್ದರು ಎನ್ನುವುದನ್ನು ನಾನು ನೋಡಿದ್ದೇನೆ. 1932--33ರಲ್ಲಿ ನನ್ನ ವರಮಾನ 50 ರೂಪಾಯಿ ಇತ್ತು. ಈಗ ನನ್ನ ವರಮಾನ 26 ಸಾವಿರ ರೂಪಾಯಿ ಆಗಿದ್ದರು ಕೂಡ ನಾನು 50 ರೂಪಾಯಿ ವರಮಾನ ಬರುವಾಗ ಇದ್ದಷ್ಟು ಸುಖವಾಗಿ ಈಗ ಇಲ್ಲ ಎಂದು ಹೇಳಬೇಕಾಗುತ್ತದೆ. ಹಣದ ಖರ್ಚು ಹೆಚ್ಚಾಗಿದೆಯೇ ಹೊರತು ಜನರ ಸೌಲಭ್ಯ, ಶಾಂತಿ ಕಾಣಿಸದೆ ಇರುವುದು ಬಹಳ ಶೋಚನೀಯವಾದ ವಿಚಾರ, ರಾಜಕೀಯದಲ್ಲಿ ಅಥವಾ ಯಾವುದಾದರೂ ಸ್ವಾರ್ಥತೆ ಮತ್ತು ಸ್ಥಾನಮಾನಗಳ ಪೈಪೋಟಿ, ರಾಜಕೀಯ ಚದುರಂಗದಿಂದ ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ ಎಂದು ಹೇಳಿದರೆ ನಾನು ಟೀಕಿಸುತ್ತಿದ್ದೇನೆಂದು ಭಾವಿಸಬಾರದು. ಜನಸಾಮಾನ್ಯರು ಪ್ರತಿದಿನವೂ ಪಡುತ್ತಿರುವ ಕಷ್ಟವನ್ನು ನೋಡಿದರೆ ಗೊತ್ತಾಗುತ್ತದೆ. ಕಂದಾಯ ವಸೂಲು ಮಾಡುವುದಕ್ಕಾಗಲೀ, ತೆರಿಗೆಗಳನ್ನು ವಸೂಲು ಮಾಡುವುದಕ್ಕಾಗಲೀ ಯಾವುದೂ ಅಡ್ಡಿ, ಅಡಚಣೆಗಳು ಇರುವುದಿಲ್ಲ. ಸರ್ಕಾರ ಮಾಡತಕ್ಕ ಖರ್ಚಿನ ಪ್ರಭಾವದಿಂದ ಜನಗಳಿಗೆ ಎಷ್ಟು ಸೌಲಭ್ಯವಾಗಿದೆ ಎನ್ನುವುದರ ಬಗ್ಗೆ ನಾವು ಯೋಚಿಸಬೇಕಾಗಿದೆ. ರಾಜಕಾರಣಿಗಳಾಗಿ ನಾವು ದೀರ್ಘವಾಗಿ ಆಲೋಚನೆ ಮಾಡಬೇಕಾದ ಪರಿಸ್ಥಿತಿ ನಮ್ಮ ಮುಂದೆ ಇದೆ. ಜನಸಾಮಾನ್ಯರು ಬಹಳ ಬೇಸತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಅವರಿಗಿರುವ ಬಹಳ ಕಷ್ಟ ಪರಿಸ್ಥಿತಿ. ಅದನ್ನು ಬಗೆಹರಿಸುವುದರ ಬಗ್ಗೆ ನಮ್ಮ ಘೋಷಣೆಗಳನ್ನು ಮರೆತು ಜನಗಳಿಗೆ ಬೇಕಾಗಿರುವ ನಿಜವಾದ ಸೌಲಭ್ಯಗಳ ಕಡೆಗೆ ಗಮನ ಕೊಡಬೇಕಾದ ಪರಿಸ್ಥಿತಿ ಬರುತ್ತಿದೆ. ಮುಂದಿನ ಪೀಳಿಗೆ ನಮ್ಮನ್ನು ದೂಷಿಸದ ಹಾಗೆ ನಮ್ಮ ಎದೆಯನ್ನು ನಾವು ಮುಟ್ಟಿ ನೋಡಿಕೊಂಡು ನಾವು ಎಷ್ಟರ ಮಟ್ಟಿಗೆ ಜನರಿಗೆ ಅನುಕೂಲವಾಗುವ ಕೆಲಸಗಳನ್ನು ಮಾಡಬೇಕು, ಅದಕ್ಕೆ ನಮ್ಮ ಕರ್ತವ್ಯವೇನು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಆದುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಾವು ಯೋಚನೆ ಮಾಡಬೇಕಾದಂಥಾದ್ದು ರಾಜಕೀಯದ ಗೊಂದಲವನ್ನು ಮರೆತು ಜನಸಾಮಾನ್ಯರ ಹಿತದೃಷ್ಟಿ ಕಡೆಗೆ ನಿಮ್ಮ ಗಮನವನ್ನು ಹರಿಸಬೇಕು. ಕೇಂದ್ರ ಸರ್ಕಾರದ ಮೇಲೆ ನೀವು ತಪ್ಪು ಹಾಕುವುದು ಕೇಂದ್ರ ಸರ್ಕಾರದವರು ನಿಮ್ಮ ಮೇಲೆ ತಪ್ಪು ಹಾಕುವುದು, ಎಲ್ಲವನ್ನೂ ಬಿಟ್ಟು ದೇಶದ ಹಿತದೃಷ್ಟಿಯಿಂದ, ಜನಸಾಮಾನ್ಯರಿಗೆ ಅನುಕೂಲವಾಗುವಂಥ ಕೆಲಸವನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡಬೇಕು ಎಂದು ಹೇಳುತ್ತೇನೆ. ನಾನು ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅಧ್ಯಕ್ಷರು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

5-00 P. M.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷರೇ, ಈ ಹೊಸ ತೆರಿಗೆಗಳಿಲ್ಲದ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಕ್ಕೆ ಮಾನ್ಯ ಸಚಿವರನ್ನು ವಂದಿಸುತ್ತೇನೆ.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಆದರೆ ಈ ಆಯವ್ಯಯದ ಪಟ್ಟಿ ಅಷ್ಟು ಪ್ರಗತಿದಾಯಕವಾಗಿದೆ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಪ್ರತಿ ಅಧಿವೇಶನದಲ್ಲೂ ಕೂಡ ಈ ಅಭಾವದ ಪರಿಸ್ಥಿತಿ ಬಗ್ಗೆ ಕಾಮಗಾರಿ ಕೆಲಸಗಳು ಆಗಬೇಕು ಎನ್ನುವ ಕೂಗು ಕೇಳಿ ಬರುತ್ತಾ ಇದೆ. ಆದುದರಿಂದ ನಾನೂ ಸಹ ಪದೇ ಪದೇ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇವಕ್ಕೆ ಪ್ರಕೃತಿಯ ವ್ಯತ್ಯಾಸವೂ ಒಂದು ಕಾರಣ. ಈ ರೀತಿ ಅಭಾವ ಪರಿಸ್ಥಿತಿಯಿಂದ ದೇಶದಲ್ಲಿ ಜನರಿಗೆ ತೊಂದರೆ ಆಗಿದೆ, ನೆಮ್ಮದಿ ಇಲ್ಲ, ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಮಾಡಬೇಕು ಎಂದು ಪದೇ ಪದೇ ಹೇಳುತ್ತಿದ್ದೇನೆ. ಆದರೂ ಸಹ ಸರ್ಕಾರ ಅದರ ಬಗ್ಗೆ ಸರಿಯಾದ ಗಮನ ಹರಿಸಲಿಲ್ಲ. ವಾಸ್ತವಿಕವಾಗಿ ಜನರ ಕಷ್ಟ ಏನು ಇದೆ, ಅದನ್ನು ಬಗೆಹರಿಸಬೇಕಾದರೆ ಏನು ಮಾಡಬೇಕು ಎನ್ನುವುವರ ಬಗ್ಗೆ ಸರ್ಕಾರದ ಗಮನ ಹರಿದಿಲ್ಲ. ಆದರೆ ನನ್ನ ಮನಸ್ಸಿಗೆ ಹೀಗೆ ಅನಿಸುತ್ತದೆ. ಅಭಾವ ಪ್ರಾಪ್ತವಾಗುವುದು ಪ್ರಕೃತಿಯ ವ್ಯತ್ಯಾಸದಿಂದ. ಆದನ್ನು ಯಾವ ಸರ್ಕಾರವೇ ಬರಲಿ ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಏನಾದರೂ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಮುಖ್ಯವಾಗಿ ಹಳ್ಳಿಗಳಲ್ಲಿರತಕ್ಕಂಥ ಜನಗಳಿಗೆ ಕೃಷಿಯೇ ಮೂಲ ಕಸಬು. ಅದಕ್ಕೆ ಪ್ರತಿರೂಪವಾಗಿ ಬೇರೆ ಇನ್ನೊಂದು ಉಪಕಸಬನ್ನು ಒದಗಿಸಬೇಕು. ಮಳೆ ಬಿದ್ದಾಗ ವ್ಯವಸಾಯದ ಕೆಲಸವನ್ನು ಮಾಡುವುದರ ಜೊತೆಗೆ ಒಂದು ಉಪಕಸಬು ಇದ್ದರೆ ಅವರಿಗೆ ಮಳೆ ಇಲ್ಲದೇ ಹೋದಾಗ ಆ ಉಪಕಸಬಿನಿಂದ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಅವರು ಜೀವನಕ್ಕೆ ಹಾತೊರೆಯ ಬೇಕಾಗುತ್ತದೆ. ಆದುದರಿಂದ ಈ ಒಂದು ಉಪಕಸಬಿನಿಂದ ಅವರ ಜೀವನಕ್ಕೆ ಅನುಕೂಲವಾಗುವಂಥ ಒಂದು ಶಕ್ತಿಯನ್ನು ಉಂಟು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಆದುದರಿಂದ ಇದರ ಬಗ್ಗೆ ನಾನು ಹೇಳುವುದಾದರೆ ಈ ವಿಚಾರದಲ್ಲಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಅವರ ಒಂದು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ವಿಷಯದ ಬಗ್ಗೆ ಈ ಆಯವ್ಯಯದ ಪಟ್ಟಿಯಲ್ಲಿ ಏನೂ ಕಾಣದೇ ಇರತಕ್ಕಂಥಾದ್ದು ಬಹಳ ಶೋಚನೀಯವಾದ ಸಂಗತಿ ಎಂದು ಹೇಳುತ್ತೇನೆ. ಈಗಲಾದರೂ ಆಲೋಚನೆ ಮಾಡಿ ಇದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನೊಂದು ಪ್ರಗತಿಪರವಾದ ಹೆಜ್ಜೆಯನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದು ಕಡಿಮೆ ಸಂಖ್ಯೆಯಲ್ಲಿರತಕ್ಕಂಥ ಸರ್ಕಾರಿ ನೌಕರರಿಗೆ ಒಂದು ಸಾರಿ ಅಲ್ಲ, ಎರಡು ಸಾರಿ ಅವರಿಗೆ ಸಂಬಳ ಹೆಚ್ಚಿಗೆ ಮಾಡಿದ್ದು. ಅವರಿಗೆ ಸಂಬಳ ಜಾಸ್ತಿ ಮಾಡಬೇಕು, ಅವರು ಬಡವರೇ, ಅದು ಒಪ್ಪುತ್ತೇನೆ. ಆದರೆ ಶೇಕಡ 25 ಭಾಗ ಇರತಕ್ಕಂಥ ವ್ಯವಸಾಯ ಕಾರ್ಮಿಕರಿಗೆ, ಮತ್ತು ಸಣ್ಣ ಹಿಡುವಳಿದಾರರ ಬಗ್ಗೆ ಸರ್ಕಾರ ಏತಕ್ಕೆ ಅವರ ಕಡೆ ಗಮನ ತೆಗೆದುಕೊಳ್ಳಲಿಲ್ಲ ಎಂದು ನಾನು ಕೇಳುತ್ತೇನೆ. ನನಗಾದರೂ ಅನಿಸುತ್ತದೆ, ಸರ್ಕಾರಕ್ಕೆ ಅರ್ಥವಾಗತಕ್ಕಂಥ ಭಾಷೆ ಇದಲ್ಲ. ಅದು ಯಾವುದು ಎಂದರೆ ಅವರು ಮೆರವಣಿಗೆ ಹೋಗುವುದು, ಮುಷ್ಕರ ಹೂಡುವುದು, ವಾಹನಕ್ಕೆ ಬೆಂಕಿ ಹಚ್ಚುವುದು, ಸರ್ಕಾರದ ಆಸ್ತಿಪಾಸ್ತಿಗಳಿಗೆ ಡ್ಯಾಮೇಜ್ ಮಾಡುವುದು, ಇಂಥಾ ಕೆಲಸ ಮಾಡಿದರೆ ಸರ್ಕಾರ ಕಣ್ಣು ತೆರೆಯುತ್ತದೆ ಇಲ್ಲದೇ ಇದ್ದರೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಹೇಳಿದಂತೆ ಅವನು ನಡೆದುಕೊಂಡು ಹೋಗುತ್ತಾನೆ ಎಂದು ತಿಳಿದು ಉದಾಸೀನವಾಗಿದ್ದೀರಿ. ನಾನು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದೇನೆ. ಅವನು ಹಿಂತಿರುಗಿ ಬಿದ್ದರೆ ಯಾರೂ ತಡೆದುಕೊಳ್ಳುವ ಶಕ್ತಿ ಇಲ್ಲ. ಆದುದರಿಂದ ಆ ಬಡವನ ಕಷ್ಟವನ್ನು ಅರಿತುಕೊಂಡು ಅವನಿಗೆ ಅನುಕೂಲ ಮಾಡಿಕೊಡುವಂಥ ಕೆಲಸವನ್ನು ಮಾಡಿಕೊಡಿ. ಅಂಥಾ ಶಕ್ತಿ ಸರ್ಕಾರಕ್ಕೆ ಇಲ್ಲವೇ ? ಈಗಲಾದರೂ ಕೂಡ ಇದರ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಏರ್ಪಾಡು ಮಾಡಿ ಆ ಬಡವರಿಗೆ ಏನಾದರೂ ಒಂದು ಪರಿಹಾರ ಸಿಗುವಂತೆ, ಒಂದು ಪ್ರಗತಿಪರವಾದ ಹೆಜ್ಜೆಯನ್ನು ಮುಂದಿಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಸಚಿವರು ಭೂಸೇನೆಯನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಯಾರು ಕಂಟ್ರಾಕ್ಟ್‌ದಾರರ ಅಧೀನದಲ್ಲಿ ಕೆಲಸ ಮಾಡುತ್ತಾ ಇದ್ದಾರೋ ಅವರಿಗೆ ಮಾತ್ರ ಇದರಿಂದ ಪ್ರಯೋಜನವಾಗುತ್ತದೆ. ಆದುದರಿಂದ ಭೂಸೇನೆಯಿಂದ ನಿರೀಕ್ಷಿಸಿದಷ್ಟು ಹೆಚ್ಚಿನ ಜನರಿಗೆ ಕೆಲಸವನ್ನು ಒದಗಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಈಗ ರೂರಲ್ ಮ್ಯಾನ್ ಪವರ್‌ನಿಂದ ಬೇಕಾದಷ್ಟು ಕೆಲಸಗಳನ್ನು ತೆಗೆದುಕೊಂಡು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾರೂ ಕೂಲಿಗಳನ್ನು ಖಾಯಂ ಆಗಿ ಇಟ್ಟುಕೊಂಡು ಕೆಲಸ ಮಾಡುವುದಿಲ್ಲ, ಮಾಡಿಸುವುದಕ್ಕೆ ಸಾಧ್ಯವೂ ಇಲ್ಲ. ಅವರಿಗೆ ಸದಾಕಾಲ ಕೂಲಿ ಸಿಕ್ಕುವುದಿಲ್ಲ.

ಅಭಾವ ಪರಿಸ್ಥಿತಿ ಬಂದಾಗ ಮನೆ ಮನೆಗೆ ಹೋಗಿ ಭಿಕ್ಷೆ ಬೇಡುತ್ತಾರೆ, ಉಪವಾಸ ಮಾಡುತ್ತಾರೆ. ಇಂಥಾ ಪರಿಸ್ಥಿತಿ ಎಷ್ಟೋ ದಿವಸದಿಂದ ನಡೆದುಕೊಂಡು ಬರುತಾ್ತ ಇದೆ. ಈಗ ವ್ಯವಸಾಯ ಕಾರ್ಮಿಕರಿಗೆ 2½ ರೂಪಾಯಿ ಕನಿಷ್ಠ ಕೂಲಿ ಮಾಡಿದ್ದೇವೆ ಎಂದರೆ ಅದನ್ನು ಜಾರಿಗೆ ತರಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಮಳೆ ಬರದೇ ಹೋದರೆ ವ್ಯವಸಾಯ ಕೂಲಿಗಾರರಿಗೆ 2 ರೂಪಾಯಿ ಕೊಡಲಿಕ್ಕೂ ಸಾಧ್ಯವಿಲ್ಲ. ಆದುದರಿಂದ ಈ ವಿಷಯದಲ್ಲಿ ಸರ್ಕಾರ ಸಾಕಷ್ಟು ಗಮನ ಹರಿಸಲಿಲ್ಲ ಎಂದು ತಿಳಿಸುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ವರದಿಯನ್ನು ನೋಡಿದರೆ ಇದರಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಈಗ ನಮ್ಮ ಸರ್ಕಾರದ ಆಡಳಿತ ಹೇಗಿದೆ ಎಂದರೆ ತಾಲ್ಲೂಕು ಕಛೇರಿಗೆ ಹೋಗಿ ನೋಡಿದರೆ ತಿಳಿಯುತ್ತದೆ. ಒಬ್ಬ ಮನುಷ್ಯನು ತಾಲ್ಲೂಕು ಕಛೇರಿಗೆ ಹೋಗಿ ಕೆಲಸ ಮಾಡಿಸಿಕೊಳ್ಳಬೇಕಾದರೆ ದುಡ್ಡು ಕೊಡಬೇಕಾಗಿದೆ. ಇದು ಒಂದು ತಾಲ್ಲೂಕಿನಲ್ಲೇ ಅಲ್ಲ, ಇಡೀ ದೇಶದಲ್ಲಿ ಈ ಗೋಳು ಇದೆ. ತಾಲ್ಲೂಕು ಕಛೇರಿಗೆ ಒಬ್ಬ ರೈತ ಹೋದರೆ ಅವನಿಗೆ ಸಹಜವಾದ ರೀತಿಯಲ್ಲಿ ಅಂದರೆ ಮಾನವನಿಗೆ ಏನು ಗೌರವ ಸಿಗಬೇಕೋ ಅದು ಸಿಕ್ಕುತ್ತಾ ಇಲ್ಲ. ಅವನನ್ನು ನಾಯಿಯಂತೆ ಕೀಳು ಭಾವನೆಯಿಂದ ನೋಡುತ್ತಿದ್ದಾನೆ. ಅಲ್ಲಿ ಹಣ ಕೊಟ್ಟ ಹೊರತು ಯಾವ ಕಾಗದವೂ ಹೊರಗೆ ಬರುವುದಿಲ್ಲ. ಇದು ಸತ್ಯವಾದ ಸಂಗತಿ. ಇದನ್ನು ಮೊದಲು ಸರಿಪಡಿಸಿ ಎಂದು ಹೇಳುತ್ತೇನೆ. ಆದುದರಿಂದ ಇದಕ್ಕೆ ಎಫಿಷಿಯೆನ್ಸಿ ಆಡಿಟ್ ಒಂದನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಹೇಗೆಂದರೆ ಒಂದು ಕಾಗದ ಒಬ್ಬ ಗುಮಾಸ್ತನ ಹತ್ತಿರಕ್ಕೆ ಹೋದರೆ ಇಷ್ಟು ದಿವಸದಲ್ಲಿ ಅದನ್ನು ನೋಟ್ ಹಾಕಿ ಕಳುಹಿಸಬೇಕು ಎಂದು ಮಾಡಿ, ಅದನ್ನು ತಡ ಮಾಡಿದರೆ ಏತಕ್ಕೆ ತಡವಾಯಿತು ಎಂದು ಕೇಳಬೇಕು. ದುಡ್ಡು ಕೊಡದೇ ಹೋದರೆ ಕಾಗದದ ಮೇಲೆ ತಪ್ಪು ನೋಟ್ ಹಾಕಿಕಳುಹಿಸುತ್ತಾರೆ. ಈ ರೀತಿ ಮಾಡಿದವರನ್ನು ಡಿಸ್ಮಿಸ್ ಮಾಡಬೇಕು ಎಂದು ನಾನು ಹೇಳುತ್ತೇನೆ. ಆದುದರಿಂದ ರೈತನಿಗೆ ಉಪಕಾರ ಮಾಡಿ, ಇಂಥಾದ್ದನ್ನು ಸುಧಾರಣೆ ಮಾಡುವುದಾದರೆ ನೀವು ನಮಗೆ ವಂದನಾರ್ಹರು ಎಂದು ಹೇಳುತ್ತೇನೆ.

ಇನ್ನು ಸಮಾಜವಾದ ಸುಧಾರಣೆ ಬಗ್ಗೆ ಹೇಳುವುದಾದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಅಸ್ತಿತ್ವಕ್ಕೆ ಬಂದು ಇಷ್ಟು ಕಾಲವಾದರೂ ಏನು ಒಂದು ಸುಧಾರಣೆ ಆಗಿಲ್ಲ. ಯಾವ ಹಳ್ಳಿಗಳಲ್ಲೇ ಆಗಲಿ ಹರಿಜನರನ್ನು ನೋಡಿದರೆ ಅವರಿಗೆ ಉಟ್ಟುಕೊಳ್ಳುವುದಕ್ಕೆ ಒಂದು ಪಂಚೆ, ತೊಟ್ಟುಕೊಳ್ಳುವುದಕ್ಕೆ ಒಂದು ಅಂಗಿಯೂ ಕೂಡ ಇಲ್ಲ. ಈ ರೀತಿ ಮೈ ಮುಚ್ಚುವುದಕ್ಕೆ ಒಂದು ಬಟ್ಟೆಯೂ ಇಲ್ಲದೇ ಇರುವ ಪರಿಸ್ಥಿತಿ ಇರುವಾಗ ನಾವು ಪ್ರಗತಿ ಮಾಡಿದ್ದೇವೆ ಎಂದು ಹೇಳಿದರೆ, ಮಾಡಿಲ್ಲ ಎಂದು ಹೇಳಬೇಕಾಗಿದೆ. ಬರೀ ದಬ್ಬಾಳಿಕೆ ಮಾಡುತ್ತಿದ್ದಾರೆ. ಸರ್ಕಾರದವರು ಅವರ ಕಡೆ ಸರಿಯಾದ ರೀತಿಯಲ್ಲಿ ಗಮನಿಸಿಲ್ಲ ಎಂದು ನಾನು ಹೇಳಬೇಕಾಗಿವೆ.

ಇನ್ನು ಸಾರ್ವಜನಿಕ ಕಾಮಗಾರಿಗಳ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಾದರೆ ಕೆಲವು ಕಡೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ನ್ನು ನಿರ್ಮಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಬಹಳ ಸಂತೋಷದ ಸಂಗತಿ. ಆದರೆ ನಮ್ಮ ಜಿಲ್ಲೆಯಲ್ಲಿ ಅಂಥ ಪ್ರಕೃತಿ ದತ್ತವಾದ ಅನುಕೂಲತೆಗಳಿಲ್ಲ. ಅಲ್ಲಿ ಅನುಕೂಲ ಮಾಡಬೇಕಾದರೆ ಅದಕ್ಕೂ ಮಾರ್ಗಗಳಿವೆ. ಕೆಲವು ದಿನಗಳ ಹಿಂದೆ 2000 ಮೈಲಿ ಉದ್ದದ ರಸ್ತೆ ಕಾಮಗಾರಿಯನ್ನು ಪಿ. ಡಬ್ಲ್ಯು. ಡಿ. ಅವರು ತೆಗೆದುಕೊಂಡರು. ಆದರೆ ಅವರ ಲೆಕ್ಕಾಚಾರ ಏನೆಂಬುದೇ ಗೊತ್ತಾಗುತ್ತಿಲ್ಲ. ಕೆಲವು ತಾಲ್ಲೂಕುಗಳಲ್ಲಿ 25 ಮೈಲಿಗಳ ಉದ್ದದ ರಸ್ತೆಯನ್ನು ತೆಗೆದುಕೊಂಡರೆ ಇನ್ನು ಕೆಲವು ತಾಲ್ಲೂಕುಗಳಲ್ಲಿ ಕೇವಲ 5 ಮೈಲಿ ರಸ್ತೆಯನ್ನು ತೆಗೆದುಕೊಂಡಿದ್ದಾರೆ. ಹೀಗೆ ರಾಜಕೀಯ ಮಾಡಲು ಹೊರಟು ಇದರಲ್ಲೂ ಸರ್ಕಾರದವರು ಫೈಲಾಗಿದ್ದಾರೆ. ಆದ್ದರಿಂದ ಇನ್ನಾದರೂ ಇಂಥ ರಾಜಕೀಯವನ್ನು ಮಾಡದೆ ಎಲ್ಲ ತಾಲ್ಲೂಕುಗಳಲ್ಲೂ ಒಂದು ನಿಯಮಿತ ಗುರಿಗೆ ಸರಿಯಾಗಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ವಿಚಾರಕ್ಕೆ ಬಂದರೆ ಸಂತೋಷವಾಗುತ್ತದೆ. ಸಾಕಷ್ಟು ಕೆಲಸಗಳು ನಡೆದಿವೆ. ನ್ಯಾಷನಲ್ ವಾಟರ್ ಸಪ್ಲೈ ಬಗ್ಗೆ ಸಾಕಷ್ಟು ಶ್ರದ್ಧೆಯಿಂದ ಕೆಲಸಗಳು ನಡೆದಿವೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಪ್ರಜಾಸಂಖ್ಯೆ ಕೇವಲ 5—6 ಸಾವಿರ ಮಾತ್ರ ಇದ್ದರೂ ಅಲ್ಲಿಗೆ ಈ ಸ್ಕೀಮಿನ ಅನುಕೂಲ ಲಭಿಸುವುದಿಲ್ಲ. ಕಾರಣ ಅವು ತಾಲ್ಲೂಕ್ ಕಸಬೆಗಳು ಎಂದು. ಅಲ್ಲಿ ಗ್ರಾಮಪಂಚಾಯಿತಿಗಳು ಕೆಲಸ ಮಾಡದೆ ಮೈನರ್ ಮುನಿಸಿಪಾಲಿಟಿಗಳು ಕೆಲಸ ಮಾಡುತ್ತಿವೆ. ಅವುಗಳಿಗೆ ಸಾಕಷ್ಟು ಹಣವನ್ನು ಸಾಲವೆತ್ತಿ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಕೆಲವು ತಾಲ್ಲೂಕುಗಳಲ್ಲಿ ನೀರಿನ ತೊಂದರೆ ಬಹಳವಾಗಿದೆ. ಸಾಲ ಅವುಗಳಿಗೆ ಸಿಕ್ಕುವುದಿಲ್ಲ. ಹೀಗಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಗುಡಿಬಂಡೆ, ಶ್ರೀನಿವಾಸಪುರ, ಶಿಡ್ಲಘಟ್ಟ,

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮಾಲೂರು ಇತ್ಯಾದಿ ತಾಲ್ಲೂಕುಗಳಲ್ಲಿ ಪ್ರಜಾಸಂಖ್ಯೆ ಬಹಳ ಕಡಮೆ ಇದೆ. ಆದರೂ ಅವು ತಾಲ್ಲೂಕ್ ಹೆಡ್‌ಕ್ವಾರ್ಟರುಗಳು. ಹೀಗಾಗಿ ಅವುಗಳಿಗೆ ನ್ಯಾಷನಲ್ ರೂರಲ್ ವಾಟರ್ ಸ್ಕೀಮನ್ನು ಅನ್ವಯಿಸುವುದಕ್ಕೆ ಸಾಧ್ಯವಾಗಿಲ್ಲ. ಅವು ಈ ಹಿಂದೆ ಈ ನೀರು ಸರಬರಾಯಿಗಾಗಿ ಮಾಡಿದ್ದ ಸಾಲವನ್ನು ತೀರಿಸುವುದಕ್ಕೂ ಸಾಧ್ಯವಾಗದೆ ತೊಂದರೆಯಲ್ಲಿವೆ. ಈ ವಿಚಾರವನ್ನು ಹಿಂದೊಮ್ಮೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಕೂಡ ಚರ್ಚೆ ಮಾಡಿ ಆ ಸಾಲದ ಹಣವನ್ನು ರೈಟಾಫ್ ಮಾಡುವುದಕ್ಕೂ ಕೂಡ ಶಿಫಾರಸ್ಸನ್ನು ಮಾಡಲಾಗಿತ್ತು. ಆದುದರಿಂದ ಈಗಲಾದರೂ ಕೂಡ ರಾಜ್ಯದಲ್ಲಿ ಎಲ್ಲೆಲ್ಲಿ ತಾಲ್ಲೂಕು ಪ್ರಜಾ ಸಂಖ್ಯೆ 20 ಸಾವಿರಕ್ಕೂ ಕಡಮೆ ಇರುತ್ತದೋ ಅಂಥ ತಾಲ್ಲೂಕುಗಳಿಗೆ ಈ ನೀರಿನ ಸರಬರಾಯಿಗಾಗಿ ಮಾಡಿರತಕ್ಕ ಹಿಂದಿನ ಬಾಕಿಗಳೇನಿವೆ ಅವುಗಳನ್ನು ಮನ್ನಾ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಆಕ್ಟ್ರಾಯಿ ಪದ್ಧತಿಯನ್ನು ಮತ್ತು ಆ ಬಗ್ಗೆ ವಿಧಿಸಲಾಗುತ್ತ ಇದ್ದ ತೆರಿಗೆಯನ್ನು ರದ್ದು ಮಾಡುವುದಾಗಿ ಹೇಳಿದ್ದಾರೆ. ಇದರಿಂದ ಮುಂದೆ ಅನೇಕ ಪೌರ ಸಭೆಗಳಿಗೆ ಗಣನೀಯ ಮಟ್ಟದಲ್ಲಿ ನಷ್ಟವಾಗಬಹುದು; ಅವುಗಳ ಉತ್ಪನ್ನ ತಗ್ಗಬಹುದು. ಆದರೆ ಅವುಗಳಿಗೆ ಮುಂದೆ ಸರ್ಕಾರದವರು ಯಾವ ರೀತಿ ಪರಿಹಾರವನ್ನು ನೀಡುತ್ತಾರೆಂಬುದನ್ನು ವಿವರವಾಗಿ ತಿಳಿಸಿಲ್ಲ, ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಮತ್ತು ಈ ಪರಿಹಾರವನ್ನು ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಕಳೆದ ಇಪ್ಪತ್ತು ವರ್ಷ ಗಳಿಂದ ಯಾವ ದಾಮಾಷ ಪ್ರಕಾರ ಈ ಆದಾಯ ಹೆಚ್ಚಿದೆಯೋ ಅದರಂತೆ ಹಂಚಬೇಕೆಂದೂ ಯಾವ ತಾರತಮ್ಯವನ್ನೂ ಮಾಡಬಾರದೆಂದು ಪ್ರಾರ್ಥನೆಮಾಡಿಕೊಳ್ಳುತೇನೆ.

ಇನ್ನು ಸಮಾಜವಾದ ಪದ್ಧತಿಯ ಸರ್ಕಾರವನ್ನು ಜಾರಿಗೆ ತರಬೇಕೆಂಬ ತೀರ್ಮಾನವನ್ನು ಹಿಂದೆ ನಡೆದ ಆವಡೀ ಅಧಿವೇಶನಲ್ಲೇ ತೆಗೆದುಕೊಂಡಿದ್ದರೂ ಅದನಿನ್ನೂ ಜಾರಿಗೆ ತರಲಿಲ್ಲ. ಆದಾಗ್ಯೂ ಮಂತ್ರಿಗಳು ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂದು ಹೇಳು ತ್ತಲೇ ಇದ್ದಾರೆ. ಆದರೆ ನಾವು ಮಾನವರಾಗಿ ಹುಟ್ಟಿದಕ್ಕೆ ಕನಿಷ್ಠಪಕ್ಷ ಒಬ್ಬ ವ್ಯಕ್ತಿಗೆ ಏನೊಂದು ತೀರಾ ಕನಿಷ್ಠ ಪ್ರಮಾಣದ ಸೌಕರ್ಯ ಅಥವಾ ಸೌಲಭ್ಯಗಳು ಬೇಕೋ ಅವುಗಳನ್ನಾದರೂ ಒದಗಿ ಸಿದರೆ, ಅವೇ ನಮ್ಮ ಪಾಲಿಗೆ ಸ್ವರ್ಗ ಮತ್ತು ಅವೇ ವೈಕುಂಠ ಮತ್ತು ಕೈಲಾಸ.

ಇನ್ನು ದೇಶದಲ್ಲಿ ಇತ್ತೀಚೆಗೆ ಪಾರ್ಲಿಯಮೆಂಟಿಗೆ ನಡೆದ ಚುನಾವಣೆಗಳ ಬಗ್ಗೆ ಇತ್ತಕಡೆ ಕುಳಿತಿರತಕ್ಕವರು ಏನೇನೋ ಹೇಳಿಕೊಳ್ಳುತ್ತಿದ್ದಾರೆ. ಆದರೆ ಅತ್ತ ಆಡಳಿತದಲ್ಲಿರತಕ್ಕವರು ಏನನ್ನೂ ಹೇಳುತ್ತಿಲ್ಲ. ಆದರೆ ಒಟ್ಟಿನಲ್ಲಿ ಮೈಸೂರಿನ ಜನರು ಬಹಳ ಬುದ್ಧಿವಂತರು. ಈ ವಿಚಾರ ದಲ್ಲಿ ಇತ್ತೀಚೆಗೆ 'ಬೆಳಗಾಮಿನ ನೆಲ ಮೈಸೂರಿನ ಜಲ' ಎಂಬ ಗಾದೆಯೇ ಎದ್ದಿದೆ; ಆದರೆ ಕೆಲವು ದಿನಗಳಿಂದ ಈ ನೆಲ ಜಲಗಳ ವಿಚಾರದಲ್ಲಿ ಕೇಂದ್ರ ಸರ್ಕಾರದವರೇನು ಮಾಡುತ್ತಿದ್ದಾರೆ ಮತ್ತು ನಮ್ಮ ರಾಜ್ಯದ ಜನರೇನು ಮಾಡುತ್ತಿದ್ದಾರೆ, ಇಲ್ಲಿಯ ಸರ್ಕಾರದವರೇನು ಮಾಡುತ್ತಿದ್ದಾರೆ ಎಂಬುದನೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ದಿವಸ ಕೇಂದ್ರದಲ್ಲಿರುವುದು ಆ ಇಂದ್ರಮ್ಮ ಸರ್ಕಾರ ಆದರೆ ಇಲ್ಲಿ ಇರುವುದು ಬಹಳ ಅಂತರವಿರುವ ವೀರೇಂದ್ರಪಾಟೀಲರ ಸರ್ಕಾರ, ಆದಾಗ್ಯೂ ಇನ್ನು ಮುಂದಕ್ಕಾದರೂ ನಮ್ಮ ನೆಲ ಜಲಗಳ ವಿಚಾರದಲ್ಲಿ ಎಳ್ಳಷ್ಟೂ ಅನ್ಯಾಯ ಅನಾನುಕೂಲಗಳಾಗ ದಿರಲೆಂದು ಜನರು ಈ ದಿವಸ ಇಲ್ಲಿ ಆ ಚುನಾವಣೆಗೆ ನಿಂತಿದ್ದ 27 ಜನರಲ್ಲಿ 27 ಜನರನ್ನೂ ಆರಿಸಿ ದ್ದಾರೆ. ಅವರೆಲ್ಲರೂ ಆ (ಜೆ) ಕಾಂಗ್ರೆಸಿಗೆ ಸೇರಿದವರು. ಮುಂದೆ ದೇಶದಲ್ಲಾಗತಕ್ಕ ರಕ್ತಪಾತ ವನ್ನು ತಪ್ಪಿಸುವುದಕ್ಕಾಗಿ ಜನರು ಹೀಗೆ ಆ (ಜೆ) ಕಾಂಗ್ರೆಸಿಗೆ ಸೇರಿದ 27 ಜನರನ್ನೂ ಚುನಾವಣೆ ಯಲ್ಲಿ ಓಟ್ ಕೊಟ್ಟು ಗೆಲ್ಲಿಸಿದ್ದಾರೆ. ಆದ್ದರಿಂದ ಆ ಚುನಾಯಿತರಾದ ಜನರು ಮುಂದೆ ನಮ್ಮ ಮೈಸೂರು ರಾಜ್ಯಕ್ಕೆ ಜಲ ನೆಲಗಳ ವಿಚಾರದಲ್ಲಿ ಎಳ್ಳಷ್ಟೂ ಅನ್ಯಾಯವಾಗುವುದಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಯವರೆ, ಸಭೆಯ ಮುಂದೆ ಇರತಕ್ಕ ಬಡ್ಜೆಟ್ಟನ್ನು ನಾನು ವಿರೋಧಿಸುತ್ತ ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ.

ನಮ್ಮ ಪಕ್ಷದ ಮುಖಂಡರು ಈಗಾಗಲೇ ಹೇಳಿರುವಂತೆ ಈಗ ಸಭೆಯ ಮುಂದಿರತಕ್ಕ ಬಡ್ಜೆಟ್ಟನ್ನು ಶಾಸ್ತ್ರೋಕ್ತವಾಗಿ ಮಂಡಿಸಿದ್ದಲ್ಲ ಎಂಬುದು ಖಚಿತವಾದದ್ದು. ಹಾಗೆ ಇದನ್ನು ಮಂಡಿಸಲಿಲ್ಲ. ಈ ವಿಚಾರದಲ್ಲಿ ಹೆಚ್ಚು ಚರ್ಚೆಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಇಂಥ ಅಕ್ರಮ ನಡೆವಳಿಕೆಗಳಾಗುತ್ತಿರುವುದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

ಈಗಾಗಲೇ ಕೆಲವು ನನ್ನ ಮಾನ್ಯ ಸ್ನೇಹಿತರುಗಳು ಹೇಳಿರುವಂತೆ ಶ್ರೀ ರಾಮಕೃಷ್ಣ ಹೆಗಡೆಯವರು ಈ ಬಡ್ಜೆಟ್ಟನ್ನು ಮೊನ್ನೆ ಕಳೆದ ಚುನಾವಣೆಗಳಲ್ಲಿ ಏನು ಹಣವನ್ನು ಇವರು ವೆಚ್ಚಮಾಡಿದ್ದಾರೆ ಅದನ್ನು ಸರಿಗಟ್ಟುವುದಕ್ಕಾಗಿ ತಂದಿರತಕ್ಕ ಬಡ್ಜೆಟ್ಟೆಂದು ಹೇಳಿದ್ದಾರೆ. ಅದು ನಿಜವೂ ಹೌದು.

[MR. CHAIRMAN (SRI D. M. SIDDAIAH) in the Chair]

ನಮ್ಮ ಸಭಾ ನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರಿಂದ ಈ ಬಡ್ಜೆಟ್ಟನ್ನು ಮಂಡಿಸುವ ಹವ್ಯಾಸ ನಾವು ಬಯಸಲಿಲ್ಲ. ಅವರು ರಾಜ್ಯದ ಜನತೆ ಇಂದು ತಿರಸ್ಕಾರ ಮಾಡಿದಂತಹ ವ್ಯಕ್ತಿಗಳು. ಅವರು ಜನತೆಯ ಎದುರಿಗೆ ಯಾವ ಯಾವ ಉದ್ದೇಶಗಳನ್ನು ಇಟ್ಟು ಕೊಂಡು ಅನ್ಯಾಯವಾದ ಪ್ರಚಾರವನ್ನು ಮಾಡಿದರೋ ಮತ್ತು ಘೋಷಣೆಗಳನ್ನು ಮಾಡಿದರೋ ಅವೆಲ್ಲವನ್ನೂ ಜನತೆ ಅರಿತುಕೊಂಡು ನಿಮ್ಮ ಅರ್ಥಗರ್ಭಿತವಾದ ಭಾಷಣಕ್ಕೆ ಮಾರು ಹೋಗ ಲಿಲ್ಲ ಮತ್ತು ನಿಮ್ಮ ಕೈಯಿಂದ ರಕ್ಷಣೆ ಜನರಿಗೆ ಆಗುವುದಿಲ್ಲ ಎನ್ನುವುದನ್ನು ತೋರಿಸಿ ಕೊಟ್ಟರು. ನೀವೇನು ನೆಲ ಹಾಗೂ ಜಲದ ಪ್ರಶ್ನೆಗಳನ್ನು ಎತ್ತಿಕೊಂಡು ಘೋಷಣೆಗಳನ್ನು ಹೇಳುತ್ತಾ ಹೋದರೋ ಅದು ಇಂದು ಗಾಳಿಗೆ ತೂರಿ ಹೋಗಿದೆ. ಇಂತಹ ಒಂದು ಮುಂಗಡಪತ್ರವನ್ನು ಮಂಡಿ ಸುವಾಗ ಇದರ ಬಗ್ಗೆ ಮಾತಾಡಲು ನಿಮಗೆ ಶಕ್ತಿ ಕೂಡ ಇಲ್ಲ. ಇದರಿಂದ ನೀವು ಜನತೆಯನ್ನು ಆಳುವ ಶಕ್ತಿಯನ್ನೂ ಕಳೆದುಕೊಂಡಿದ್ದೀರಿ ಮತ್ತು ನಿಮ್ಮ ಸರಕಾರವನ್ನು ಜನ ತಿರಸ್ಕರಿಸಿದ್ದಾರೆ. ವಾಸ್ತವವಾಗಿ ಪ್ರಜಾಪ್ರಭುತ್ವವಕ್ಕೆ ಯಾರು ಮನ್ನಣೆ ಕೊಡಬೇಕೆಂದು ಹೇಳುತ್ತಾರೋ ಅಂತಹ ವ್ಯಕ್ತಿಗಳು ಜನತೆಯ ಅಭಿಪ್ರಾಯ ವ್ಯಕ್ತವಾದ ಕೂಡಲೇ ಅದಕ್ಕೆ ಮನ್ನಣೆ ಕೊಡಬೇಕಾ ಗಿತ್ತು. ಚುನಾವಣೆಯಲ್ಲಿ ಜನರು ಅವರ ತೀರ್ಪನ್ನು ಕೊಟ್ಟಮೇಲೆ ಅದಕ್ಕನುಸಾರವಾಗಿ ಶ್ರೀಮಾನ್ ವೀರೇಂದ್ರ ಪಾಟೀಲರವರು ರಾಜೀನಾಮೆ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಅದರಲ್ಲೂ ಅವರ ಮಂತ್ರಿಮಂಡಲದಲ್ಲಿ ಒಬ್ಬಿಬ್ಬರು ನನ್ನ ಪರಮ ಮಿತ್ರರೂ ಇದ್ದಾರೆ. ಇದರಲ್ಲಿ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ನಾಡಗೌಡರು ಮೆಳ್ಳಿಗೇರಿಯವರು ಚುನಾವಣೆಯಲ್ಲಿ ಸೋತ್ತದ್ದೇ ಆದರೆ ಅಂದೇ ರಾಜೀನಾಮೆಯನ್ನು ನಾನು ಕೊಡುತ್ತೇನೆಂದು ಹೇಳಿದ್ದರು. ಈಗಾಗಲೇ ಅವರು ಮುಖ್ಯಮಂತ್ರಿಗಳ ಕಡೆಗೆ ಅವರ ರಾಜೀನಾಮೆಯನ್ನು ಕಳುಹಿಸಿದ್ದಾರೆಂದು ನನಗೆ ತಿಳಿದು ಬಂದಿದೆ. ಇದನ್ನು ಮಂಜೂರು ಮಾಡಬೇಕೋ ಬೇಡವೋ ಎನ್ನುವ ವಿಚಾರದಲ್ಲಿ ನಮ್ಮ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಇದ್ದಾರೆಂದು ಕೇಳು ತ್ತೇನೆ. ಇದು ಎಷ್ಟರಮಟ್ಟಿಗೆ ಸತ್ಯವೋ ಅಸತ್ಯವೋ ಅದನ್ನು ಅವರೇ ಹೇಳಬೇಕು. ಕೆಲವರು ಇಲ್ಲಿ ಒಂದು ವಿಚಾರ ಹೇಳಬಹುದು. ಇಂದು ಚುನಾವಣೆ ನಡೆದಿರುವುದು ಪಾರ್ಲಿಮೆಂಟಿಗಾಗಿ ನಮ್ಮ ಮಂತ್ರಿಮಂಡಲಕ್ಕಾಗಿ ಆದ ಚುನಾವಣೆಯಲ್ಲ ಎಂದು ಹೇಳುತ್ತಾರೆ. ವಾಸ್ತವವಾಗಿ ಇದನ್ನು ಆ ರೀತಿ ಹೇಳಲು ಸಾಧ್ಯವಿಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಜನತೆಯ ಎದುರಿ ನಲ್ಲಿ ಹೋಗಿರಲಿಲ್ಲ. ರಾಜ್ಯದ ಜನತೆಯ ಎದುರಿನಲ್ಲಿ ಒಂದು ರೀತಿಯಾದ ರಾಷ್ಟ್ರೀಕೃತವಾದ ಯೋಜನೆಯನ್ನು ಇಟ್ಟುಕೊಂಡು ಇಂದಿರಾ ಗಾಂಧಿ ಹಠಾವೋ, ಇಂದಿರಾ ಸರಕಾರಕ್ಕೆ ಧಿಕ್ಕಾರ ಎಂದು ಯಾವ ಯಾವ ಸ್ಥಳಕ್ಕೆ ಹೋಗಿ ಜನತೆಯ ಮುಂದೆ ನಿವೇದನೆ ಮಾಡಿ ಬಂದರೋ ಅಲ್ಲೆಲ್ಲಾ ಜನರು ನಿಮ್ಮ ಮಾತುಗಳನ್ನು ಕೇಳಿ ಸರಿಯಾದ ಒಂದು ವರ್ಡಿಕ್ಟನ್ನು ಇಂದು ನಿಮಗೆ ಕೊಟ್ಟಿ ದ್ದಾರೆ. ಇದಕ್ಕೆ ನೀವು ಮನ್ನಣೆ ಕೊಡಬೇಕು. ಇವೊತ್ತು ನೀವು ವೋಟ್ ಆನ್ ಅಕೌಂಟು ತೆಗೆದು ಕೊಂಡು ಪಾಸು ಮಾಡುವುದು ಒಂದು ಮಹತ್ವದ ವಿಚಾರವಲ್ಲ. ಜನತೆ ನಿಮ್ಮಿಂದ ರಾಜೀನಾಮೆ ನಿರೀಕ್ಷಿಸುತ್ತಿದ್ದಾರೆ ನೀವು ಇಂದು ಇಲ್ಲಿ ವೋಟ್ ಆನ್ ಅಕೌಂಟು ಪಾಸು ಮಾಡಲು ನಿಮಗೆ ಯಾವ ರೀತಿಯಾದ ನೈತಿಕ ಹಕ್ಕು ಇದೆ ಎಂದು ಇಲ್ಲಿ ಕೇಳಬಯಸುತ್ತೇನೆ. ನೀವು ಜನತಾ ಪ್ರತಿನಿಧಿ ಗಳಾಗಿ ಇಂದು ಮುಂಗಡ ಪತ್ರವನ್ನು ಮಂಡಿಸುತ್ತಿಲ್ಲ. ಇಂದೇನೋ ನೀವು ಬಹುಮತದಲ್ಲಿರ ಬಹುದು ಎಂದು ನಾಲ್ಕು ತಿಂಗಳಿಗಾಗಿ ಬಡ್ಜೆಟ್ಟು ಪಾಸು ಮಾಡಿಕೊಂಡು ಆ ನಂತರ ಮುಂದೆ ಪೂರ್ತಿ ಪಾಸು ಮಾಡಬಹುದು ಎಂದು ಹೇಳುವುದು ಅದೇನೂ ದೊಡ್ಡ ಮಾತಲ್ಲ. ಮೈಸೂರು ರಾಜ್ಯದ ಜನರ ಮುಂದೆ ನೀವು ಎಷ್ಟು ಅಂಗಲಾಚಿ ನಿಮ್ಮ ತತ್ವಗಳನ್ನು ನಿರೂಪಣೆ ಮಾಡಿ ಬಂದಿ ದ್ದೀರೋ ಅದಕ್ಕೆ ವಿರುದ್ಧವಾಗಿ ಇಂದು ಜನ ತಮ್ಮ ಮತಕೊಟ್ಟು ಇರುವುದರಿಂದ ನಿಮಗೆ ರಾಜ್ಯದ ಜನತೆಯ ಶಾಪ ತಟ್ಟುವುದರಲ್ಲಿ ಸಂದೇಹವೇ ಇಲ್ಲ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಟಿ ಡಿ ಬಿ ಎಲೆಕ್ಷನ್ ಆದಾಗ ಶೇಕಡಾ 98 ರಷ್ಟು ಜನತೆ ಮತ ಕೊಟ್ಟಾಗ ನೀವು ಏನು ಮಾಡಿದಿರಿ ?

ಶ್ರೀ ಕೆ. ಹೆಚ್. ಪಾಟೀಲ್.—ಅದರ ಬಗ್ಗೇನೂ ಹೇಳುತ್ತೇನೆ. ನಿಮಗೆ ವರ ಹಸ್ತ ಕೊಟ್ಟಿದ್ದ ಶ್ರೀಮಾನ್ ನಿಜಲಿಂಗಪ್ಪನವರನ್ನು ಮುಂದೆ ಇಟ್ಟುಕೊಂಡು ನೀವು ಜನತೆಯ ಮುಂದೆ ಹೋಗಿ ಹೆದರಿಸಿ ಬೆದರಿಸಿ ಯಾವ ರೀತಿ ಟಿ ಡಿ ಬೋರ್ಡುಗಳಲ್ಲಿ ಚುನಾವಣೆಗಳನ್ನು ನಡೆಹಿಸಿದ್ದೀರೆನ್ನುವುದು ಎಲ್ಲ ಜನರಿಗೂ ಗೊತ್ತಾಗಿದೆ. ಇದರಲ್ಲಿ ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಬಂದಿರಿ ಎನ್ನುವುದೂ ಗೊತ್ತಿದೆ. ಆಗಿನ ಚುನಾವಣೆಯಲ್ಲಿ ನೀವು ಹೆಚ್ಚು ಮತ ಗಳಿಸಿರಬಹುದು. ಆದರೆ ಇಂದು ನಡೆದ ಚುನಾವಣೆಗಳಲ್ಲಿ ಜನ ನಿಮ್ಮ ಬಗ್ಗೆ ಸರಿಯಾಗಿ ವಿವೇಚನೆ ಮಾಡಿ ಪ್ರತಿನಿಧಿಗಳನ್ನು ಚುನಾಯಿಸಿದ್ದಾರೆ. ನೀವು ಜನತೆಯ ಮುಂದೆ ಏನೇನು ಆಶ್ವಾಸನೆಗಳನ್ನು ಕೊಟ್ಟು ಬಂದರೋ ಅವನ್ನೆಲ್ಲಾ ಇಂದು ಜನ ತಿರಸ್ಕರಿಸಿದ್ದಾರೆ. ನೀವು ಕೊಟ್ಟ ಆಶ್ವಾಸನೆಗಳನ್ನು ಯಾವ ರೀತಿ ಕೃತಿಗೆ ತರುತ್ತೀರಿ ಎನ್ನುವುದನ್ನು ಜನ ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಇಂದು ನಿಮ್ಮ ಮಂತ್ರಿಮಂಡಲದಲ್ಲಿ ಇರುವ ಸುಮಾರು ಹತ್ತಾರು ಜನರು ಒಂದು ರೀತಿಯಾದ ಭಯದಿಂದ ಕೂಡಿದ್ದಾರೆ ಮತ್ತು ಮುಂದೇನು ಮಾಡುವುದು ಎಂದೂ ಯೋಚಿಸುತ್ತಿದ್ದಾರೆಂದು ಕೇಳುತ್ತೇವೆ.

(ಉಪಾಧ್ಯಕ್ಷರು ಸಭಾಪೀಠವನ್ನಲಂಕರಿಸಿದರು)

ಇನ್ನೊಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಇಂತಹ ಒಂದು ಮುಂಗಡ ಪತ್ರವನ್ನು ಇಲ್ಲಿ ಮಂಡಿಸಬೇಕಾದ ಅಗತ್ಯವೇ ಇರಲಿಲ್ಲ. ಇಂತಹ ಮುಂಗಡ ಪತ್ರದಿಂದ ರಾಜ್ಯಕ್ಕೆ ಮತ್ತು ರಾಜ್ಯದ ಜನರ ಹಿತಕ್ಕೆ ಧಕ್ಕೆ ಬಂದರೆ ನೀವು ಉಳಿಯುತ್ತೀರಾ ? ನೀವು ಯಾವ ರೀತಿ ಪ್ರಚಾರ ಮಾಡಿ ಇಂದಿರಾ ಗಾಂಧಿ ಹಠಾವೋ ಎಂದು ಹೇಳಿ ತಿರಸ್ಕರಿಸಿದವರು ಇಂದು ಅವರನ್ನೇ ನೀವು ಹೊಗಳಲು ಆರಂಭ ಮಾಡಿದ್ದೀರಿ ಮೊದಲು ಇಂದಿರಾ ಗಾಂಧಿಯವರು ನಾಯಕರಾಗಲು ಯೋಗ್ಯಳಲ್ಲ ಅವಳು ರಕ್ಕಸಿ, ಕಮ್ಯುನಿಸ್ಟ್ ದೇಶಕ್ಕೆ ಸೇರಿದವಳು ಇಂದಿರಾ ಗಾಂಧಿ ಎಂದು ಹೇಳುತ್ತಾ ಬಂದವರು ಇಂದು ನೀವು ಅವರನ್ನು ಹೊಗಳುತ್ತಾ ಬಂದರೆ ನಿಮ್ಮನ್ನು ಜನ ಏನೆಂದಾರು ಎನ್ನುವುದಾದರೂ ನಿಮಗೆ ತಿಳಿಯಬೇಡವೇ ? ಇಂತಹ ಒಂದು ಅವಹೇಳನಕ್ಕೆ ನೀವು ಇಂದು ತುತ್ತಾಗಿದ್ದೀರಿ. ನೀವು ಜನತೆಯ ಮುಂದೆ ಮಾಡಿರುವುದು ತಪ್ಪು ಎನ್ನುವುದನ್ನು ಒಪ್ಪಿಕೊಳ್ಳರೇ ಬೇಕಾಗಿದೆ. ಯಾವ ತತ್ವವನ್ನು ಇಟ್ಟುಕೊಂಡು ನೀವು ಮುಂದೆ ಹೋಗಬೇಕೆಂದು ಹೇಳುತ್ತಾ ಬಂದಿರೋ ಅದನ್ನು ಜನ ಒಪ್ಪದೇ ಇರುವಾಗ ನೈತಿಕವಾಗಿ ನೀವು ಅಧಿಕಾರದಲ್ಲಿ ಉಳಿಯಲು ಶಕ್ತಿ ಇಲ್ಲ. ಆದರೆ ಇಂದು ಇಂದಿರಾ ಗಾಂಧಿಯವರ ಬಗೆಗೆ ನಮ್ಮ ಮಾನ್ಯ ಮಂತ್ರಿಗಳು ಅವರ ಭಾಷಣದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದು ಹೀಗೆ ಇದೆ :

> " ಈ ದೇಶದ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯ ಆರಂಭವಾಗಿದೆ. ಲೋಕ ಸಭೆಗೆ ಸಾರ್ವತ್ರಿಕವಾದ ಚುನಾವಣೆಗಳು ಇದೀಗ ಮುಗಿದು ಪ್ರಧಾ ಇಂದಿರಾ ಗಾಂಧಿಯವರು ಚರಿತ್ರಾರ್ಹವಾದ ವಿಜಯವನ್ನು ಗಳಿಸಿದ್ದಾರೆ. "

ಎಂದು ಅವರೇ ಹೇಳಿದ್ದಾರೆ. ಇನ್ನು ಬಜೆಟ್ಟಿನ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ.

ಮಾನ್ಯ ಮಂತ್ರಿಗಳು ಅವರ ಭಾಷಣದಲ್ಲಿ ಕೆಲವು ಅನಾವಶ್ಯಕವಾದ ಪದ್ಧತಿಗಳನ್ನು ಹಳೆಯದು ಎಂದು ಅದನ್ನು ಬದಲಾವಣೆ ಮಾಡಿದ್ದೇವೆಂದು ಹೇಳುತ್ತಾ ಹೀಗೆ ಹೇಳುತ್ತಾರೆ :
ಪುಟ 28

> " ಹಳೆಯದಾದ ಆಡಳಿತ ವಿಧಾನಗಳು ವಿಶೇಷವಾಗಿ ಅನವಶ್ಯ ಕಾಗದ ಪತ್ರಗಳ ಬೆಳವಣಿಗೆ ಮೇಲ್ಮೊಗವಾಗಿ ಮತ್ತು ಪಾರ್ಶ್ವಮುಖವಾಗಿ ಅವುಗಳ ಚಲನೆ, ತತ್ಪರಿಣಾಮವಾದ ವಿಲಂಬ ಮತ್ತು 'ಕೆಂಪು ಪಟ್ಟಿ' ರೆಡ್ ಟೇಪಿಸಂ ಮುಖ್ಯವಾಗಿ ಇವುಗಳ ಮೇಲೆ ಧಾಳಿ ನಡೆಯುವುದು. ಫೈಲಿಂಗಪದ್ಧತಿಯನ್ನು ಕೆಲಸ ಮಾಡುವ ವಿಧಾನವನ್ನು ಬದಲಾಯಿಸಿ ಸುಧಾರಿಸಲು ನಾವು ಉದ್ದೇಶಿಸಿದ್ದೇವೆ. ಸೆಕ್ರಟೇರಿಯಟ್ಟಿನಲ್ಲಿ ಈ ಕೆಲಸ ಆರಂಭವಾಗಿದೆ. ಈ ಕಾರ್ಯಗತಿಯನ್ನು ಧೃಡತೆಯಿಂದ ಮುಂದುವರಿಸಲಾಗುವುದು. "

ಈ ರೀತಿ ಸುಧಾರಿಸುತ್ತೇವೆಂದು ಇಲ್ಲಿ ಹೇಳಿದ್ದಾರೆ. ಇದು ಹೇಗಿದೆ ಎಂದರೆ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎನ್ನುವ ಗಾದೆಯಂತಾಗಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಅಕ್ಕ ಎಂದು ಹೇಳುವುದು ಸರಿಯಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಹಿರಿಯಣ್ಣನ ಚಾಳಿ ಎಂದು ಹೇಳೋಣ ಅದರಲ್ಲೇನೂ ಇಲ್ಲ. ಇವೊತ್ತು ಶ್ರೀ ವೀರೇಂದ್ರ ಪಾಟೀಲರವರು ಶ್ರೀ ನಿಜಲಿಂಗಪ್ಪನವರಿಂದ ಬಿಟ್ಟು ಕೊಟ್ಟ ಧೋರಣೆಗಳನ್ನು ಅನುಸರಿಸುತ್ತಾ ಬಂದರೂ ಅವರು ಏನು ಮಾಡುತ್ತಿದ್ದಾರೆ ಎಂದರೆ ಯಾವುದಾದರೂ ಒಂದು ಕಾಗದವನ್ನು ಬರೆದರೆ ಅದಕ್ಕೆ ಕೂಡಲೇ ಒಂದು ಅಕ್ನಾಲೆಡ್ಜ್‌ಮೆಂಟ್ ಒಂದನ್ನು ಕಳಿಸುವುದನ್ನು ಬಿಟ್ಟರೆ ಬೇರೆ ಏನೂ ಮಾಡುತ್ತಿಲ್ಲ. ಮಾನ್ಯ ವೀರೇಂದ್ರ ಪಾಟೀಲರವರು ನಿರ್ದಿಷ್ಟವಾದ ದೂರುಗಳನ್ನು ನನಗೆ ಬರೆದು ಕೊಟ್ಟರೆ ಅದು ಸರಿಯಾಗಿ ಎನ್‌ಕ್ವೈರಿ ಮಾಡಿ ವಿಚಾರ ಮಾಡುತ್ತೇವೆಂದು ಹೇಳಿದರು. ನಾನೇ ಶ್ರೀಮಾನ್ ವೀರೇಂದ್ರಪಾಟೀಲರವರಿಗೆ ಶ್ರೀಮಾನ್ ನಾಡಗೌಡರ ಮೇಲೆ 34 ಚಾರ್ಜುಗಳಿರುವ ಒಂದು ಪಟ್ಟಿಯನ್ನು ಕೊಟ್ಟೆ. ಅದರ ಕಡೆಗೇನಾದರೂ ಸರಿಯಾಗಿ ವಿಚಾರ ಮಾಡಿ ನನಗೆ ತಿಳಿಸಿದರೇ ಎಂದು ಕೇಳುತ್ತೇನೆ. ಇದೇ ನಿಮ್ಮ ಗುರಿಯೇನು ? ಇದೇ ಜನತೆಯ ಮುಂದೆ ಕೊಟ್ಟ ನೀತಿಯೇನು ? ಶ್ರೀಮಾನ್ ವೀರೇಂದ್ರ ಪಾಟೀಲರವರು ಶ್ರೀಮಾನ್ ನಾಡಗೌಡರ ಬಗ್ಗೆ ಸರಿಯಾಗಿ ಇನ್‌ಕ್ವೈರಿ ಮಾಡಲು ಶಕ್ತಿ ಇಲ್ಲದೆ ಇರುವುದರಿಂದ ಅವರು ಅಧಿಕಾರದಲ್ಲಿರಲು ಅವರಿಗೆ ನೈತಿಕವಾಗಿ ಯಾವ ಹಕ್ಕೂ ಇಲ್ಲ. ಇದರಿಂದ ಜನತೆಗೆ ಅಪರಾಧ ಮಾಡಿದ್ದೀರಿ. ನಾನೇ ಪತ್ರ ಕೊಟ್ಟಾಗ ಶ್ರೀಮಾನ್ ನಾಡಗೌಡರ ಮೇಲೆ ಮಾಡಿರುವ ಚಾರ್ಜುಗಳು ತಪ್ಪಾಗಿದ್ದರೆ ಇದರ ಬಗ್ಗೆ ಏನೇನು ದಂಡನೆಗಳನ್ನು ಶ್ರೀ ಕೆ. ಹೆಚ್. ಪಾಟೀಲರವರಿಗೆ ಕೊಡಲು ಸಿದ್ಧರೋ ಅವನ್ನೆಲ್ಲಾ ಭರಿಸುತ್ತೇನೆಂತಲೂ ಹೇಳಿದ್ದೆ. ಹಾಗಿದ್ದರೂ ಇದರ ಬಗ್ಗೆ ಇದುವರೆಗೆ ಏತಕ್ಕಾಗಿ ವಿಚಾರ ಮಾಡಲಿಲ್ಲ ? ಇದು ನಿಮ್ಮ ನೀತಿಯೇ ? ಈಗೇನೋ ಸೆಕ್ರಟೇರಿಯಟ್ಟನ್ನು ಸುಧಾರಿಸುತ್ತೇನೆಂದು ಹೊರಟಿದ್ದೀರಿ. ಪ್ರತಿಯೊಂದು ಪತ್ರ ಬಂದಾಗಲೂ ಅದಕ್ಕೆ ಕೂಡಲೇ ಒಂದು ಅಕ್ನಾಲೆಡ್ಜ್‌ಮೆಂಟು ಒಂದು ಕಳುಹಿಸುವುದನ್ನು ಬಿಟ್ಟರೆ ಮುಂದೆ ಆ ಪತ್ರ ಎಲ್ಲಿಗೆ ಹೋಗುತ್ತೋ ಯಾರಿಗೂ ತಿಳಿಯುರೊಲ್ಲದು, ಇದರ ಬಗ್ಗೆ ಯಾವ ಸಮಾಚಾರವೂ ಜನತೆಗೆ ಗೊತ್ತಾಗುತ್ತಿಲ್ಲ. ಇಂತಹ ಬೇಕಾದಷ್ಟು ಸಮಸ್ಯೆಗಳಿವೆ. ಸರಕಾರಕ್ಕೆ ಯಾವುದರ ಬಗ್ಗೆ ಪತ್ರ ಬರೆದರೂ ಅದನ್ನು ಸೂಕ್ತವಾದ ರೀತಿಯಲ್ಲಿ ವಿಚಾರ ಮಾಡುತ್ತೇವೆ ಎಂದು ಒಂದು ಅಕ್ನಾಲೆಡ್ಜ್‌ಮೆಂಟು ಬರುವುದು ಬಿಟ್ಟರೆ ಮುಂದೆ ಆ ಪತ್ರ ಎಲ್ಲಿಗೆ ಹೋಗುತ್ತೋ ನನಗಂತೂ ಗೊತ್ತಾಗುತ್ತಿಲ್ಲ.

ಎಂ. ಎಲ್. ಎ. ಆದವರು ಕಾರನ್ನು ಅಲಾಟ್ ಮಾಡಬೇಕೆಂದು ಕಾಗದ ಬರೆದು ಎರಡು ಮೂರು ವರ್ಷವಾದರೂ ಕೂಡ ಅಲಾಟ್ ಮಾಡುವುದಿಲ್ಲ. ಮತ್ತು ಆ ಬಗ್ಗೆ ಯಾವ ಉತ್ತರವನ್ನೂ ಸಹ ಕೊಡುವುದಿಲ್ಲ. ಇದನ್ನು ಕರಪ್ಟ್ ಅಡ್ಮಿನಿಸ್ಟ್ರೇಷನ್ ಎಂದು ಹೇಳಬೇಕೇ ? ನಿಮ್ಮ ಪಕ್ಷದವರಿಗೆ ಯಾರು ಓಟು ಕೊಡುವುದಿಲ್ಲವೋ ಅಂತಹವರಿಗೆ ಕಾರನ್ನು ಅಲಾಟ್ ಮಾಡುವುದರಲ್ಲಿ ವಿಳಂಬವಾಗುತ್ತದೆಂದು ಕಾಣುತ್ತದೆ. ಈ ಸರ್ಕಾರದಲ್ಲಿ ರಸ್ತೆಯಲ್ಲಿ ದೊಂಬರಾಟವಾಡುವವರಿಗೆಲ್ಲಾ ಕಾರುಗಳು ಅಲಾಟ್ ಆಗುತ್ತಿದೆ. ಆದರೆ ಎಂ. ಎಲ್. ಎ. ಆದವರಿಗೆ ಅನೇಕ ವರ್ಷಗಳು ಕಳೆದರೂ ಕೂಡ ಕಾರನ್ನು ಅಲಾಟ್ ಮಾಡುವ ಸೌಜನ್ಯವನ್ನು ಈ ಸರ್ಕಾರದವರು ತೋರಿಸುತ್ತಿಲ್ಲ. ಇದು ನಿಷ್ಪಕ್ಷಪಾತವಾದ ಆಡಳಿತವೇ ಎಂದು ನಾನು ಕೇಳುತ್ತೇನೆ ? ಆಕ್ಟ್ರಾಯಿಯನ್ನು ರದ್ದು ಮಾಡಿದ್ದೀರಿ. ಇದರಿಂದ ತಾವು ಏನನ್ನು ಸಾಧನೆ ಮಾಡಿದಂತಾಯಿತು. ಈ ಮೂಲಕ ಬಡ ಜನತೆಯ ಕಣ್ಣಿಗೆ ಮಣ್ಣೆರೆಚುವುದಕ್ಕೆ ಹೊರಟಿದ್ದೀರಿ. ಆಕ್ಟ್ರಾಯಿಯನ್ನು ರದ್ದು ಮಾಡಿ ಬೇರೆ ಕರಭಾರವನ್ನು ಬಡ ಜನತೆಯ ಮೇಲೆ ಹೊರಿಸುತ್ತೀರಿ. ದೊಡ್ಡ ದೊಡ್ಡ ಔದ್ಯೋಗಿಕ ಕ್ಷೇತ್ರಗಳಿಂದ ಬರುತ್ತಿರುವ ವರಮಾನವನ್ನು ಜಾಸ್ತಿ ಮಾಡಿ ನಂತರ ಆಕ್ಟ್ರಾಯಿಯನ್ನು ರದ್ದು ಮಾಡಿದ್ದರೆ ತಮ್ಮ ಹೆಸರನ್ನು ಸ್ಮರಿಸಬಹುದಾಗಿತ್ತು. ಮತ್ತು ಈ ರಾಜ್ಯದಲ್ಲಿ ಸಿಗುವಂತಹ ಅನೇಕ ಸಾಧನ ಸಾಮಗ್ರಿಗಳನ್ನು ಉಪಯೋಗ ಮಾಡಿಕೊಳ್ಳುವ ಸಲುವಾಗಿ ದೊಡ್ಡ ದೊಡ್ಡ ಉದ್ಯಮಗಳನ್ನು ಪ್ರಾರಂಭ ಮಾಡುತ್ತೇವೆಂದು ಮಾನ್ಯ ಅರ್ಥಿಕ ಮಂತ್ರಿಗಳು ಹೇಳಿದ್ದರೆ ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರನ್ನು ಮೈಸೂರಿನ ಇತಿಹಾಸದಲ್ಲಿ ಬರೆಯಬಹುದಾಗಿತ್ತು. ಈಗಾಗಲೇ ಕರ್ನಾಟಕದ ಇತಿಹಾಸವನ್ನು ಜಿ. ಸಿ. ಹಾಲಪ್ಪನವರಿಂದ ಬರೆಸುತ್ತಿದ್ದಾರೆ. ಯಾರು ಕರ್ನಾಟಕಕ್ಕೆ ದುಡಿದಿದ್ದಾರೋ ಅಂತಹವರ ಹೆಸರನ್ನು ಬರೆಸದೆ, ಯಾರ ಹೆಸರು ಕರ್ನಾಟಕದ ಜನತೆಗೆ ಗೊತ್ತೆ ಇಲ್ಲವೋ ಅಂತಹವರನ್ನೆಲ್ಲಾ ಕರ್ನಾಟಕದ ಧುರೀಣರು ಎಂಬುದಾಗಿ ಬರೆಸುತ್ತಿದ್ದಾರೆ. ಯಾರ ಯಾರ ಹೆಸರು ಕಪ್ಪು ಪಟ್ಟಿಯಲ್ಲಿರಬೇಕಾಗಿತ್ತೋ ಅಂತಹವರ ಹೆಸರುಗಳನ್ನು ಕರ್ನಾಟಕದ ಇತಿಹಾಸದಲ್ಲಿ ಬರೆಸುತ್ತಿದ್ದಾರೆ. ರೊಕ್ಕ ಇದೆ ಎಂಬುದಾಗಿ ತಮಗಿಷ್ಟ ಬಂದಂತೆ ಸಿಕ್ಕಾಪಟ್ಟೆ ಈ ರೀತಿಯಾಗಿ ಖರ್ಚು ಮಾಡುವುದು ಸಾಧುವಾದುದಲ್ಲವೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಷ್ಟೇ ಅಲ್ಲ, ಹೂ ಈಸ್ ಹೂ (Who's Who) ನಲ್ಲಿ ಜೈಲಿಗೆ ಹೋಗದಿರುವವರೂ ಕೂಡ ಜೈಲಿಗೆ ಹೋಗಿದ್ದೇವೆಂದು ಬರೆಸಿಕೊಂಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ಅವರಿಗೇ ಬಿಟ್ಟುಬಿಡೋಣ. ಮಾನ್ಯ ರಾಮಕೃಷ್ಣ ಹೆಗಡೆ ಯವರು ತಮ್ಮ ಭಾಷಣದಲ್ಲಿ ಉದ್ಯೋಗದಂದೆಯನ್ನು ಹೆಚ್ಚಿಸುವ ಸಲುವಾಗಿ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದಾರೆ. ಯಾವ ರೀತಿ ಪ್ರೋತ್ಸಾಹ ಕೊಡುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಷೆಡ್ಯೂಲ್ ಬ್ಯಾಂಕ್‌ನಿಂದ ಸ್ವಂತ ಉದ್ಯೋಗ ಮಾಡಲು ಹಣವನ್ನು ಸಾಲವಾಗಿ ಪಡೆಯಲು ಹೋದರೆ ಸಹಕಾರಿ ಇಲಾಖೆಯ ರಿಜಿಸ್ಟ್ರಾರ್ ಅವರಿಂದ ಅನುಮತಿ ಪತ್ರ ತರಬೇಕೆಂದು ಹೇಳುತ್ತಾರೆ. ನ್ಯಾಷನಲೈಸ್ಡ್ ಬ್ಯಾಂಕ್ ನಿಂದ ಸಾಲ ತೆಗೆದುಕೊಳ್ಳುವುದಕ್ಕೂ ಕೂಡ ಈ ಸರ್ಕಾರದವರು ಅಡ್ಡಿ ಮಾಡುತ್ತಿದ್ದಾರೆ. ತಮಗೆ ಬೇಕಾದ ಜನರು ಇದ್ದರೆ ಅವರಿಗೆ ಎಲ್ಲ ಸಹಾಯವನ್ನು ಸಹ ಮಾಡುತ್ತಾರೆ. ತಮಗೆ ಬೇಕಾದವರೊಬ್ಬರಿಗೆ ಬ್ರೆಡ್ ತಯಾರು ಮಾಡಲು ಷೆಡ್ಯೂಲ್ ಬ್ಯಾಂಕ್‌ನಿಂದ 4—5 ಲಕ್ಷ ರೂಪಾಯಿಗಳವರೆಗೆ ಸಾಲಕೊಡಿಸಿದ್ದಾರೆ. ಆದರೆ ಅವರು ಆ ಹಣವನ್ನು ಬೇರೆ ಬಾಬಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಇಂದಿರಾಗಾಂಧಿಯವರು ಬಡವರನ್ನು ಉದ್ಧಾರ ಮಾಡಲು ಕೆಲವು ಯೋಜನೆಗಳನ್ನು ಜಾರಿಗೆ ತಂದರೆ ಅದನ್ನು ಇವರು ದುರುಪಯೋಗ ಮಾಡಿಕೊಂಡು ತಮಗೆ ಬೇಕಾದವರು ಹೊಟ್ಟೆಬೆಳೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ರೀತಿ ಮಾಡಿಯೂ ಕೂಡ ಇಂದಿರಾಗಾಂಧಿಯವರನ್ನು ಒಳಗೆ ಹೊರಗೆ ತೆಗಳುತ್ತಾರೆ. ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಸಹಕಾರದ ಬೆಳವಣಿಗೆಗೆ ಕೋಟ್ಯಾಂತರ ರೂಪಾಯಿಗಳನ್ನು ಸಹಕಾರಸಂಘಗಳಿಗೆ ಕೊಡುತ್ತಿದ್ದಾರೆ. ಆ ಹಣವನ್ನು ಕೂಡ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಶ್ರೀ ರಾಮೇಗೌಡರು ಚೆನ್ನಾಗಿ ನಡೆಸುತ್ತಿದ್ದ ಬ್ಯಾಂಕನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಅದೇ ಧಾರವಾಡದ ಡಿಸ್ಟ್ರಿಕ್ಟ್ ಆಯಿಲ್ ಪ್ರೊಸೆಸಿಂಗ್ ಸೊಸೈಟಿಗೆ ಬೈಲಾ ಪ್ರಕಾರ 10 ಲಕ್ಷ ರೂಪಾಯಿಗಳವರೆಗೆ ಸಾಲ ಕೊಡಬಹುದೆಂದು ಇದ್ದರೂ ಕೂಡ 25 ಲಕ್ಷ ರೂಪಾಯಿಗಳನ್ನು ಶ್ರೀಮಾನ್ ನಾಡಗೌಡರು ಫೈಲಿನಲ್ಲಿ ಬರೆದಿದ್ದಾರೆಂದು ಕೊಟ್ಟಿದ್ದಾರೆ. ಶ್ರೀ ನಾಡಗೌಡರು ಬರೆದಮಾತ್ರಕ್ಕೆ ಆರ್ಥಿಕ ಇಲಾಖೆಯವರು ಕಣ್ಣುಮುಚ್ಚಿ ಕುಳಿತುಕೊಂಡಿದ್ದರೇ ? ಈ ರೀತಿ ಹೆಚ್ಚು ಹಣ ಕೊಟ್ಟಿದ್ದು ತಪ್ಪು ಎಂದು ಪಿ. ಎ. ಸಿ. ಅವರು ಹೇಳಿದಾಗ್ಯೂ ಕೂಡ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇನ್ನು ಜನರು ಯಾವ ರೀತಿ ಈ ಸರ್ಕಾರವನ್ನು ನಂಬಬೇಕು. ಈ ಒಂದು ಸೊಸೈಟಿಗೆ ತಮಗೆ ಬೇಕಾದ ಆಫೀಸರ್‌ಗಳನ್ನೇ ನೇಮಕ ಮಾಡಿದ್ದಾರೆ. ಈ ಸೊಸೈಟಿಯವರು ಮೂರು ಲಕ್ಷ ರೂಪಾಯಿಗಳನ್ನು ಜಾಮೀನು ಕೊಡಬೇಕೆಂದು ಕಾಯಿದೆಯೊಳಗೆ ಇದ್ದರೂ ಕೂಡ ಕೊಟ್ಟಿಲ್ಲ. ಕಳೆದ ಆರು ವರ್ಷಗಳಿಂದ ಈ ಸೊಸೈಟಿಯಿಂದ ಆಗಿರತಕ್ಕಂಥ ಲಾಭವಾದರೂ ಕೂಡ ಏನು ಎಂದು ತಮ್ಮನ್ನು ಕೇಳುತ್ತೇನೆ. ಸೆಕ್ಷನ್ 54ನ್ನು ಉಪಯೋಗಿಸಿ ಸರ್ಕಾರದವರು ಈ ಸೊಸೈಟಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದಾಗಿತ್ತು. ಆದರೆ ಆ ರೀತಿ ಮಾಡಲಿಲ್ಲ. ಅದೇ ಶ್ರೀ ರಾಮೇಗೌಡರು ಚೆನ್ನಾಗಿ ನಡೆಸುತ್ತಿದ್ದ ಸೊಸೈಟಿಯನ್ನು ಸೆಕ್ಷನ್ 54ನ್ನು ಉಪಯೋಗಿಸಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದಾರೆ. ಮಂತ್ರಿಗಳು ಅಧಿಕಾರವಿದೆ ಎಂದು ತಮಗಿಷ್ಟ ಬಂದಂತೆ ನಡೆದುಕೊಳ್ಳಬಹುದು. ಆದರೆ ಮಂತ್ರಿಪದವಿ ಹೋದಾಗ ಏನು ಉತ್ತರ ಕೊಡುತ್ತಾರೋ ನೋಡೋಣ. ಇವೊತ್ತು ಪೋಲೀಸ್ ವ್ಯಾನನ್ನು ಜೊತೆಯಲ್ಲಿಟ್ಟುಕೊಂಡು ಮಂತ್ರಿಗಳು ಟೂರು ಮಾಡುತ್ತಿದ್ದಾರೆ. ಇದು ಬಹಳ ದಿವಸ ಮುಂದುವರೆಯುವುದಿಲ್ಲ. ಅಧಿಕಾರ ಎಂಬುದು ಮೂರು ದಿವಸ ಇರಬಹುದು, ಆದರೆ ನೀವು ಬರೆದಂಥ ಬರಹ ಮತ್ತು ಕೃತಿ ಬಹಳ ದಿವಸ ಇರುತ್ತದೆಂದು ತಾವು ಮರೆಯಬಾರದೆಂದು ನಮ್ರಪೂರ್ವಕವಾಗಿ ಹೇಳುತ್ತೇನೆ. ನ್ಯಾಷನಲ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ತಪ್ಪುಲೆಕ್ಕ ಕೊಟ್ಟು ಎರಡು ವರ್ಷವಾದರೂ ಕೂಡ ಇನ್ನೂ ತನಿಖೆಯಾಗಿಲ್ಲ. ಅಷ್ಟೇ ಅಲ್ಲ, ಅದೇಬ್ಯಾಂಕ್‌ಗೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ಬೇಕಾಗಿದ್ದಂಥ ಶ್ರೀ ವಾಲಿ ಎಂಬುವರನ್ನು ಮೇನೇಜಿಂಗ್ ಡೈರಕ್ಟರನ್ನಾಗಿ ನೇಮಕ ಮಾಡಿದಿರಿ. ಇಲ್ಲಿ ನಾಲ್ಕೈದು ಜನ ಶೇಂಗಾ ಎಣ್ಣೆ ಮತ್ತು ಕುಸುಬಿ ಎಣ್ಣೆ ಎವಾಪರೇಟ್ ಆಯಿತು ಎಂದು ಹೇಳಿದ್ದನ್ನು ಕೂಡ ಸರ್ಕಾರದವರು ಒಪ್ಪಿದ್ದಾರೆ. ಆ ಬಗ್ಗೆ ಯಾರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಅದೇ ಶ್ರೀ ರಾಮೇಗೌಡರು ಅಧ್ಯಕ್ಷರಾಗಿದ್ದ ಬೆಂಗಳೂರು ಡಿಸ್ಟ್ರಿಕ್ಟ್ ಕೊ-ಆಪರೇಟೀವ್ ಬ್ಯಾಂಕ್ ಉತ್ತಮವಾಗಿ ಕೆಲಸ ಮಾಡುತ್ತಿದ್ದರೂ ಕೂಡ, ಮಾದರಿಯಾದ ಬ್ಯಾಂಕ್ ಆಗಿ ಕೆಲಸ ಮಾಡುತ್ತಿದ್ದರೂ ಕೂಡ 54ನೇ ಸೆಕ್ಷನ್ ಲಾಗೂ ಮಾಡಿ ಅದನ್ನು ರದ್ದು ಮಾಡಿದ್ದೀರಿ. ಮಂಗನಿಗೆ ಸಾರಾಯಿ ಕುಡಿಸಿದಂತೆ ನೀವು ಹೇಳಿದಂತೆ ಕೆಲಸ ಮಾಡುವವರ ಬಗ್ಗೆ ಯಾವ ಕ್ರಮವನ್ನು ಸಹ ತೆಗೆದುಕೊಳ್ಳುವುದಿಲ್ಲ. ಇಲ್ಲವಿದ್ದರೆ ತಮಗೆ ಇಷ್ಟ ಬಂದಂತೆ ನಡೆದುಕೊಳ್ಳುತ್ತೀರಿ. ಶ್ರೀಮಾನ್ ಜಮಖಂಡಿಮಠ್ ಅವರು ರಿಜಿಸ್ಟ್ರಾರ್ ಆದ ಮೇಲೆ ನಡೆಯಬಾರದ್ದು ನಡೆದಿವೆ. ಇವರು ಯಾವುದೋ ಚಾರಿಟಿ ಎಂಡೋಮೆಂಟ್‌ಗೆ ಹಣ ಕೊಟ್ಟಿದ್ದಾರೆ. ಅಲ್ಲಿ ಬಂಗಾರ ಬೆಳೆಯುತ್ತಾರೋ ಏನೋ ಗೊತ್ತಿಲ್ಲ. ಇವರು ಶ್ರೀಮಾನ್ ನಾಡಗೌಡರನ್ನು ಕೂಡ ಕೆಡಿಸಿದರು. ಬಿಜಾಪುರದಿಂದ ಇಂದಿರಾಗಾಂಧಿಯವರ ಕಡೆಯ ಪಾರ್ಟಿಯವರು ಲೋಕಸಭೆಗೆ ಪ್ರಚಂಡ ಜಯ

ದಿಂದ ಆರಿಸಿ ಬಂದಿದ್ದ ಶ್ರೀಮಾನ್ ನಾಡಗೌಡರ ಪರಮಕೃತ್ಯದಿಂದಲೇ ಎಂದು ಹೇಳಬಹುದು. ಅದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಮ್ಮ ಭಾಷಣದಲ್ಲಿ ಯುವಜನರ ಬಗ್ಗೆ ಅನೇಕ ಯೋಜನೆಗಳನ್ನು ಕೈಕೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಅವರ ಮಾತು ಬಹಳ ಸರಳವಾಗಿರುತ್ತದೆ. ಆದರೆ ಕೃತಿಯಲ್ಲಿ ಯಾವುದೂ ಬರುವುದಿಲ್ಲ. ಯುವಕರ ಸಂಘಟನೆ ಮಾಡುವುದಾಗಿ ಹೇಳಿದ್ದಾರೆ. ಸಂಘಟನೆ ಹೋಗಿ ಮತ್ತೆ ಯಾವುದೋ ಆಗುತ್ತಿದೆ. ಯುವಕರ ಕಲ್ಯಾಣಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಯುವಕರು ಮನರಂಜನೆಗಾಗಿ ಯೂನಿಯನ್‌ಗಳನ್ನು ಸ್ಥಾಪನೆ ಮಾಡಿ ಕೊಳ್ಳುತ್ತಾರೆ. ಅದರಲ್ಲಿ 4—5 ಜನ ಕುಣಿಯುವವರು ಇರುತ್ತಾರೆ. ಸಹಕಾರದ ಬಗ್ಗೆ ವ್ಯಾಖ್ಯಾನ ಮಾಡುತ್ತಾರೆ. ಆದರೆ ಈ ಯುವಕರು ಸಹಕಾರದ ನಡೆನುಡಿಗಳನು ಮರೆತಿದ್ದಾರೆ. ಈ ಯುವಕರು ಅನೀತಿಯುತವಾದಂಥ ಮನರಂಜನೆಯನ್ನು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಕೊಡು ತ್ತಿದ್ದಾರೆ. ಇದು ಒಳ್ಳೆಯ ನಡೆನುಡಿ ಹೇಗೆ ಆಗುತ್ತದೆ ? ಇದರಿಂದ ಜನರಿಗೆ ಒಳ್ಳೆಯ ಮಾರ್ಗ ದರ್ಶನ ಸಿಗುತ್ತದೆಯೇ ? ನಿಮ್ಮ ಅಧಿಕಾರಿಗಳು ಮುನಿಸಿಪಲ್ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದಾರೆ. ಅದಕ್ಕೆ ಯಾರು ಜವಾಬ್ದಾರರು ಎಂದು ಕೇಳಿದರೆ, ಡಿವಿಜನಲ್ ಕಮಿಷನರ್ ಎಂದು ಹೇಳಿದ್ದಾರೆ. ಇದೆಯೋ ನಿಮ್ಮ ಜನರಲ್ ಅಡ್ಮಿನಿಸ್ಟ್ರೇಷನ್ ? 5 ವರ್ಷಗಳಿಂದ ಅಲ್ಲಿ ಚುನಾವಣೆ ನಡೆಸುವುದಕ್ಕೆ ಲಾಯಕ್ಕಿಲ್ಲದ ಸರ್ಕಾರ ಏಕೆ ಇರುವುದು ? ನೀವು ಒಂದು ನಿಮಿಷ ಕೂಡ ಅಧಿಕಾರದಲ್ಲಿರಲು ಲಾಯಕ್ಕಿಲ್ಲ. ಇದಕ್ಕೆ ನೀವು ಯಾವ ಬಾಯಿಂದ ಉತ್ತರ ಕೊಡುತ್ತೀರಿ ? ಅದೇ ನಗರದಲ್ಲಿ ಬಡವರಿಗೆ ಸ್ವಲ್ಪ ಜಾಗ ಕೊಡಿ ಎಂದು ಕೇಳಿದರೆ, ಕೊಡಲಿಲ್ಲ. ಆದರೆ ಅದೇ ಜಾಗವನ್ನು ಮಾನ್ವಿ ಬ್ರದರ್ಸ್‌ಗೆ ಕೊಟ್ಟಿದ್ದಾರೆ. ಅವೇ ಮಾನ್ವಿ ಬ್ರದರ್ಸಿಗೆ ಎರೆಕ್ಟ್ರಿಸಿಟಿ ಕಂಟ್ರಾಕ್ಟ್ ಕಾಲಾವಧಿ ಮುಗಿದರೂ, ಪುನಃ 7 ವರ್ಷದ ಅವಧಿಯನ್ನು ಮುಂದುವರಿಸಬೇಕೆಂದು ಇದ್ದಾರೆ. ಅಲ್ಲಿ ಟಾಂಗಾದವರಿಗೆ ಬೇಕಾಗಿದ್ದ ಒಂದು 3-4 ಲಕ್ಷ ರೂಪಾಯಿ ಬೆಲೆ ಬಾಳುವ ಜಾಗವನ್ನು ತಮಗೆ ಬೇಕಾದವರಿಗೆ 3–4 ಸಾವಿರ ರೂಪಾಯಿಗೆ ಮುನಿಸಿಪಾಲಿಟಿ ಅಡ್ಮಿನಿಸ್ಟ್ರೇಟರ್ ಮೂಲಕ ಕೊಡಿಸಿ ದ್ದಾರೆ. ಇದರ ಮೇಲೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುವ ಹಾಗಿಲ್ಲ; ಮತ್ತು ಕೋರ್ಟಿಗೆ ಕೂಡ ಅದರಲ್ಲಿ ಜುರಿಸ್‌ಡಿಕ್ಷನ್ ಇಲ್ಲವೆಂದು ಹೇಳುತ್ತಾರೆ.

5–30 P.M.

ಅಲ್ಲದೆ ಕುರ್ತುಕೋಟಿ ಎಂಬ ಹಳ್ಳಿಯಲ್ಲಿ 3800 ಜನ ಮತದಾರರು ಇದ್ದಾರೆ. ಅದರಲ್ಲಿ 3600 ಮತ ನಮ್ಮ ಪಕ್ಷಕ್ಕೆ ಬಂದಿದೆ. ಅಲ್ಲಿಯ ಚುನಾವಣೆಯಲ್ಲಿ ಇವರ ಪಕ್ಷ ಗೆಲ್ಲಲಿಲ್ಲವೆಂದು ಅಲ್ಲಿ ಪುನಿಟಿವ್ ಪೋಲಿಸ್ ಹಾಕಿದ್ದಾರೆ. ಅಲ್ಲಿಯ ಟಿ ಡಿ ಬಿ ಪ್ರೆಸಿಡೆಂಟ್ ಇವರ ಪಕ್ಷದಲ್ಲಿರುವಾಗ ಸುಮ್ಮನಿದ್ದರು. ಅವರು ಇವರ ಪಕ್ಷ ಬಿಟ್ಟು ನಮ್ಮ ಪಕ್ಷದಲ್ಲಿ ಚುನಾವಣೆಯಲ್ಲಿ ನಿಂತು ಇವರ ಪಕ್ಷದವರನ್ನು ಸೋಲಿಸಿದ್ದಾರೆ. ಅದಕ್ಕೋಸ್ಕರ ಏನಾದರೂ ಮಾಡಿ ಅವರ ಮೇಲೆ ಕೇಸ್ ಮಾಡಿ ಅವರನ್ನು ಜಿಲ್ಲೆಯ ಹೊರಗೆ ಹಾಕಬೇಕೆಂದು ಆರ್ಡರ್ ಮಾಡಿಸಿದ್ದಾರೆ. ಅದರ ಪ್ರಿಲಿಮಿನರಿ ಆರ್ಡರ್ ಆಗಿದೆ. ಅದಕ್ಕೆ ನೇರವಾಗಿ ಮಂತ್ರಿಯವರಿಂದ ಟೆಲಿಫೋನ್ ಎಲ್ಲಾ ಬಂದಿದೆ. ಇದಕ್ಕೆ ಅಧಿಕಾರಿಗಳು ಏನು ಮಾಡುವುದಕ್ಕಾಗುತ್ತದೆ ? ಈ ರೀತಿ ನಮ್ಮ ಪ್ರಜಾಪ್ರಭುತ್ವದಲ್ಲಿ ನಡೆಯು ವುದಾದರೆ, ಇದಕ್ಕೆ ನಾವು ಪ್ರಜಾಪ್ರಭುತ್ವವೆಂದು ಕರೆಯಬೇಕೇ ? ಅಥವಾ ರಾಮರಾಜ್ಯ ಎನ್ನಬೇಕೇ ? ಅಥವಾ ಕಾಮರಾಜ್ಯ ಎನ್ನಬೇಕೆ ? ಇದಕ್ಕೆ ಯಾವ ರೀತಿ ಕರೆಯಬೇಕೆಂದು ತಮ್ಮನ್ನು ನಾನು ಕೇಳುತ್ತಿದ್ದೇನೆ.

ಇನ್ನೊಂದು ಮಾತು. ನಿನ್ನೆ ಕಾನ್ಸಿಪಿರೆಸಿ ಎಂಬ ಪದ ಉಪಯೋಗಿಸಿದಾಗ, ಅದು ಉಪಯೋಗಿಸಬಾರದಿತ್ತು ಎಂದೆನಿಸಿತ್ತು. ಆದರೆ ಇವತ್ತು ನಾನು ವಿಚಾರ ಮಾಡಿದ ಮೇಲೆ ಅದು ಸರಿ ಎಂದೆನಿಸಿ ಕಂಡುಬಂತು. ಏಕೆಂದರೆ. ಮಂತ್ರಿಮಂಡಲದವರು ನೇಮಿಸಿದ ಅಧಿಕಾರಿಗಳು ಹಳ್ಳಿಗಳಿಗೆ ಹೋಗುವಾಗ ಏನು ಮಾಡುತ್ತಾರೆಂದು ಹೇಳುತ್ತೇನೆ. ನಮ್ಮ ಸೊಸೈಟಿಯೊಳಗೆ ಡಿಪ್ಯೂಟಿ ಕಮಿಷನರ್, ಮತ್ತಿತರ ಆಫೀಸರ್ಸ್ ನನ್ನ ಅಧ್ಯಕ್ಷನಾಗಿ ಆರಿಸಿದರು. ಅಲ್ಲಿ ಕಡಿ ಎಂಬ ತಹಸೀಲ್ದಾರರು ಬಂದಿದ್ದು ಓಟ್ ಮಾಡಿದ್ದರು. ನಾನು ಮತ ಎಣಿಕೆ ಮಾಡುವಾಗ ಎಲ್ಲ ಕೈ ಎಣಿಸಿದೆ. ಆದರೆ ಅಲ್ಲಿ ಕೆಲವರು ತಕರಾರು ಮಾಡಿದುದರಿಂದ ಪುನಃ ಎಣಿಕೆ ಮಾಡಬೇಕಾಯಿತು. ಆಗ ಈ ಕಡಿ ಎಂಬ ತಹಶೀಲ್ದಾರರು ಅದರ ಸದಸ್ಯರಾಗಿರಲಿಲ್ಲ. ಅವರು ನೈತಿಕ ದೃಷ್ಟಿಯಿಂದ ಈ ರೀತಿಯ ತಪ್ಪು ಮಾಡಿದ್ದಾರೆ. ನನಗನಿಸುತ್ತದೆ ಏನೆಂದರೆ, ಈ ರೀತಿಯ ತಪ್ಪು ಮಾಡಿದ್ದಕ್ಕೆ ರೆವೆನ್ಯೂ ಮಂತ್ರಿಯವರು ಅವರನ್ನು ಹಾಗೆ ಬಿಡುತ್ತಿರಲಿಲ್ಲ. ಆದರೆ ಇವರ ಮಂತ್ರಿಮಂಡಲ ಉಳಿಯ ಬೇಕಾದರೆ, ಅಂಥವರ ಮೇಲೆ ಇವರು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದೇ ರೀತಿ

(ಶ್ರೀ ಕೆ. ಎಚ್. ಪಾಟೀಲ್)

ರಾಜ್ಯದಲ್ಲಿ ಬೇಡವಾದ ಕೆಲಸಗಳನ್ನು ಇವರು ಮಾಡುತ್ತಿದ್ದಾರೆ. ಮಾನ್ಯ ತಿಮ್ಮೇಗೌಡರನ್ನು ಚುನಾವಣೆಗೆ ನಿಲ್ಲಿಸಿ ಸೋಲಿಸಿದರು, ಅವರು ತಮ್ಮ ಚೇರ್‌ಮನ್‌ಶಿಪ್ಪನ್ನೂ ಕಳಕೊಂಡರು. ಅಲ್ಲಿ ಈಗ ಅಗಡಿ ಸಂಗಣ್ಣನವರನ್ನು ನೇಮಿಸಿದ್ದಾರೆ.

ಅಷ್ಟೇ ಅಲ್ಲದೆ ಎಲೆಕ್ಟ್ರಿಸಿಟಿ ಬೋರ್ಡಿಗೆ ಚೇರ್‌ಮನ್‌ನಾಗಿ ಇವರ ಆಪ್ತರಾದ ಚಂದಪ್ಪ ಪಾಟೀಲರನ್ನು ನೇಮಕ ಮಾಡಬೇಕೆಂದು ಇದ್ದಾರೆ. ಆದರೆ, ಬೇರೆ ಯಾರನ್ನೂ ಇವರಿಗೆ ಮಾಡಲು ಮನಸ್ಸಿಲ್ಲ. ಅವರನ್ನು ಇಂಡಸ್ಟ್ರೀಸ್ ಸೆಕ್ರೆಟರಿಯಾಗಿ ಪ್ರೊಮೋಷನ್ ಮಾಡಿದ್ದರು. ಪುನಃ ಅವರು ರಿಟೈರ್ ಆದಮೇಲೆ ಇಲೆಕ್ಟ್ರಿಸಿಟಿ ಬೋರ್ಡ್ ಚೇರ್‌ಮನ್ ಮಾಡಬೇಕೆಂದಿದ್ದಾರೆ. ಅಂದರೆ, ನಿಮಗೆ ಬೇರೆ ಯಾರೂ ಸಿಗುತ್ತಿಲ್ಲವೇ! ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಮೊದಲು ಯಾರು ಚೇರ್‌ಮನ್ ಆಗಿದ್ದರು, ಎರಡನೆಯ ಚೇರ್‌ಮನ್ ಯಾರನ್ನು ಮಾಡಿದರು, ಮೂರನೆಯ ಚೇರ್‌ಮನ್ ಯಾರನ್ನು ಮಾಡಿದ್ದಾರೆ ಎಂದು ಎಲ್ಲಾ ತನಿಖೆ ಮಾಡಿದರೆ, ಇವರ ಸರ್ಕಾರ ಜಾತ್ಯಾತೀತ ಸರ್ಕಾರವೆಂದು ಹೇಳುವುದಕ್ಕಾಗುತ್ತದೆಯೇ? ನಾನು ಜಾತಿಯ ಆಧಾರದ ಮೇಲೆ ಮಾತನಾಡುತ್ತೇನೆಂದು ಯಾರೂ ಭಾವಿಸಬಾರದು. ನಿಮ್ಮಲ್ಲಿ ನೀತಿ ದೂರವಾಗಿದೆ; ನೀವು ಕೇವಲ ನಟನೆ ಮಾಡುತ್ತಿದ್ದೀರಿ. ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದಂತೆ ನೀವು ಮಾಡುತ್ತಿದ್ದೀರಿ. ಆದರೆ ಅದನ್ನು ಜಗತ್ತೆಲ್ಲಾ ನೋಡುತ್ತದೆ ಎಂಬುದನ್ನು ಮರೆಯಬಾರದು.

ಅದೇ ರೀತಿ ಬಿಜಾಪುರ ಜಿಲ್ಲೆಯಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಅಲ್ಲಿ ಪ್ರತಿಯೊಂದು ಪ್ರೈಮರಿ ಟೀಚರ್ಸಿಗೂ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಈ ಯುವಕರು ಸಹಕಾರದ ಹೆಸರನ್ನು ಕೆಡಿಸುತ್ತಿದ್ದಾರೆ. ಆದಕ್ಕಾಗಿ ನಾನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಒಂದು ಮಾತು ಹೇಳುತ್ತೇನೆ. ಅವರು ಈ ಅಧಿಕಾರದಲ್ಲಿ 15 ದಿವಸ ಇರಲಿ, 9 ತಿಂಗಳು ಇರಲಿ ಅಥವಾ 11 ತಿಂಗಳು ಇರಲಿ, ಅವರು ಅಧಿಕಾರದಲ್ಲಿ ಇರುವ ತನಕ ಅವರ ಅವಧಿಯನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳಲಿ ಎಂದು ನಾನು ಹೇಳುತ್ತೇನೆ. ನೀವು ಜನತೆಗೆ ಏನು ವಚನ ಕೊಟ್ಟು ಬಂದಿದ್ದೀರಿ, ? ಸಹಕಾರ ಸಚಿವನಾದರೆ ಸಹಕಾರ ಖಾತೆಯನ್ನು ಪುನೀತವನ್ನಾಗಿ ಮಾಡುತ್ತೇನೆ ಎಂದು ಚುನಾವಣೆಯ ಸಮಯದಲ್ಲಿ ಜನತೆಗೆ ವಚನ ಕೊಟ್ಟು ಬಂದಿದ್ದೀರಿ. ಆದರೆ ಆ ರೀತಿ ನೀವು ನಡೆದುಕೊಂಡಿದ್ದೀರಾ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ರಾಣೆಬೆನ್ನೂರು ಸೊಸೈಟಿ ಇಲ್ಲಿಯತನಕ ಚಲೋ ಇತ್ತು. ಆದರೆ ಈಗ ಅಲ್ಲಿಯವರು ಚುನಾವಣೆಯಲ್ಲಿ ನಿಮ್ಮ ಪಕ್ಷದವರಿಗೆ ಓಟು ಹಾಕುವುದಿಲ್ಲ ಎಂದು ಹೇಳಿದಮೇಲೆ ಅದು ಕೆಟ್ಟು ಹೋಯಿತೇ? ಆ ಸೊಸೈಟಿಗೆ ಸಂಬಂಧಪಟ್ಟ ಎಲ್ಲಾ ಆರ್ಡರುಗಳನ್ನೂ ಪೆಂಡಿಂಗ್‌ನಲ್ಲಿ ಏತಕ್ಕೆ ಇಟ್ಟಿದ್ದೀರಿ? ಹೊಳೆದಾಟಿದ ಮೇಲೆ ಅಂಬಿಗನ ಮಿಂಡ ಎಂದು ಹೇಳುವುದಕ್ಕೆ ನೀವು ಹೊರಟಿದ್ದೀರಿ. ನೀವು ಕೂಲಂಕಷವಾಗಿ ಆಲೋಚನೆ ಮಾಡಿ, ನೀವು ದುರಹಂಕಾರದಿಂದ ತಪ್ಪು ಹಾದಿಯಲ್ಲಿ ಹೋಗುತ್ತಿದ್ದೀರಿ. ಅದಕ್ಕೋಸ್ಕರವೇ ಲೋಕಸಭೆಯ ಚುನಾವಣೆಯಲ್ಲಿ 27 ಕ್ಕೆ 27 ಸೀಟುಗಳೂ ಕಾಂಗ್ರೆಸ್ (ಆರ್) ಪಕ್ಷಕ್ಕೆ ಬಂದಿವೆ. ನೀವು ಜನತೆಯ ಪ್ರೇಮವನ್ನು ಕಳೆದುಕೊಂಡಿದ್ದೀರಿ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಮುಂದೆ ಬರಬೇಕೆಂದು ಇಲ್ಲಿ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಹೊರಗಡೆಯವರನ್ನು ಕರೆಯುತ್ತೀರಿ, ಆದರೆ, ನಮ್ಮ ರಾಜ್ಯದವರೇ ಆದ ಶ್ರೀಮಾನ್ ಪಂಚಗಾವಿಯವರು ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಲೈಸೆನ್ಸ್ ಕೊಡಿ ಎಂದು ಕೇಳಿದರೆ ಅದಕ್ಕೆ ನೀವೇಕೆ ಶಿಫಾರಸ್ಸು ಮಾಡಲಿಲ್ಲ? ನಾವು ಸಮಾಜವಾದವನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತೀರಿ, ಆದರೆ ನಮ್ಮ ರಾಜ್ಯದ ಸಹಕಾರಿ ಹಿತೈಷಿಗಳಿಗೆ ನೀವು ಪ್ರೋತ್ಸಾಹವನ್ನು ಕೊಡುವುದಿಲ್ಲ. ಹೊರಗಡೆಯವರನ್ನು ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು ಆಹ್ವಾನ ಮಾಡುತ್ತೀರಿ ಇದು ಸರಿಯೇ? ಇವೊತ್ತಿನ ದಿವಸ ಮಾನ್ಯ ಹಣಕಾಸಿನ ಮಂತ್ರಿಗಳಾದ ರಾಮಕೃಷ್ಣಹೆಗಡೆಯವರು ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಉಂಟಾದಂತಹ ಪರಿಣಾಮವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಬಜೆಟ್ಟನ್ನು ತಯಾರು ಮಾಡಿದ್ದಾರೆ. ಇವೊತ್ತು ಅನೇಕ ಸಂದರ್ಭಗಳಲ್ಲಿ ಶ್ರೀಮಾನ್ ಹೆಗಡೆಯವರು ಜನತೆಯ ಮನಸ್ಸನ್ನು ತಮ್ಮ ಕಡೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. 10 ಎಕರೆ ಕೆಳಗಡೆ ಜಮೀನಿರತಕ್ಕವರಿಗೆ ಭೂಕಂದಾಯವನ್ನು ತೆಗೆಯುತ್ತೇವೆ ಎಂದು ಹೇಳಿದ್ದಾರೆ. ಮತ್ತು ಒಂದು ವೇಳೆ ಭೂಕಂದಾಯವನ್ನು ತೆಗೆಯುತ್ತೇವೆ ಎಂದು ಹೇಳಿದರೂ ಕೂಡ ಅದನ್ನು ಮತ್ತೊಂದು ರೂಪದಲ್ಲಿ ಹಾಕುತ್ತೇವೆ ಎಂದು ಹೇಳಿದ್ದಾರೆ. ತಾವು ಏತಕ್ಕೆ ಆ ರೀತಿ ಮಾಡುತ್ತೀರಾ! ಒಂದು ಕಡೆ ಸಬ್ಸಿಡಿ ಕೊಡುವುದು ಮತ್ತೊಂದು ಕಡೆಯಿಂದ ಪೀನಲ್ ಇಂಟರೆಸ್ಟ್ ಹಾಕುವುದು, ಇದರಿಂದ ಏನು ಪ್ರಯೋಜನ! ನಮಗೆ ಹಣದ ಕೊರತೆ ಇದೆ, ನಾವು

ಮಂತ್ರಿಗಳ ಪಗಾರ ಜಾಸ್ತಿ ಮಾಡಿಕೊಳ್ಳಬೇಕು, ಮಂತ್ರಿಗಳ ಮನೆಗಳಿಗೆ ನೆಲಕ್ಕೆ ಜಾರ್ಜೆಟ್ ಜಂಖಾನ ಹಾಸಬೇಕು, ಇನ್ನೂ ಜಾಸ್ತಿ ಖರ್ಚು ಬರುತ್ತದೆ, ಆದ್ದರಿಂದ ನಮಗೆ ಹೆಚ್ಚು ಹಣಬೇಕು ನಮ್ಮಲ್ಲಿ ಹಣವಿಲ್ಲ, ಆದ್ದರಿಂದ ನಾವು ಭೂಕಂದಾಯವನ್ನು ತೆಗೆಯುವುದಿಲ್ಲ ಎಂದು ಹೇಳಿ. ನೀವು ದುಂದು ವೆಚ್ಚ ಮಾಡಿ ಸರ್ಕಾರದ ಬೊಕ್ಕಸವನ್ನು ಬರಿದು ಮಾಡಿ ಬಡಬೋರೇಗೌಡನ ವೋಟನ್ನು ತೆಗೆದುಕೊಂಡು ಅವನ ಕಣ್ಣಿಗೆ ಸುಣ್ಣ ಹಚ್ಚಬೇಡಿ. ಲ್ಯಾಂಡ್ ರೆವಿನ್ಯೂ ಅನ್ನು ತೆಗೆಯುತ್ತೇವೆ ಎಂದು ನೀವು ಹಿಂದೆಯೇ ವಚನ ಕೊಟ್ಟಿದ್ದೀರಿ, ಅದರಂತೆ ಪೂರ್ಣವಾಗಿ ಭೂಕಂದಾಯವನ್ನು ವಜಾ ಮಾಡಿ. ಅದಕ್ಕೆ ಬದಲಾಗಿ ನೀವೇನಾದರೂ ಇನ್‌ಕಂಟ್ಯಾಕ್ಸ್ ತಂದರೆ ಜನತೆಗೆ ಬಹಳ ಅನ್ಯಾಯ ಮಾಡುತ್ತೀರಿ. ಒಂದು ಕಡೆ ಸೋಷಿಯಲಿಜಂ ತರುತ್ತೇವೆ ಎಂದು ಹೇಳುತ್ತೀರಿ, ಮತ್ತೊಂದು ಕಡೆ ಜನತೆಗೆ ಕರಭಾರ ಹೊರಿಸುತ್ತೀರಿ. ಈಗ ಸ್ವತಂತ್ರ ಪಕ್ಷದವರೂ ಕೂಡ ಸೋಷಿಯಲಿಜಂ ಹೇಳುವುದಕ್ಕೆ ಹೊರಟಿದ್ದಾರೆ. ಸೋಸಲಿಜಂ ಹೇಳದೇ ಇರುವವರು ಯಾರೂ ಇಲ್ಲ. ಆದ್ದರಿಂದ ನಿಜವಾದ ಸೋಷಿಯಲಿಜಂ ಏನಾಗಬೇಕು ಎಂಬುದರ ಕಡೆ ಗಮನ ಕೊಡಿ. ಇಂಡಸ್ಟ್ರಿಯಲೈಜೇಷನ್ ಮಾಡುತ್ತೇವೆ ಎಂದು ಹೇಳುತ್ತೀರಿ. ಯಾವ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದೀರಿ? ಸಕ್ಕರೆ ಕಾರ್ಖಾನೆಯನ್ನು ತೆಗೆಯುವುದಕ್ಕೆ ಸಹಕಾರ ಕೊಟ್ಟಂಥವರ ಕೈ ತಪ್ಪಿಸಿ ಅದನು ಬೇರೆಯವರ ಕೈಯ್ಯಲ್ಲಿ ಕೊಟ್ಟಿದ್ದೀರಿ. ಈ ಸಹಕಾರಿ ರಂಗದಲ್ಲಿ ಬೇಕಾದಷ್ಟು ತಪ್ಪು ನೆಪುಗಳಾದಾಗ್ಯೂ ಅವುಗಳನ್ನು ಸರಿಪಡಿಸತಕ್ಕ ಶಕ್ತಿ ನಿಮಗೆ ಇಲ್ಲ. ಗದುಗಿನಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡುತ್ತೇವೆ, ಅದಕ್ಕೆ ಪರವಾನಿಗೆ ಕೊಡಿ ಎಂದು ಕೇಳಿ 3 1/2 ವರ್ಷಗಳಾದುವು. ಅದಕ್ಕೆ ಸಂಬಂಧಪಟ್ಟ ಫೈಲೇ ಮೂವ್ ಆಗುವುದಿಲ್ಲ. ಕೆಲಸಗಳು ಆಗುವುದಕ್ಕೆ ಬೆಣ್ಣೆ ಹಚ್ಚಬೇಕೋ ಅಥವಾ ರೊಕ್ಕ ಕೊಡಬೇಕೋ ಗೊತ್ತಿಲ್ಲ. ಮಂತ್ರಿಗಳಿಗೆ ಪತ್ರವನ್ನು ಬರೆದರೂ ಕೂಡ ಅವರಿಂದ ಉತ್ತರ ಬರುವುದಿಲ್ಲ. ಈ ಸಹಕಾರಿ ರಂಗದಲ್ಲಿ ಶ್ರೀಮಾನ್ ನಾಡಗೌಡರು ಮಾಡಿದಂತಹ ಪಾಪವನ್ನು ನನ್ನ ಸ್ನೇಹಿತರಾದ ಬಿ. ಎಲ್. ಗೌಡರು ತೊಳೆಯುವುದಕ್ಕೆ ಮುಂದೆ ನಿಂತಿದ್ದಾರೆ. ಇವರಿಗೆ ವಿರೋಧವಾಗಿರುವವರಿಗೆ ಯಾವುದೇ ಕಡೆಯುಲ್ಲಾಗಲಿ ಸೊಸೈಟಿಯಲ್ಲಿ ಅಧಿಕಾರವನ್ನು ನಡೆಸಬಾರದು ಎಂದು ರಿಜಿಸ್ಟ್ರಾರ್ ಕಡೆಯಿಂದ ಸೊಸೈಟಿಗಳನ್ನು ಸೂಪರ್ ಸೀಡ್ ಮಾಡುವಂತಹ ಆರ್ಡರುಗಳನ್ನು ಮಾಡಿಸುತ್ತಿದ್ದಾರೆ. ಅವರು ಅಪೀಲು ಹೋಗುವುದಕ್ಕೆ ಕೂಡ ಅವಕಾಶ ಕೊಟ್ಟಿಲ್ಲ. ಇದು ಯಾವ ಧರ್ಮ ? ಇವರ ನೇತೃತ್ವದಲ್ಲಿ ಅಡ್ಮಿನಿಸ್ಟ್ರೇಷನ್ ಯಾವರೀತಿ ನಡೆದಿದೆ ಎಂಬುದನ್ನು ನೋಡುವುದಾದರೆ ಕೋರ್ಟಿನಲ್ಲಿ ಅಧಿಕಾರಿಗಳಾಗಿರತಕ್ಕವರೊಬ್ಬರಿಗೆ ಆರ್ಬಿಟ್ರೇಟರ್ ಆಗುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಅವರು ಡಿಸ್‌ಮಿಸ್ ಆಗದೇ ಇರುವುದು ಸುದೈವ. ಈ ಸರ್ಕಾರ ಭ್ರಷ್ಟಾಚಾರದ ಮಂತ್ರಿಮಂಡಲ ಇರುವುದರಿಂದ ಅವರು ಡಿಸ್‌ಮಿಸ್ ಆಗದೇ ನಿವೃತ್ತರಾಗಿದ್ದಾರೆ. ಅವರು ಯಾರು ಎಂದರೆ ಶ್ರೀಮಾನ್ ಪಿ. ಜಿ. ಶೆಟ್ಟರು. ಅವರು ಆರ್ಬಿಟ್ರೇಟರ್ ಲಿಸ್ಟಿನಲ್ಲಿದ್ದಾರೆ. ಇದು ಸರಿಯೇ ?

ನಾನು ತಮಗೆ ಇನ್ನೊಂದು ವಿಚಾರವನ್ನು ಹೇಳುತ್ತೇನೆ ಅದೇನೆಂದರೆ ಗದುಗಿನ ನಗರ ಸಭೆಗೆ ತನ್ನ 100 ವರ್ಷಗಳ ಅವಧಿಯಲ್ಲಿ ಒಂದು ವರ್ಷವೂ ಅದಕ್ಕೆ ಕೆಟ್ಟ ಹೆಸರು ಬರಲಿಲ್ಲ. ಅದು ನಿಷ್ಕಳಂಕ ಇತಿಹಾಸಹೊಂದಿದೆ. ಅಂಥಾದನ್ನು ಈ ಸರ್ಕಾರ ತನ್ನ ಕೈಯ್ಯಲ್ಲಿ ಇಟ್ಟುಕೊಂಡಿದೆ. ಈ ನಗರ ಸಭೆಗೆ 5—6 ವರ್ಷಗಳಾದರೂ ಚುನಾವಣೆ ಮಾಡುವುದಕ್ಕೆ ಇವರ ಕೈಯ್ಯಲ್ಲಿ ಸಾಧ್ಯವಾಗಿಲ್ಲ. ಈ ಮುನಿಸಿಪಾಲಿಟಿ ವತಿಯಿಂದ ಕೋಟ್ಯಾಂತರ ರೂಪಾಯಿಗಳನ್ನು ಮುಂಜೂರು ಮಾಡಿ ಅದನ್ನು ನೀರಿನ ಪೈಪುಹಾಕುವ ಯೋಜನೆಯಲ್ಲಿ ತೊಡಗಿಸಿದ್ದಾರೆ. ಇದು ಎಲ್ಲಾ ಕಾಯಿದೆ ಕಾನೂನುಗಳನ್ನು ಮೀರಿದೆ. ಅಡ್ಮಿನಿಸ್ಟ್ರೇಟರಿಗೆ ಹೇಳಿದರೆ, ಎಂ.ಎಲ್.ಎ.ಗೆ ಹೇಳಿ ಎಂದು ಹೇಳುತ್ತಾರೆ. ಅವರು ಮಂತ್ರಿಗಳ ಕೈಯಿಂದ ಆ ಕೆಲಸ ಹೇಗೋ ಮಾಡಿಸಿಬಿಡುತ್ತಾರೆ. ಮಾನ್ಯ ಶ್ರೀ ಶಂಕರಗೌಡರು ಒಂದು ನಿರ್ದಿಷ್ಟವಾದ ಒಂದು ಪ್ರೋಗ್ರಾಂನ್ನು ಹಾಕಿಕೊಳ್ಳಲಿ. ಇಲ್ಲದೇ ಇದ್ದರೆ ಸರಿಯಾಗಿ ಕೆಲಸಗಳು ಪ್ರಗತಿಯಾಗುವುದಿಲ್ಲ. ಈಗ ಸ್ಕೂಲು ಬೋರ್ಡ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದರಲ್ಲಿ ಎಂ.ಎಲ್.ಎ.ಗಳು ಸದಸ್ಯರಾಗಿರಬೇಕು. ಅದನ್ನು ಮಾಡಲಿಲ್ಲ. ಇನ್ನೆಷ್ಟು ದಿವಸಗಳಲ್ಲಿ ಅದನ್ನು ಮಾಡುತ್ತಾರೋ ಗೊತ್ತಿಲ್ಲ. ಅವರ ಕಣ್ಣು ದೃಷ್ಟಿ ಇದರ ಮೇಲೆ ಯಾವಾಗ ಬೀಳುತ್ತದೋ ಅದೇನೂ ಗೊತ್ತಿಲ್ಲ.

6-00 P.M.

ಇನ್ನು ಪಿ.ಡಬ್ಲ್ಯು.ಡಿ. ವಿಷಯ, ಮಾನ್ಯ ಶ್ರೀ ವಾಗಾವಿಯವರು ನನ್ನ ಪರಮ ಮಿತ್ರರು. ಸಿರಗುಪ್ಪ ಬ್ರಿಡ್ಜ್ ಪ್ರಾರಂಭಮಾಡಿ ಮೂರು ವರ್ಷಗಳಾದರೂ ಅದು ಇನ್ನೂ ಮುಗಿಯಲಿಲ್ಲ. ಇವರು ಅದನ್ನು ಮುಗಿಸುವುದಿಲ್ಲ. ಅಲ್ಲಿ ರಸ್ತೆ ಮಾಡಿಸಿಲ್ಲ. ಅದನ್ನು ಮಾಡಲು ಇನ್ನೆಷ್ಟು ತಿಂಗಳು ಆಗುತ್ತದೋ ಗೊತ್ತಿಲ್ಲ.

(ಶ್ರೀ ಕೆ. ಎಚ್. ಪಾಟೀಲ್)

ಇನ್ನು ನಮ್ಮ ದನಗಳ ಮಂತ್ರಿಗಳ ವಿಷಯ. ಅವರು ಇನ್ನೂ ಬೆಳೆಯುವವರು. ಇವತ್ತು ಡೆಪ್ಯುಟಿ ಆಗಿದ್ದಾರೆ. ನಾಳೆ ಮಿನಿಸ್ಟರ್ ಆಗುವವರು. ಅವರಿಗೂ ಮತ್ತು ಚೀಫ್ ಮಿನಿಸ್ಟರಿಗೂ ಹೊಂದಾಣಿಕೆ ಜಾಸ್ತಿ. ಕ್ಯಾಟಲ್ ಫೀಡಿಂಗ್ ಬಗ್ಗೆ ಒಂದು ನೋಟಿಫಿಕೇಷನ್ ಬಂತು. ಯಾರು ಸಪ್ಲೈ ಮಾಡುತ್ತಿದ್ದಾರೆಂದರೆ, ಅವರೇ ಟೆಂಡರ್ ಕರೆದು ಆದಮೇಲೆ ಹುಲ್ಕೋಟಿ ಕ್ಯಾಟಲ್ ಫೀಡಿಂಗ್ ಕೋಆಪರೇಟಿವ್ ಸೊಸೈಟಿ ರಜಿಸ್ಟರ್ ಆಯಿತು ಅದು ಕೊನೆಯಲ್ಲಿ ತಾನಾಗಿಯೇ ನಿಂತಿತು. 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಮೆಷಿನರಿ ತಂದು ಅದರ ಪ್ರಾರಂಭೋತ್ಸವ ಮಾನ್ಯ ಶ್ರೀ ಪುಟ್ಟಸ್ವಾಮಿಯವರಿಂದ ಆಯಿತು. ಈ ಸೊಸೈಟಿಗೆ ಆ ಟೆಂಡರನ್ನು ಕೊಡುತ್ತೇವೆಂದು ಹೇಳಿ, ಇವರಡನ್ನು ಬಿಟ್ಟು ಕೃಷ್ಣಾ ಫ್ಲೋರ್ ಮಿಲ್ ಅವರಿಗೆ ಕೊಟ್ಟರು. ಮಾನ್ಯ ಶ್ರೀ ಶಂಕರರಾಯರು ಅಲ್ಲಿಯೂ ಇರುತ್ತಾರೆ, ಇಲ್ಲಿಯೂ ಇರುತ್ತಾರೆ. ಅವರಿಂದಲೇ ಇದೆಲ್ಲಾ ಹೀಗೆ ನಡೆಯುತ್ತಿದೆ. ಆದ್ದರಿಂದ ಇದನ್ನು ಎನ್‌ಕ್ವೈರಿ ಮಾಡಿ ಎಂಬುದಾಗಿ ನಾನು ಮುಖ್ಯ ಮಂತ್ರಿಗಳಿಗೆ ಬರೆದೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರಿಂದ ಕೇವಲ ಮೂರು ದಿವಸಗಳೊಳಗೆ ಆಕ್‌ನಾಲೆಡ್ಜ್‌ಮೆಂಟ್ ಬಂತು. ಇದರಿಂದ ಇದಕ್ಕಿಂತಲೂ ಹೆಚ್ಚಿನ ಭ್ರಷ್ಟಾಚಾರ ವಿಲ್ಲವೆಂದು ನಾನು ಹೇಳುತ್ತೇನೆ, ಇದನ್ನು ವಿಚಾರಮಾಡಬೇಕು. ಇವತ್ತು ಕ್ಯಾಟಲ್ ಡೆವಲಪ್‌ಮೆಂಟ್ ಇಲಾಖೆಗಳಲ್ಲಿ ನೌಕರರು ಯಾರು ಎಂದರೆ ಇವರಿಗೆ ಸಂಬಂಧಪಟ್ಟವರೇ. ಇದರ ಬಗ್ಗೆ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಏನೂ ಮಾಡಲಿಲ್ಲ.

ಇವತ್ತು ತಾಲ್ಲೂಕುಗಳಲ್ಲಿ ಸರಿಯಾದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಿಲ್ಲ. ಅದರ ಬಗ್ಗೆ ಸರಿಯಾದಂಥ ನೋಟಿಫಿಕೇಷನ್ ಕೂಡ ಇಲ್ಲ. ಅಲ್ಲಿರುವ ನೌಕರರ ಮೇಲೆ ಬೊಟ್ಟು ಇಟ್ಟು ಏಕೆ ಸಸ್‌ಪೆಂಡ್ ಮಾಡಬಾರದೆಂದು ಅಲ್ಲಿರತಕ್ಕ ಅಧಿಕಾರಿಗಳು ಕೇಳುತ್ತಾರೆ.

ಇನ್ನು ಸ್ಕೀಮ್ಸ್‌ಗಳ ಸಲುವಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರಸರ್ಕಾರದಿಂದ ಪಡೆಯುತ್ತಿದ್ದಾರೆ. ಇವರು ಏನು ಸ್ಕೀಮ್ಸ್ ಮಾಡಿದ್ದಾರೆ? ಮಾನ್ಯ ಶ್ರೀ ಕೌಜಲಗಿಯವರು ಅನೇಕ ಕಮಿಟಿಗಳಲ್ಲಿ ಎಂ.ಎಲ್.ಎ.ಗಳನ್ನು ಸದಸ್ಯರನ್ನಾಗಿ ಹಾಕಿದ್ದೇನೆಂದು ಹೇಳಿದರು. ಆದರೆ ಯಾವಾಗ ಎಂ.ಎಲ್.ಎ.ಗಳು ಊರಿನಲ್ಲಿರುವುದಿಲ್ಲವೋ ಆಗ ಮೀಟಿಂಗ್ ಕರೆಯುವ ಅಧಿಕಾರಿಗಳನ್ನು ಹಾಕಿದ್ದಾರೆ. ತಮ್ಮ ಕಡೆಗೆ ಕೈ ಎತ್ತುವವರನ್ನೇ ಜಾಸ್ತಿ ಹಾಕಿರುತ್ತಾರೆ. ಇಲ್ಲಿ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಮಾಡಿದ ಹಾಗೆ ಇರುತ್ತದೆ. ಮಾನ್ಯ ಶ್ರೀ ಸಿದ್ಧವೀರಪ್ಪನವರದೇ ಇಲ್ಲಿ ಕೇಳುವುದು. ಅವರೊಬ್ಬರದೇ ಮಾತು. ಆದ್ದರಿಂದ ಅಂತಹ ಕಮಿಟಿಗಳಲ್ಲಿ ಇನ್ನುಮುಂದೆ ನಿಮ್ಮಲ್ಲಿ ನಮ್ಮಲ್ಲಿ ಪ್ರೊಪೋರ್ಷನೇಟಾಗಿ ಎಂ.ಎಲ್.ಎ. ಗಳನ್ನು ಹಾಕಬೇಕು. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಾಗಾವಿಯರು ಪಿ ಡಬ್ಲ್ಯು. ಡಿ. ಉಪಮಂತ್ರಿಯಾಗಿರುವಾಗಲೇ ಗದಗ್ ತಾಲ್ಲೂಕಿನೊಳಗೆ ಅಂಟೂರ್—ಬುತೂರ್ ರೋಡಿನ ಪ್ರಾರಂಭೋತ್ಸವವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದರು. ಇವರಲ್ಲಿ ಕೆಲವರು ಸತ್ಕಾರ್ಯಗಳನ್ನು ಮಾಡಿರುವವರೂ ಇದ್ದಾರೆ. 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ರಸ್ತೆ ಕಟ್ಟಿಸಿಕೊಡಿ ಎಂದು ಹೇಳಿದರೆ, ಎರಡು ತಿಂಗಳುಗಳಾದರೂ ಮಾಡಿಲ್ಲ. ಸುಮಾರು 4 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮಾನ್ಯ ಶ್ರೀ ಎಚ್. ಎಂ. ಚನ್ನಬಸಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಕೆಲವು ರಸ್ತೆಗಳ ಕೆಲಸಗಳನ್ನು ಮಾಡಿಸಬೇಕೆಂದು ಒಂದು ಆರ್ಡರ್ ಮಾಡಿದ್ದರು. ಅದರ ಪೈಕಿ 4 ಮೈಲ ರಸ್ತೆ ಕೆಲಸ ಕೂಡ ಮುಗಿಯಲಿಲ್ಲ. ಇವರ ಹಣೆಯ ಬರಹದಲ್ಲಿರುವ ಹಾಗೆ ಎಲ್ಲಿ ರಸ್ತೆ ಚೆನ್ನಾಗಿ ಇರುತ್ತದೋ ಅಲ್ಲಿ ಪುನಃ ರಿಪೇರಿ ಮಾಡುವುದಕ್ಕೆಂದು ಹಣವನ್ನು ತೆಗೆದುಕೊಂಡು ಅದನ್ನು ಚುನಾವಣೆಗೆ ಬಳಸುತ್ತಿದ್ದಾರೆ. ನಿಮ್ಮ ಪಕ್ಷದ ಪರವಾಗಿ ಚುನಾವಣೆಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಎಂಬುದು ನನಗೆ ಗೊತ್ತು. ಪಿ.ಡಬ್ಲ್ಯು.ಡಿ. ಇಲಾಖೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಆಗಬೇಕೇ ಹೊರತು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಆಗಬಾರದು. ಹಣ ವ್ಯಥಾ ವೇಸ್ಟ್ ಆಗಬಾರದು. ಶ್ರೀಮತಿ ಇಂದಿರಾ ಗಾಂಧಿಯವರು ಕಹಳೆ ಊದಿದಂತೆ ನಮ್ಮ ರಾಜ್ಯದ ಬೊಕ್ಕಸದ ಹಣ ಸದ್ವಿನಿಯೋಗವಾಗಬೇಕು, ಅನೇಕ ರಸ್ತೆ ಕೆಲಸಕಾರ್ಯಗಳು ಗದಗ್‌ನಲ್ಲಿ ಆಗಲಿಲ್ಲ. ಕೊಳಚೆ ಪ್ರದೇಶಗಳು ಅಭಿವೃದ್ಧಿ ಯಾಗಲಿಲ್ಲ. ಸುಮಾರು 4 ವರ್ಷಗಳಿಂದಲೂ ಹಣವನ್ನು ಈ ಬಾಬಿಗೆ ಮಂಜೂರು ಮಾಡಿದ್ದರೂ ಅನೇಕ ಕೆಲಸಕಾರ್ಯಗಳು ಜರೂರಾಗಿ ಆಗಿಲ್ಲ. ನಿಮಗೆ ಹೆಸರು ಏನಾದರೂ ಚಲೋ ಬಂದಿದೆಯೇ? ಹಾಗಿಲ್ಲದಿದ್ದರೆ ಇಲ್ಲಿಯತನಕ ಏಕೆ ಕೂತಿದ್ದೀರಿ? ಈ ರೀತಿಯಾಗಿ ನಾನು ಅವರನ್ನು ಕೇಳುತ್ತೇನೆ. ಗದಗ್ ತಾಲ್ಲೂಕಿನ ಜನತೆ ನನ್ನನ್ನು ವಿರೋಧ ಸದಸ್ಯನನ್ನಾಗಿ ಆರಿಸಿದ್ದಾರೆ. ಸರ್ಕಾರದಲ್ಲಿ ವಿರೋಧವನ್ನು ಕಟ್ಟತಕ್ಕ ವ್ಯಕ್ತಿಯನ್ನಾಗಿಯೂ

ಆರಿಸಿದ್ದಾರೆ. ಇವತ್ತಿನ ದಿವಸ ಅಂತಹವರಿಗೆ ದ್ರೋಹ ಮಾಡಿದ್ದಾರೆ. ನನಗೆ ಬೆಂಬಲ ಕೊಟ್ಟವರಿಗೆ ಬೇಕಾದಂಥ ಸೌಕರ್ಯಗಳು ಸಿಗಬಾರದು, ನನಗೆ ಬೆಂಬಲರಾದಂಥ ಜನರಿಗೆ ಇಲ್ಲದ ಸಲ್ಲದ ರೀತಿಯಲ್ಲಿ ರಾಕ್ಷಸೀ ಕೃತ್ಯಗಳು ನಡೆದಿವೆ. ಈ ಸರ್ಕಾರದ ವೃತ್ತಿಗೆ ಪೂರ್ಣವಿರಾಮ ಕೊಡಬೇಕು. ಸರಿಯಾಗಿ ರಾಜ್ಯ ಆಳತಕ್ಕ ಜನಗಳನ್ನು ಈ ದೇಶದಲ್ಲಿ ತರಬೇಕು. ನಿಮ್ಮ ರಾಕ್ಷಸೀ ಕೃತ್ಯಗಳನ್ನು ನಾನು ತಡೆಯುತ್ತೇನೆ. ಇದರಿಂದ ನಿಮಗೂ ಮತ್ತು ನಿಮ್ಮ ಮಕ್ಕಳಿಗೂ ಒಳ್ಳೆಯದಾಗುವುದಿಲ್ಲ. ಬಹಳ ಎಚ್ಚರಿಕೆಯಿಂದ ಮುಂದೆ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಇನ್ನು ಮುಂದೆ ತಾವು ಬಡ್ಜೆಟ್ಟನ್ನು ಅಂಗೀಕಾರಕ್ಕಾಗಿ ಇಲ್ಲಿ ಮಂಡಿಸುವಾಗ ನಿಮಗೆ ಒಳ್ಳೆಯ ನೀತಿ ಇರಬೇಕು. ಬಹಳ ಸೌಜನ್ಯ ರೀತಿಯಲ್ಲಿ ಜನತೆಗೆ ಒಳ್ಳೆಯದಾಗುವ ಹಾಗೆ ಮತ್ತು ಕಲ್ಯಾಣವಾಗುವಂಥ ಕಾರ್ಯಗಳು ದೇಶದಲ್ಲಿ ಮುಂದೆ ನಡೆಯಲಿ ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at 1 P.M.

The House adjourned at Six of the Clock to meet again at One of the Clock on Wednesday, the 17th March 1971.